ಪುಸ್ತಕ ಪ್ರಪಂಚ

ಸಂಪುಟ ೪೪ ಜೂನ್ ೧೯೬೪ ಸಂಚಿಕೆ ೧೦



ವಿಷಯ ಸೂಚಿಕೆ

ಮುಖಚಿತ್ರ: ಬಿಡಾರಮ್ ಕೃಷ್ಣಪ್ಪ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಜೂನ್ ೧, ೧೯೯೪ ಸಂಚಿಕೆ ೧೦

ಬಿಡಾರಮ್ ಕೃಷ್ಣಪ್ಪನವರು (೧೮೬೬-೧೯೩೧)

ಗಂಡು ಸಂಗೀತವೆಂದರೆ ಗಂಡಸು ಹಾಡಿದ ಸಂಗೀತವಲ್ಲ! ಪರಂಪರಾಗತ ಸಂಗೀತಶಾಸ್ತ್ರದ ಭದ್ರ ಬುನಾದಿ ಇದರ ಜಿಗಿಹಲಗೆ (launching pad). ಗುರು ಮುಖೇನ (ಕ್ಯಾಸೆಟ್ ಮೂಲಕ ಅಲ್ಲ) ಕಲಿಯುವುದು ಕ್ರಮ. ನಿರಂತರ ಅಭ್ಯಾಸ, ಗ್ರಂಥಾಧ್ಯಯನ, ಜೀವನಾವಲೋಕನ ಮತ್ತು ಸಮಕಾಲೀನ ಸಂಗೀತ ಪ್ರಮಾಣ ಕಡ್ಡಾಯವಾಗಿ ಅನುಸರಿಸಬೇಕಾದ ವಿಧಿಗಳು. ಇದೊಂದು ತಪಸ್ಸು. ಏಕಾಗ್ರತೆಯ ಅಗ್ನಿಪರೀಕ್ಷೆ. ಹೀಗೆ ಮನೋಧರ್ಮ-ಶಾರೀರ-ಭರವಸೆ ಸಂಲಗ್ನಗೊಂಡಾತ ಯುವ ಕಲಾವಿದ—ಜಿಗಿಹಲಗೆಯಿಂದ ಅಜ್ಞಾತ ಔನ್ನತ್ಯಗಳಿಗೆ ನೆಗೆಯಲು ಸಿದ್ಧನಿರುವ ಸಂಗೀತಗಗನಯಾನಿ. ಬಿಡಾರಮ್ ಕೃಷ್ಣಪ್ಪನವರ ಜೀವನ ಸಾಧನ ಸಿದ್ಧಿಗಳು ನಿಜ ಸಂಗೀತಗಾರನ ಗುಣಲಕ್ಷಣಗಳಿಗೆ ನಿದರ್ಶನಗಳು. ಇಲ್ಲಿ ಎಲ್ಲಿಯೂ ಒಳದಾರಿಯಿಲ್ಲ; ಚಕ್ಕನಿ ರಾಜಮಾರ್ಗಮುಲುಂಡಗ ಸಂದುಲ ದೂರನೇಲೇ? ಓ ಮನಸಾ! (ಎಲೈ ಮನಸ್ಸೇ! ಒಳ್ಳೆಯ ರಾಜಮಾರ್ಗವಿರುವಾಗ ಸಂದುಗೊಂದುಗಳಲ್ಲಿ ಏಕೆ ಹೋಗುವೆ?) ಸಂತ ತ್ಯಾಗರಾಜರ ಈ ದೈವಿಕ ಚರಣಕ್ಕೆ ಪ್ರತ್ಯಕ್ಷ ನಿದರ್ಶನ ಬಿಡಾರಮ್ ಕೃಷ್ಣಪ್ಪನವರು.

ಕೃಷ್ಣಪ್ಪನವರು ಹುಟ್ಟಿದ್ದು (೧೮೬೬) ದಕ್ಷಿಣ ಕನ್ನಡ ಜಿಲ್ಲೆಯ ಒಂದು ಬಡ ಕುಟುಂಬದಲ್ಲಿ. ಬಡತನದ ಬೇಗೆಯಲ್ಲಿ ಬಾಲ್ಯದಿಂದಲೇ ಬೆಂದರು. ತಂದೆ ವಿಶ್ವನಾಥಯ್ಯ ನಾಟಕ ಮಂಡಳಿ ಒಂದರಲ್ಲಿ ಪಾತ್ರ ವಹಿಸುತ್ತಿದ್ದರು. ಯಾವುದೇ ವಿದ್ಯೆಯಲ್ಲಿ ಪ್ರೌಢಿಮೆ ಗಳಿಸಲು ಅಗತ್ಯವಾದ ಬುದ್ಧಿಶಕ್ತಿ, ಮನೋಧರ್ಮ ಎಲ್ಲ ಇದ್ದರೂ, ಅನೇಕ ಮಂದಿಗೆ ಕಲಿಯಲು ಅಗತ್ಯವಾದ

ವಾತಾವರಣವಿಲ್ಲದೆ, ಕಲಿಸುವವರಿಲ್ಲದೆ, ಅಂತಹ ಕ್ಷೇತ್ರದ ಸಂಪರ್ಕವೇ ಬರದೆ ಬೇರೆ ಏನೋ ಕಸುಬನ್ನು ಆಶ್ರಯಿಸಿ ಜೀವನ ಸಾಗಿಸಿ ಹಾಗೆಯೇ ಕೊನೆ ಮುಟ್ಟುತ್ತಾರೆ. ಆದರೆ ಕೃಷ್ಣಪ್ಪನವರ ವಿಷಯದಲ್ಲಿ ಹೀಗಾಗಲಿಲ್ಲ. ಸಂದರ್ಭ ಗಳು ಒಂದಕ್ಕೊಂದು ಹೊಂದಿಕೆಯಾಗಿ ಒದಗಿ ಬಂದು ಅವರ ಶಕ್ತಿ, ಸಾಮರ್ಥ್ಯಗಳು ಪ್ರಕಾಶಕ್ಕೆ ಬರಲು ಅವಕಾಶ ಕಲ್ಪಿಸಿದುವು. ಇಂತಹ ಒಂದು ಮೊದಲ ಸಂದರ್ಭ ಕೃಷ್ಣಪ್ಪನವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಕಲೆಗಳ ರಾಜಧಾನಿಯಾಗಿದ್ದ ಮೈಸೂರಿಗೆ ಒಯ್ದು ತಂದಿತು.

ಕಲಾಭಿಮಾನಿಗಳಾಗಿದ್ದ ಮೈಸೂರು ಮಹಾರಾಜರು ಒಮ್ಮೆ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟರು. ಆಗ ಅಲ್ಲಿ ಹೆಸರಾಂತ ನಾಟಕ ಮಂಡಳಿಯಾಗಿದ್ದ ದಶಾವತಾರ ನಾಟಕ ಮಂಡಳಿಯನ್ನು ಮೈಸೂರಿಗೆ ಬಂದು ಪ್ರದರ್ಶನ ನೀಡಲು ಕರೆದರು. ಅದು ಮೈಸೂರಿಗೆ ಬಂದಾಗ ಅದರಲ್ಲಿ ಪಾತ್ರ ವಹಿಸುತ್ತಿದ್ದ ವಿಶ್ವನಾಥಯ್ಯನವರೂ ಬಂದರು. ಜತೆಯಲ್ಲಿ ತಮ್ಮ ಹೆಂಡತಿ ಮತ್ತು ಮಕ್ಕಳಾದ ಸುಬ್ಬರಾಯ ಮತ್ತು ಕೃಷ್ಣಪ್ಪ ಅವರನ್ನೂ ಕರೆತಂದಿದ್ದರು. ಹೀಗೆ ಬಂದ ಸಂಸಾರ ಮೈಸೂರಿನಲ್ಲೇ ನೆಲೆ ನಿಂತಿತು. ಬಂದ ನಾಟಕ ಮಂಡಳಿ ಮೈಸೂರು ಶಿವರಾಮಪೇಟೆಯ ಮನೆ ಒಂದರಲ್ಲಿ ಬಿಡಾರ ಮಾಡಿದರು. ಮುಂದೆ ಇದೇ ಮನೆಯಲ್ಲಿಯೇ ವಾಸ ಮುಂದುವರೆಸಿದ್ದರಿಂದ ಅವರಿಗೆ ಬಿಡಾರ ದವರು ಎಂದೇ ಅಡ್ಡ ಹೆಸರಾಯಿತು. ಅದು ಮುಂದೆ 'ಬಿಡಾರಮ್' ಎಂದು ಆಗಿ ಕೃಷ್ಣಪ್ಪನವರ ಹೆಸರಿನ ಒಂದು ಭಾಗವೇ ಆಯಿತು.

ಮುಂದೆ ವಿಶ್ವನಾಥಯ್ಯನವರಿಗೆ ವಯಸ್ಸಾಯಿತು. ಅವರ ಹೆಂಡತಿ ಮಕ್ಕಳು ದಿನವಹಿ ಊಟಕ್ಕೂ ಗತಿ ಇಲ್ಲದೆ ಬಡತನದ ಸುಳಿಗೆ ಸಿಕ್ಕಿದರು. ಆ ವೇಳೆಗೆ ಆಗಲೇ ಕೆಲವು ಹಾಡುಗಳನ್ನು ತಮ್ಮ ಸೊಗಸಾದ ಕಂಠದಲ್ಲಿ ಹಾಡಲು ಕಲಿತಿದ್ದ ಸುಬ್ಬರಾಯ ಮತ್ತು ಕೃಷ್ಣಪ್ಪ ಅದನ್ನೇ ಬಳಸಿಕೊಂಡು ಭಿಕ್ಷೆ ಬೇಡಿದರು. ಹಾಗೆ ಒಂದು ದಿನ ಏನೂ ಸಿಗದೆ ಬರಿಗೈ ಆದಾಗ ಭಿಕ್ಷೆ ಬೇಡುತ್ತಾ ಬೇಡುತ್ತಾ, ಕೃಷ್ಣಪ್ಪ ಅರಮನೆ ಕೋಟೆ ಬಾಗಿಲನ್ನು ತಲುಪಿ ಹಸುವಿನಿಂದ ಬಳಲಿ ಅಲ್ಲೇ ಬಿದ್ದರು. ಅದನ್ನು ನೋಡಿದ ಮಹನೀಯರೊಬ್ಬರು ಕರುಣೆ ಯಿಂದ ಕಾಸು ನೀಡಿದ್ದಷ್ಟೇ ಅಲ್ಲದೆ, ಹುಡುಗನಿಗೆ ಸಂಗೀತ ಕಲಿಯಲು ಅಗತ್ಯ ವಾದ, ಶಾರೀರ, ಮನೋಧರ್ಮ ಇರುವುದನ್ನು ಕಂಡರು. ಅಂದಿನಿಂದ ಪ್ರತಿ ದಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ನಿಂತು ಹಾಡುತ್ತಾ ಭಿಕ್ಷೆ ಬೇಡುತ್ತಿದ್ದ ಕೃಷ್ಣಪ್ಪ ಒಂದು ದಿನ ಸಂಗೀತ ಕಲಿಯುವಲ್ಲಿ ಅಭಿರುಚಿ ಇದ್ದ

ಮೈಸೂರಿನ ಕಲಾಭಿಮಾನಿ ಸಾಹುಕಾರ್ ಶಿವಪ್ಪನವರ ಕಣ್ಣಿಗೆ ಬಿದ್ದರು. ಹುಡುಗನಲ್ಲಿದ್ದ ಸಂಗೀತ ಕಲಿಯಲು ಅಗತ್ಯವಾದ ಗುಣಗಳನ್ನು ಗುರುತಿಸಿ ಕಂಡ ಸಾಹುಕಾರರು ಕರೂರು ರಾಮಸ್ವಾಮಿಗಳೆಂಬ ಹಿರಿಯ ಸಂಗೀತಗಾರರ ಬಳಿಗೆ ಬಾಲಕನನ್ನು ತಂದು ಒಪ್ಪಿಸಿ ಅವನಿಗೆ ಸಂಗೀತಾಭ್ಯಾಸ ಮಾಡಿಸ ಬೇಕೆಂದು ಹೇಳಿ ಅವಕ್ಕೆ ಅಗತ್ಯವಾದ ಹಣವನ್ನೂ ಮುಂಗಡವಾಗಿಯೇ ನೀಡಿದರು. ಹೀಗೆ ಮೇಲಿಂದ ಮೇಲೆ ಅನಿರೀಕ್ಷಿತವಾಗಿ ಒದಗಿದ ಸಂದರ್ಭಗಳಿಂದ ಕೃಷ್ಣಪ್ಪ ಕರ್ಣಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ಒಳಹೊಕ್ಕರು. ಮುಂದೆ ಕಾದಿದ್ದುದು ಕೃಷ್ಣಪ್ಪನವರ ಕಲಿಕೆ ಮತ್ತು ಸಾಧನೆ. ಇವರಿಗೆ ಕರ್ಣಾಟಕ ಶಾಸ್ತ್ರೀಯ ಸಂಗೀತದಲ್ಲಿ ಸಿದ್ಧಿ ಪಡೆಯಲು ಅಗತ್ಯವಾದ ಶಾರೀರ, ಮನಸ್ಸು, ಬುದ್ಧಿಶಕ್ತಿ ಎಲ್ಲಾ ಇದ್ದುವು. ಗುರುಗಳಿಂದ ಪಾಠ, ಶ್ರದ್ಧೆಯ ಕಲಿಕೆ, ಹಠದಿಂದ ಸಾಧನೆ, ಇವುಗಳಿಂದ ಕೃಷ್ಣಪ್ಪನವರು ಒಳ್ಳೆಯ ಸಂಗೀತಗಾರ ರಾದರು. ಮೈಸೂರು ಮಹಾರಾಜರ ಆಶ್ರಯವನ್ನೂ ಪಡೆದರು. ಹಿರಿಯ ಸಂಗೀತಗಾರರಾದ ಕರಿಗಿರಿರಾಯರು ಮತ್ತು ವೀಣೆ ಶೇಷಣ್ಣನವರ ಬಳಿಯೂ ಕಲಿಕೆ ಮುಂದುವರೆಯಿತು. ಹೀಗೆ ದಕ್ಷಿಣಕನ್ನಡ ಜಿಲ್ಲೆಯಿಂದ ತಾವು ಮೈಸೂರಿಗೆ ಬಂದಿದ್ದು, ಭಿಕ್ಷೆ ಬೇಡುತ್ತಾ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ತಲುಪಿದ್ದು, ಸಾಹುಕಾರರ ದೃಷ್ಟಿಗೆ ಬಿದ್ದಿದ್ದು, ಸಾಹು ಕಾರರು ಅವರನ್ನು ರಾಮಸ್ವಾಮಿಯವರ ಬಳಿ ಸಂಗೀತಕ್ಕೆ ಸೇರಿಸಿದ್ದು, ಮಹಾರಾಜರ ಕೃಪೆಗೆ ಪಾತ್ರರಾದದ್ದು, ಎಲ್ಲಾ ಮಾರುತಿಯ ಶ್ರೀರಾಮ ಚಂದ್ರನ ಅನುಗ್ರಹವೆಂದೇ ಅವರು ಜೀವನಪೂರ್ತಿ ನಂಬಿದ್ದರು.

ಇನ್ನು ಮುಂದಿನ ನಡನಳಿಕೆ ಎಂದರೆ ಕೃಷ್ಣಪ್ಪನವರು, ತಾವು ಕಲಿಕೆ, ಸಾಧನೆ ಗಳಿಂದ ಪಡೆದಿದ್ದ ಕಲೆಯನ್ನು ಕಲಾಭಿಮಾನಿಗಳ ಎದುರು ಪ್ರದರ್ಶಿಸುವುದು. ಕೃಷ್ಣಪ್ಪನವರು ವಿದ್ಯೆಯಲ್ಲಿ ಇನ್ನೊಬ್ಬರಿಗೆ ಸೋಲುವವರಲ್ಲ. ಆ ಕಾಲದಲ್ಲಿ ತಮಿಳುನಾಡು ಅದರಲ್ಲೂ ತಂಜಾವೂರು ಜಿಲ್ಲೆ ಕರ್ಣಾಟಕಶಾಸ್ತ್ರೀಯ ಸಂಗೀತದ ನೆಲೆಯಾಗಿದ್ದಿತು. ತಮ್ಮ ಹಿರಿಮೆಯನ್ನು ಸ್ಥಾಪಿಸಲು ಯಾವ ಸಂಗೀತಗಾರರಾಗಲೀ ತಂಜಾವೂರಿನಲ್ಲಿ ಕಛೇರಿ ಮಾಡಿ ಸೈ ಎನ್ನಿಸಿಕೊಳ್ಳ ಬೇಕಾಗಿದ್ದಿತು. ಕೆಲವು ಕ್ಲಿಷ್ಟ ಅಂಶಗಳನ್ನು ಉಪಯೋಗಿಸಿ ಸಂಗೀತಗಾರರನ್ನು ಕೀಟಲೆಮಾಡಿ, ಹೀಗೆಳೆಯುವ ಸ್ವಭಾವವೂ ಅಲ್ಲಿಯ ಕೆಲವು ಸಂಗೀತಗಾರರಿಗೆ ಇದ್ದಿತು. ಇಂತಹ ಭದ್ರ ಕೋಟೆಯ ಒಳಹೊಕ್ಕು ತಮ್ಮ ಪ್ರತಿಭೆಯನ್ನು ಸ್ಥಾಪಿಸಿದರು, ಕೃಷ್ಣಪ್ಪ.

ಆಗಿನ ಕಾಲದಲ್ಲಿ ಶಾಸ್ತ್ರೀಯ ಸಂಗೀತಗಾರರಲ್ಲಿ ಅನೇಕರಿಗೆ ಪುರಂದರದಾಸರು, ಕನಕದಾಸರು ರಚಿಸಿದ ಕನ್ನಡದ ರಚನೆಗಳ ಪರಿಚಯವೇ ಇರಲಿಲ್ಲ. ತಮಿಳು ನಾಡಿನ ಸಂಗೀತಗಾರರುಗಳಿಗಂತೂ ಅನೇಕರಿಗೆ ಹೆಸರೇ ಗೊತ್ತಿರಲಿಲ್ಲವೇನೋ? ಎಲ್ಲರೂ ಸಾಮಾನ್ಯವಾಗಿ ತ್ಯಾಗರಾಜರ ಕೃತಿಗಳನ್ನೇ ಪ್ರಧಾನವಾಗಿ ಕಛೇರಿ ಗಳಲ್ಲಿ ಹಾಡುತ್ತಿದ್ದರು. ಅಂತಹ ಕಾಲದಲ್ಲಿ ಪುರಂದರದಾಸರ ರಚನೆಗಳನ್ನು ಕಛೇರಿಗಳಲ್ಲಿ ಹಾಡುವುದನ್ನು ಪ್ರಾರಂಭಿಸಿದ್ದು ಕೃಷ್ಣಪ್ಪನವರೇ. ಕನ್ನಡನಾಡಿ ನಲ್ಲಷ್ಟೇ ಅಲ್ಲದೆ, ತಮಿಳುನಾಡು, ಕೇರಳಗಳಲ್ಲೂ ಸಹ ಸಂಗೀತ ಕಛೇರಿಗಳಲ್ಲಿ ಕನ್ನಡದ ರಚನೆಗಳನ್ನು ಹಾಡಿ ಪ್ರಚಾರಕ್ಕೆ ತಂದು ಕನ್ನಡಕ್ಕೆ ಸ್ಥಾನ ಬರುವಂತೆ ಮಾಡಿದವರು ಕೃಷ್ಣಪ್ಪನವರೇ.

ಹಿರಿಯ ಸಂಗೀತ ಶಾಸ್ತ್ರಜ್ಞರಾಗಿದ್ದ ಶ್ರೀ ರಾಳಪಲ್ಲಿ ಅನಂತಕೃಷ್ಣಶರ್ಮ ರವರು ಬಿಡಾರಮ್ ಕೃಷ್ಣಪ್ಪನವರ ಸಂಗೀತದ ಬಗ್ಗೆ ಹೀಗೆನ್ನುತ್ತಾರೆ: "ಅವರು ಸಂಗೀತದಲ್ಲಿ ಹಠಯೋಗಿಗಳು. ಸಪ್ತಸ್ವರಗಳ ಪ್ರಕೃತಿ ವಿಕೃತಿಗಳನ್ನು ಶುದ್ಧ ವಾಗಿ ಶಾರೀರದಲ್ಲಿ ಹಿಡಿದು ತೋರಿಸುವುದು, ಎತ್ತಿದ ನಡೆ ಎಂಥದ್ದಾದರೂ, ಕೊನೆಯವರೆಗೆ ಎಳೆತ, ಓಟ, ಇಲ್ಲದೆ ಖಚಿತವಾಗಿ ನಿರ್ವಾಹ ಮಾಡುವುದು, ಇವು ಅವರ ಪರಾಯಣಗಳು. ....ಸಾಹಿತ್ಯದ ಅಕ್ಷರಗಳ ಸ್ವರಗಳು–ಅಕಾರ, ಇಕಾರ ಮುಂತಾದುವು—ಯಾವ ಯಾವ ಸ್ಥಾನಗಳಲ್ಲಿ ಹುಟ್ಟುವುವೋ ಆಯಾ ಎಡೆಗಳಲ್ಲೇ ನಾದವನ್ನು ಹೊರಡಿಸಬೇಕೆಂದು ಅವರು ಪಟ್ಟಷ್ಟು ಕಷ್ಟ, ಸಾಧಿಸಿದ ಸಿದ್ಧಿ ನಾನು ಕಂಡ ಯಾವ ಹಾಡಿಕೆಯ ವಿದ್ವಾಂಸರಲ್ಲೂ ಕಂಡಿಲ್ಲ. ನಾದಕ್ಕಾಗಿ ಶಬ್ದವನ್ನು ಚಪ್ಪರಿಸಿ, ಅಗಿದುನುಂಗಿ, ತಿರುಗುಮುರುಗು ಮಾಡಿ ತೇಲಿಸುವುದೇ ಸಾಮಾನ್ಯವಾಗಿ ಈಚಿನವರ ಸಂಪ್ರದಾಯ. ಅಕ್ಷರಗಳ ಸಹಜವಾದ, ಸ್ಪಷ್ಟ ವಾದ ಉಚ್ಚಾರಣೆ, ಕೃಷ್ಣಪ್ಪನವರ ವಿಶಿಷ್ಟ ಗುಣಗಳಲ್ಲೊಂದು. ಅವರ ನಾದ ನಾಭಿಯಿಂದ ಧಾರಾಳವಾಗಿ ಹುಟ್ಟಿ ಹೊರಟು ಆಯಾ ಅಕ್ಷರಗಳ ಸ್ಥಾನಗಳಲ್ಲಿ ಸ್ಫುರಿಸುತ್ತಿತ್ತು. ರಾಳಪಲ್ಲಿಯವರು ಮುಂದುವರೆದು ಹೀಗೆ ಹೇಳುತ್ತಾರೆ: "ಹಾಡಿಕೆಯಲ್ಲಿ ಚಿಲ್ಲರೆ, ಚಿತಾರಿ ಕೆಲಸಗಳು ಇರಲಿಲ್ಲ. ಮುಚ್ಚುಮರೆಯ ಮಾರ್ಗಗಳು ಇರಲಿಲ್ಲ. ಬಹಿರಂಗವಾದ ಮುಖಾ-ಮುಖಿ ಹೋರಾಟವೇ ಹೊರತು ಪಕ್ಕ ತಿವಿತಗಳು ಇರಲಿಲ್ಲ. ಕೈಯಲ್ಲಿ ನಿಖರವಾದ ತಾಳಲಯವನ್ನು ನಡೆಸುತ್ತಾ, ಶಾರೀರದಲ್ಲಿ ಯಾವ ಕಟ್ಟುಪಾಡೂ ಇಲ್ಲದ ನಡೆಯಲ್ಲಿ ನಾದ ಶಬ್ದ ಭಾವಗಳನ್ನು ತೋರಿಸುತ್ತಾ, ತಾಳ ಪ್ರಮಾಣವನ್ನು ನಿರ್ವಹಿಸುವ ಧೀರ ಕೃತ್ಯವು ಅವರಿಗೆ ಲೀಲಾಜಾಲ....ಕೈಲಾಗದ ಕೆಲಸಕ್ಕೆ ಕೈಹಾಕಲಿಲ್ಲ. ಹಾಕಿದ ಕೆಲಸದಲ್ಲಿ ಬ್ರಹ್ಮನಿಗೂ ಹೆದರಲಿಲ್ಲ."

ಸಂಗೀತದಲ್ಲಿ ಕೃಷ್ಣಪ್ಪನವರ ಬಗ್ಗೆ ಇನ್ನು ಹೇಳಬೇಕಾದ ಅಗತ್ಯ ಇಲ್ಲ. ಮೈಸೂರು ಮಹಾರಾಜರಿಂದ "ಗಾನ ವಿಶಾರದ" ಎಂಬ ಬಿರುದನ್ನೂ ಪಡೆದು ಮಾನ್ಯತೆ ಗಳಿಸಿದರು.

ಸಂಗೀತಗಾರರ ಕಲಾಜೀವನದಲ್ಲಿ ಮೂರು ಸಾಧನೆಗಳು ಸೇರಿದರೇ ಅದು ಪರಿಪೂರ್ಣ. ಕಲಿಕೆ ಮತ್ತು ಸಾಧನೆಯಿಂದ ಕಲಿಯುವುದು, ಕಲಿತಿದ್ದನ್ನು ಶ್ರೋತೃಗಳ ಮುಂದೆ ಹಾಡಿ ಅವರನ್ನು ರಂಜಿಸುವುದು ಮತ್ತು ಶಿಷ್ಯರಿಗೆ ಹೇಳಿ ಕೊಡುವುದು. ಕೃಷ್ಣಪ್ಪನವರು ಮೂರನ್ನೂ ಯಶಸ್ವಿಯಾಗಿ ನಡೆಸಿದರು. ಸಂಗೀತಗಾರರಾಗಿ ಅವರ ಜೀವನ ವೈಭವಪೂರ್ಣ. ಅಪಾರ ಯಶಸ್ಸು, ಗೌರವ ಮತ್ತು ಹಿರಿಯ ಸ್ಥಾನ ಗಳಿಸಿದರು. ಲಕ್ಷಾಂತರ ಜನ ಶ್ರೋತೃಗಳಿಗೆ ಸಂಗೀತದ ರಸಾನುಭವ, ಆನಂದ ಉಂಟುಮಾಡಿದರು. ಹಣವನ್ನೂ ಗಳಿಸಿ ತುಂಬು ಜೀವನ ವನ್ನೂ ನಡೆಸಿದರು. ಅನೇಕ ಜನ ಶಿಷ್ಯರನ್ನೂ ತಯಾರು ಮಾಡಿದರು.

ಅನೇಕ ಜನ ಸಂಗೀತಗಾರರು ತಮ್ಮ ಜೀವತ ಕಾಲದಲ್ಲಿ ಒಳ್ಳೆಯ ಸಂಗೀತ ಗಾರರಾಗಿ ಮೆರೆದು ಕಣ್ಮರೆಯಾಗುತ್ತಾರೆ. ತಮ್ಮ ವಿದ್ಯೆಯನ್ನು ಮುಂದಿನ ಪೀಳಿಗೆಯವರೂ ಉದ್ಧರಿಸಿ ನಡೆಯುವಂತೆ ಮಾಡುವುದಿಲ್ಲ, ಒಳ್ಳೆಯ ಶಿಷ್ಯರನ್ನು ತಯಾರು ಮಾಡಲು ಅವರಿಗೆ ಬರುವುದಿಲ್ಲ. ಅವರು ಕಣ್ಮರೆಯಾಗಿ ಕಾಲಾನು ಕ್ರಮದಲ್ಲಿ ಅವರ ಸಂಗೀತದ ರಸಾನುಭವ ಪಡೆದವರೂ ಕಣ್ಮರೆಯಾದ ಮೇಲೆ ಅಂತಹ ಸಂಗೀತಗಾರರ ಹೆಸರೂ ಜನರ ಸ್ಮರಣೆಯಿಂದ ಅಳಿಸಿಹೋಗುತ್ತದೆ. ಶಿಷ್ಯರಿಗೆ ವಿದ್ಯೆ ಕಲಿಸಬೇಕಾದರೆ, ಗುರುಗಳಲ್ಲಿ ಅವನ ಮೇಲೆ ಪ್ರೀತಿ ವಿಶ್ವಾಸ ಗಳಿರಬೇಕು. ವಿದ್ಯೆ ಚೆನ್ನಾಗಿ ಕಲಿಸಬೇಕೆಂಬ ಮನಸ್ಸಿರಬೇಕು. ಹೀಗೆ ಶಿಷ್ಯರನ್ನು ತಯಾರು ಮಾಡುವ ವಿದ್ಯೆಯಲ್ಲೂ ಕೃಷ್ಣಪ್ಪನವರು ಪರಿಣತರಿದ್ದರು. ಅನೇಕ ಜನ ಶಿಷ್ಯರನ್ನು ತಯಾರು ಮಾಡಿದರು. ಅವರ ಶಿಷ್ಯರ ಪೀಳಿಗೆಯಲ್ಲಿ ಮೂರು ತಲೆಮಾರುಗಳು ಕಳೆದರೂ ಇನ್ನೂ ಒಳ್ಳೆಯ ಸಂಗೀತಗಾರರು ಬರುತ್ತಿದ್ದಾರೆ ಎನ್ನುವುದು ಇದಕ್ಕೆ ಸಾಕ್ಷಿ. ಕೃಷ್ಣಪ್ಪನವರ ಶಿಷ್ಯರುಗಳ ಪೈಕಿ ಅತ್ಯುನ್ನತ ಶಿಖರಕ್ಕೇರಿದವರು ವಿಖ್ಯಾತ ಪಿಟೀಲು ವಿದ್ವಾಂಸರಾಗಿದ್ದ ಟಿ. ಚೌಡಯ್ಯ ನವರು. ಮುಂದೆ ಮೂರು ದಶಕಗಳಿಗೂ ಹೆಚ್ಚು ಕಾಲ ಸಂಗೀತ ಪ್ರಪಂಚದಲ್ಲಿ ಅದ್ವಿತೀಯ ಪಿಟೀಲು ಪಕ್ಕವಾದ್ಯಗಾರರಾಗಿ ಮೆರೆದು ಕೃಷ್ಣಪ್ಪನವರ ಹೆಸರು ಎಲ್ಲೆಡೆ ಜನರ ಮನಸ್ಸಿನಲ್ಲಿ ಉಳಿಯುವಂತೆ ಮಾಡಿದವರು ಟಿ. ಚೌಡಯ್ಯನವರು.

ಕೃಷ್ಣಪ್ಪನವರಿಗೆ ತಮ್ಮ ಜೀವನ ಗತಿ ನಡೆದು ಬಂದಿದ್ದೆಲ್ಲಾ ಶ್ರೀರಾಮನ ಕೃಪೆಯಿಂದ ಎಂದು ಸಂಪೂರ್ಣ ನಂಬಿಕೆ. ಸಂಗೀತ ಕಛೇರಿಗಳಲ್ಲೂ ವಿಶೇಷವಾಗಿ

ತ್ಯಾಗರಾಜರ ಕೃತಿಗಳನ್ನು ಹಾಡಿ ಅವರ ಮನಸ್ಸಿನಲ್ಲಿ ಶ್ರೀರಾಮನ ಮೇಲೆ ಭಕ್ತಿ ದೃಢವಾಗಿ ಬೇರೂರಿದ್ದಿತು. ತಮಗೆ ಕಷ್ಟ ಬಂದಾಗಲೆಲ್ಲಾ ಶ್ರೀರಾಮನನ್ನು, ಮಾರುತಿಯನ್ನು ನೆನೆಯುತ್ತಿದ್ದರು. ಪರಿಹಾರ ಬೇಡುತ್ತಿದ್ದರು. ಪ್ರತಿ ವರ್ಷ ಶ್ರೀರಾಮ ನವಮೀ ಸಂದರ್ಭದಲ್ಲಿ ಸಂಗೀತೋತ್ಸವ, ಶ್ರೀರಾಮ ಪಟ್ಟಾಭಿಷೇಕ ನಡೆಸುತ್ತಿದ್ದರು. ಆದರೆ ಇಂತಹ ಉತ್ಸವ ನಡೆಸಲು ಸರಿಯಾದ ಜಾಗ ಇಲ್ಲವಲ್ಲಾ ಎಂಬುದು ಅವರ ಚಿಂತೆಯಾಗಿದ್ದಿತು. ಇದಕ್ಕಾಗಿ ಮಂದಿರ ಒಂದನ್ನು ಮೈಸೂರಿನಲ್ಲಿ ಸ್ಥಾಪಿಸಲು ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಶ್ರಮಿಸಿದರು. ಶ್ರೀಮಂತರ ಬಳಿ ಬೇಡಿ ವಂತಿಕೆ ಪಡೆದರು. ತಮ್ಮ ಕಛೇರಿಗಳನ್ನು ಅನೇಕ ಕಡೆ ಮಾಡಿ ಮಂದಿರ ನಿರ್ಮಾಣಕ್ಕೆ ಹಣ ಸಂಗ್ರಹಿಸಿದರು. ಇಂತಹ ಕಛೇರಿಗಳಿಗೆ ಶ್ರೀ ಟಿ. ಚೌಡಯ್ಯನವರೂ ಮತ್ತು ಶ್ರೀ ಟಿ. ಪುಟ್ಟಸ್ವಾಮಯ್ಯನವರೂ ಪಿಟೀಲು ಮತ್ತು ಮೃದಂಗ ಪಕ್ಕವಾದ್ಯ ನುಡಿಸಿ ಸಹಕರಿಸಿದರು. ಕೃಷ್ಣಪ್ಪನವರ ಅಪಾರ ಶ್ರಮದ ಫಲವಾಗಿ ಮೈಸೂರಿನಲ್ಲಿ ಸುಂದರವಾದ "ಶ್ರೀ ಪ್ರಸನ್ನ ಸೀತಾರಾಮ ಮಂದಿರ" ೧೯೩೯ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಂಗೀತಕ್ಕೆಂದೇ ನಿರ್ಮಿಸಲಾದ ಈ ಮಂದಿರದ ಸಭಾಗೃಹದ ಸೌಂದರ್ಯ ಸರಿಸಾಟಿ ಇಲ್ಲದ್ದು. ಸಭಾಂಗಣದ ಗೋಡೆಗಳನ್ನಲಂಕರಿಸಿರುವ ವರ್ಣ ಚಿತ್ರಗಳು ಅಪೂರ್ವ ಕಲಾಕೃತಿಗಳು, ಮುಖ್ಯ ವರ್ಣ ಚಿತ್ರವಾದ ಶ್ರೀರಾಮನ ಚಿತ್ರವಂತೂ ನೂರಾರು ಜನ ಸಂಗೀತಗಾರರಿಗೆ ಸ್ಫೂರ್ತಿ ಮತ್ತು ತಲ್ಲೀನತೆಯನ್ನು ನೀಡಿದೆ. ಕೃಷ್ಣಪ್ಪನವರ ಕೋರಿಕೆಯಂತೆ ರಾಮಮಂದಿರಕ್ಕಾಗಿ ಲಕ್ಷ್ಮಣ ಕೃಷ್ಣ ಎಂಬ ವಿಖ್ಯಾತ ಕಲಾವಿದರು ಬರೆದ ಚಿತ್ರವಿದು. ಈ ಮಂದಿರ ಮುಂದೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ನಿಂತು, ಶಾಸ್ತ್ರೀಯ ಸಂಗೀತ ಪ್ರಪಂಚದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಕೃಷ್ಣಪ್ಪನವರು ಕಾಲವಾಗಿ ೬೨ ವರ್ಷಗಳು ಕಳೆದರೂ ಸಂಸ್ಥೆ ಇಂದಿಗೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿರುವುದು ಕೃಷ್ಣಪ್ಪನವರ ತ್ಯಾಗಕ್ಕೆ ಸಾಕ್ಷಿ.

ಕೃಷ್ಣಪ್ಪನವರು ಮೈಸೂರಿಗೆ, ಅರ್ಥಾತ್ ಸಂಗೀತ ಪ್ರಪಂಚಕ್ಕೆ ಎರಡು ಕೊಡುಗೆಗಳನ್ನು ನೀಡಿದರು. ಒಂದು ಟಿ. ಚೌಡಯ್ಯನವರು. ಮತ್ತೊಂದು ಶ್ರೀ ಪ್ರಸನ್ನ ಸೀತಾರಾಮ ಮಂದಿರ. ಇದು ವಿಖ್ಯಾತ ವಿಮರ್ಶಕರೊಬ್ಬರ ಹೇಳಿಕೆ. ಕೃಷ್ಣಪ್ಪನವರಿಗೆ ಮತ್ತೊಂದು ಆಸೆಯೂ ಇದ್ದಿತು. ಮೈಸೂರಿನಲ್ಲಿ ಸಂಗೀತ ಪಾಠಶಾಲೆ ಒಂದನ್ನು ಸ್ಥಾಪಿಸಿ ಅದರಲ್ಲಿ ಸಂಗೀತ ಕಲಿಯಲು ಇಷ್ಟ

ಪಡುವವರು ಎಷ್ಟೇ ಬಡವರಿರಲಿ ಅವರಿಗೆ ಸಂಗೀತ ಕಲಿಯಲು ಅವಕಾಶ ಮಾಡಿಕೊಡಬೇಕೆಂಬುದು ಅವರ ಕನಸು. ಇದಕ್ಕಾಗಿ ವಂತಿಕೆ ಸಂಗ್ರಹಿಸಿ, ತಾವೂ ಕಛೇರಿಗಳನ್ನು ಮಾಡಿ ಹಣ ಸಂಗ್ರಹಿಸಿ ನಿವೇಶನ ಒಂದನ್ನು ಕೊಂಡು ಕೊಂಡರು. ರಾಮಮಂದಿರ ಕಟ್ಟಿ ಮುಗಿಸುವ ಹೊತ್ತಿಗೆ ಹಣಕಾಸಿನ ಮುಗ್ಗಟ್ಟಿಗೂ ಸಿಕ್ಕಿದ ಕೃಷ್ಣಪ್ಪನವರಿಗೆ ತಮ್ಮ ಇನ್ನೊಂದು ಕನಸನ್ನು ನನಸಾಗಿಸಲು ಆಗಲಿಲ್ಲ. ಅವರ ಆರೋಗ್ಯವೂ ಕೆಟ್ಟಿತು. ಅದರಿಂದ ಕೆಲವು ಜನ ಧರ್ಮದರ್ಶಿಗಳನ್ನು ನೇಮಿಸಿ ಸಂಗೀತ ಪಾಠಶಾಲೆ ಸ್ಥಾಪಿಸಿ ಕಟ್ಟಡ ಕಟ್ಟಲು ನಿಯೋಜಿಸಿದರು.

ಕೃಷ್ಣಪ್ಪನವರು ತಮ್ಮ ಬಾಲ್ಯವನ್ನು ಕಷ್ಟ ಕಾರ್ಪಣ್ಯಗಳಿಂದಲೇ ಆರಂಭಿಸಿ ಮುಂದೆ ವಿದ್ಯೆ, ಯಶಸ್ಸು, ಕೀರ್ತಿ, ಹಣ, ಎಲ್ಲಾ ಸಂಪಾದಿಸಿ, ತುಂಬು ಜೀವನ ವನ್ನೂ ನಡೆಸಿ, ತಮ್ಮ ಕನಸಿನ ಸಂಸ್ಥೆ ಕಟ್ಟಲು ಅಪಾರ ತ್ಯಾಗಮಾಡಿ ಕೊನೆ ಗಾಲಕ್ಕೆ ಮತ್ತೆ ಹಣದ ಮುಗ್ಗಟ್ಟಿಗೆ ಸಿಕ್ಕಿದರು. ೧೯೩೧ರಲ್ಲಿ ಇಹಲೋಕ ವನ್ನು ಬಿಟ್ಟರು. ಕೃಷ್ಣಪ್ಪನವರು ಕಲಿತ ವಿದ್ಯೆಯಿಂದ ಜನರನ್ನು ತಣಿಸಿದರು. ಶಿಷ್ಯರನ್ನು ತಯಾರು ಮಾಡಿದರು. ಶ್ರಮಪಟ್ಟು ರಾಮಮಂದಿರ ಕಟ್ಟಿಸಿದರು. ಸಮಾಜದಿಂದ ತಾವು ಏನನ್ನು ಪಡೆದರೋ ಅದನ್ನು ಬೇರೆ ರೂಪದಲ್ಲಿ ಸಮಾಜಕ್ಕೆ ಕೊಡುಗೆಯಾಗಿ ಕೊಟ್ಟು ನಡೆದರು. ತಮಗಾಗಿ ಏನನ್ನೂ ಉಳಿಸಿಟ್ಟುಕೊಳ್ಳಲಿಲ್ಲ.

ಇಂತಹವರೇ ಪ್ರಾತಃ ಸ್ಮರಣೀಯರು. ಬೆಳಿಗ್ಗೆ ಹಾಸಿಗೆಯ ಮೇಲೆ ಎದ್ದು ಕುಳಿತಾಗ ಇಂತಹ ಮಹನೀಯರ ಹೆಸರನ್ನು ನೆನೆದರೆ ನಾವೂ ಅವರಂತೆ ಒಳ್ಳೆಯ ದಾರಿಯಲ್ಲಿ ನಡೆಯುವುದು ಸಾಧ್ಯ. ಅವರ ಸಾಧನೆ, ತ್ಯಾಗಬುದ್ಧಿ ನಮಗೆ ದಿನವೂ ಆದರ್ಶ.

ಕೆ. ಎಸ್. ಕೇಶವಮೂರ್ತಿ

ವೈರವಿಲ್ಲದ ಪ್ರತೀಕಾರ, ಪ್ರತ್ಯಾಸೆಯಿಲ್ಲದ ಉಪಕಾರ ಇವೆರಡೂ ದೈವೀಜೀವನದ ಸಂಕೇತಗಳಾಗಿವೆ.

—ಗೀತಾ

ಆರ್ಥರ್‌ವ್ರೋಲ್ಡಿನ ಗೋಪ್ಯಜೀವನ

ಕೆಲವು ವೇಳೆ ದೇವರಲ್ಲಿ ಮೊರೆ ಸಾರ್ಥಕವಾಗುತ್ತೆ; "ದಾಸನ ಮಾಡಿಕೊ ಎನ್ನ!" ಏಕಾಗ್ರತೆ, ನಿಷ್ಠೆ, ಶ್ರದ್ಧೆ ಬೆರೆತಾಗ ಯಾವುದು ತಾನೇ ಅಸಾಧ್ಯ!

ಮನೋರೋಗ ವೈದ್ಯ ಹೇಳುತ್ತಿದ್ದುದನ್ನು ಸಿಡ್ ಮತ್ತು ಫೀಬ್ ವ್ರೋಲ್ಡ್ ಅಲ್ಲಾಡದೆ ಕುಳಿತು ಕೇಳಿದರು. ಅವರ ಪಕ್ಕದಲ್ಲಿ ಕುಳಿತ್ತಿದ್ದ ಕೆಂಚುಕೂದಲಿನ ೫ ವರ್ಷದ ಹುಡುಗನ ಕಡೆ ನೋಡುತ್ತ ಅವನು ಹೇಳಿದ. "ಇದು ನಿಮಗೆ ತಡೆಯಲು ಕಷ್ಟವಾದ ವಿಷಯ ಅಂತ ನನಗೆ ಗೊತ್ತು. ಆದರೆ ನಿಮ್ಮ ಮಗ ಬಹು ದುರ್ಬಲ ಮನಸ್ಕ. ಅವನು ತನ್ನ ಸುತ್ತದ ಸ್ಥಳ ಹಾಗೂ ವಿದ್ಯಮಾನಗಳ ವಿಷಯಗಳನ್ನು ಅತ್ಯಲ್ಪವಾಗಿ ತಿಳಿಯ ಬಲ್ಲ. ಬಹುಶಃ ಅವನ ಜೀವಮಾನವೆಲ್ಲ ವಿಶೇಷ ಎಚ್ಚರಿಕೆ ರೀತಿಯಲ್ಲಿ ನೋಡಿಕೊಳ್ಳಬೇಕಾಗಬಹುದು."

ತೋಟದ ಮಾಲಿ ಸಿಡ್ ಮತ್ತು ಗೃಹಿಣಿ ಫೀಬ್ ಹುಡುಗನ ಕೈಹಿಡಿದು ಸದ್ದಿಲ್ಲದೆ ವೈದ್ಯನ ಆಫೀಸನ್ನು ಬಿಟ್ಟು ತೆರಳಿದರು. ಸಿಯಾಟಲ್ಲಿನಲ್ಲಿದ್ದ ತಮ್ಮ ಮನೆಗೆ ವಾಪಸ್ಸು ಬಂದಾಗ ಫೀಬ್ "ಏನು ಮಾಡೋಣ, ಹೇಗೆ ತಡೆದುಕೊಳ್ಳುವುದು" ಎಂದು ಗಂಡನನ್ನು ಕೇಳಿದಳು. ಅದು ೧೯೬೭ರ ಮಾಗಿಕಾಲದ ಒಂದು ದಿನ.

ಅವರ ಮೂರು ಮಕ್ಕಳ ಪೈಕಿ ಆರ್ಥರ್ ಕಿರಿಯವ. ಯಾವಾಗಲೂ ನಗುತ್ತಿರುವವನೇ, ಅಳುವುದು ತೀರ ಅಪರೂಪ; ಮಾತಾಡುವುದೂ ತೀರ ವಿರಳ ಎನ್ನುವುದನ್ನು ಬಿಟ್ಟರೆ ಎಲ್ಲ ಸಂತೋಷಚಿತ್ತ ಹುಡುಗರಂತೆಯೇ ಕಾಣುತ್ತಿದ್ದ. ಇನ್ನು ಅವನು ಯೋಚನೆ ಅನಿಸಿಕೆಗಳನ್ನು ತನ್ನೊಡನೆ, ಹಾಗೆಯೇ ತಾನು ಅವನೊಡನೆ ಎಂದೂ ಹೇಳಿಕೊಳ್ಳಲಾಗದು ಎನ್ನುವುದನ್ನು ಗ್ರಹಿಸಿ ಫೀಬಿಗೆ ಅತ್ಯಂತ ದುಗುಡವಾಯಿತು. ನಿಜವಾಗಿ ಅವನು ತಾಯಿಯನ್ನು ಅಗಲಿದ ಕುರಿಮರಿಯಂತೆ ಮುಗ್ಧನಾಗಿದ್ದ.

"ಅವನಿಗೆ ವಿಶೇಷ ಗಮನ ಕೊಡಬೇಕಾಗುತ್ತದೆ. ಕೊನೆಗೆ ಅವನನ್ನು ಮನೋರೋಗ ಸಂಸ್ಥೆಗೆ ಸೇರಿಸಲೇಬೇಕಾಗುತ್ತೇನೋ" ಎಂದು ಮನೋರೋಗ

೧೯೯೩ರ ಸೆಪ್ಟೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಸುಸೇನ್ನ್ ಚಾಸಿನ್ ಅವರ "ದಿ ಸೀಕ್ರೆಟ್ ಲೈಫ್ ಆಫ್ ಆರ್ಥರ್‌ವ್ರೋಲ್ಡ್" ಎಂಬ ಲೇಖನದ ಸರಳಾನುವಾದ.

ವೈದ್ಯ ಹೇಳಿದ್ದನು. ಸಿಡ್ ಹಾಗೂ ಫೀಬ್ ಈ ಸಂಭವವನ್ನು ಎಂದೂ ಯೋಚಿಸಲಾರದವರಾಗಿದ್ದರು. ಬಹುಶಃ ಆರ್ಥರ್ ಸಂಸಾರದವರ ಪ್ರೀತಿಯನ್ನು ಎಂದೂ ಪೂರ್ಣವಾಗಿ ತಿಳಿಯಲಾರ ಹಾಗೂ ಮರುಪ್ರೀತಿಯನ್ನೂ ಪೂರ್ಣ ವಾಗಿ ತೋರಲಾರ. ಆದರೆ ಪ್ರೀತಿಗೆ, ಅಂದರೆ ನೈಜವಾದ ಪ್ರೀತಿಗೆ, ಪ್ರತಿಕ್ರಿಯೆ ಅವಶ್ಯಕವೆ? ಮಧ್ಯಾಹ್ನದ ನಿಶ್ಶಬ್ದ ವೇಳೆ ಫೀಬ್ ತಲೆ ಎತ್ತಿ ತನ್ನ ಸಣ್ಣ ಮಗನನ್ನು ನೋಡಿಕೊಳ್ಳುವಂತೆಯೂ ತನಗೆ ಆದ ನಿರಾಸೆಯನ್ನು ತಡೆದು ಕೊಳ್ಳಲು ಆಗುವಂತೆಯೂ ಕರುಣಿಸಬೇಕೆಂದು ದೇವರನ್ನು ಪ್ರಾರ್ಥನೆಮಾಡಿ ಕೊಂಡಳು.

ತುಂಬು ಜೀವನ

ಆರ್ಥರ್ ಎಲ್ಲರಂತೆ ಮಾಮೂಲಾಗಿ ಜೀವಿಸುವಂತೆ ಮಾಡಬೇಕು ಎಂದು ನಿರ್ಧರಿಸಿ ವೋಲ್ಪರುಗಳು ಅವನನ್ನು ಪ್ರತಿ ಭಾನುವಾರ ಚರ್ಚಿಗೆ ಕರೆದು ಕೊಂಡು ಹೋಗುತ್ತಿದ್ದರು ಹಾಗೂ ಮಂದಬುದ್ಧಿ ಮಕ್ಕಳ ಹಗಲ ಪಾಠ ಶಾಲೆಗೆ ಸೇರಿಸಿದರು. ಅಲ್ಲಿ ಅಧ್ಯಾಪಕರು ಅವನಿಗೆ ಸನ್ನೆ ಭಾಷೆಯನ್ನು ತಿಳಿಯಲು ಆಡಲು ಕಲಿಸುವುದಕ್ಕೆ ಪ್ರಯತ್ನಿಸಿದರು. ಕೆಲ ಸಮಯ ಆರ್ಥರ್ ಒಂದೊಂದು ಶಬ್ದ ಆಡುತ್ತಿದ್ದ ಹಾಗೂ ಸನ್ನೆ ಭಾಷೆಯನ್ನು ಬಳಸುತ್ತಿದ್ದ; ಆದರೆ ಅವು ಅರ್ಥಹೀನವಾಗುತ್ತಿದ್ದವು. ಪುಸ್ತಕಗಳನ್ನೂ ನೋಡುತ್ತಿದ್ದ; ಆದರೆ ಅವುಗಳಲ್ಲಿದ್ದ ಚಿತ್ರಗಳನ್ನು ನೋಡುವಷ್ಟು ಕಾಲ ಮಾತ್ರ.

ಈ ಸಂಸಾರಕ್ಕೆ ಸಣ್ಣ ವಿಷಯಗಳೂ ಆಶಾಭಂಗವಾದುವು. ಆರ್ಥರಿಗೆ ಊಟಕ್ಕೆ ಮೇಜು ವಗೈರೆ ಹಾಕಿ ಅಣಿಮಾಡುವ ಕೆಲಸ ವಹಿಸಿದ್ದರು. ಅನೇಕ ವೇಳೆ ಅವನು ಒಂದು ಕುರ್ಚಿಯ ಮುಂದೆ ನಿಂತು ತಟ್ಟೆ ಪಾತ್ರೆಗಳನ್ನು ಹಿಡಿದು ನೋಡುತ್ತ ನಿಂತು ಬಿಡುತ್ತಿದ್ದ. ಹೊರಕ್ಕೆ ಕರೆದುಕೊಂಡು ಹೋದಾಗ ಅನೇಕ ಸಲ ಕಾರಿನಿಂದ ಇಳಿಯುತ್ತಲೇ ಇರಲಿಲ್ಲ. ಜನರು ಗುಂಪಿನಲ್ಲಿ ಒಬ್ಬರೊಡ ನೊಬ್ಬರು ಮಾತಾಡುವಾಗ ಅವನು ಅಲ್ಲಿ ಇಲ್ಲವೇ ಇಲ್ಲವೇನೋ ಎನ್ನುವಂತೆ ಮಾತಾಡಿಕೊಳ್ಳುತ್ತಿದ್ದರು.

ವರ್ಷಗಳು ಕಳೆದಂತೆ ಫೀಬ್ ಹಾಗೂ ಸಂಸಾರವೆಲ್ಲ ಆರ್ಥರಿನ ಮಿತಿಯನ್ನು ಸಹಿಸಿಕೊಳ್ಳುವವರಾದರು. ಆಗಾಗ ಅವನು ಅವರೆಲ್ಲ ಆಶ್ಚರ್ಯ ಪಡುವಂತೆ ನಡೆದುಕೊಳ್ಳುತ್ತಿದ್ದನು. ಒಂದು ಸಲ ಅಂಗಡಿಯಲ್ಲಿ ಮುಗುಳು ನಗೆಯಿಂದ ಒಬ್ಬ ಯುವತಿ ಬಳಿ ಹೋಗಿ ಕುಲುಕುವಂತೆ ಕೈ ಚಾಚಿದನು. ಫೀಬ್ ಅವನನ್ನು

ಎಳೆದುಕೊಂಡು ಆರ್ಥರ್, ಗುರುತಿಲ್ಲದವರ ಬಳಿಗೆ ಹೋಗಿ ಕೈಕುಲುಕಬಾರದು" ಎಂದಳು. ಆದರೆ ಆ ತರುಣ "ಆರ್ಥರ್ ನನಗೆ ಗೊತ್ತು; ನಾನು ಅವನಿಗೆ ಬೋಧಿಸುತ್ತಿದ್ದೆ" ಎಂದಳು. ಆರ್ಥರಿನ ಮಾತು ಅರ್ಥವಾಗುತ್ತಿದ್ದ ಸಮಯ ಗಳಲ್ಲಿ ಒಂದೆಂದರೆ ಅವನ ಪ್ರೀತಿಪಾತ್ರ ಆಂಟಿ ಸ್ವಾನಿ ಎಂಬಾಕೆ ಅವರಲ್ಲಿಗೆ ಬರುವ ಸಮಯ. ಆಗ ರೂಮಿನ ಕಿಟಕಿಯಲ್ಲಿ ತಲೆಹಾಕಿ "ಆಂಟಿ ಸ್ವಾನಿ ಬಂದಳೆ" ಎಂದು ಕೇಳುತ್ತಿದ್ದ. ಸ್ವಾನಿ ಹಠಾತ್ ಮೃತಳಾದಾಗ ಫೀಬ್ ಆರ್ಥರಿನ ಎದುರಿಗೆ ತುಂಬಾ ಕಣ್ಣೀರು ಹಾಕಿದಳು. ಆಗ ಆರ್ಥರಿಗೆ ೧೩ ವರ್ಷ. ಅವಳು ಕಣ್ಣುಗಳನ್ನು ಒರಿಸಿಕೊಂಡು "ಸ್ವಾನಿ ಸತ್ತುಹೋದಳು" ಎಂದು ಅವನಿಗೆ ಹೇಳಿದಳು. ಆರ್ಥರಿನ ನೀಲಿಕಣ್ಣುಗಳು ಜ್ವಲಿಸಿದವು. "ಸ್ವಾನಿ ಸತ್ತು ಹೋದಳೆ?" ಎಂದು ಕೇಳಿದ. ಆಶ್ಚರ್ಯದಿಂದ ಫೀಬ್ ಆರ್ಥರಿನ ಮುಖ ನೋಡಿದಳು. ಅಲ್ಲೇನೂ ವ್ಯಕ್ತವಾಗುವಂತಿರಲಿಲ್ಲ. ಆದರೂ ಆರ್ಥರಿಗೆ ತನ್ನ ದುಃಖ ಅರ್ಥವಾಯಿತೆಂದು ತಿಳಿದುಕೊಂಡಳು; ಏಕೆಂದರೆ ಮುಂದೆಂದೂ ಆರ್ಥರ್ "ಸ್ವಾನಿ ಬಂದಳೆ ಎಂದು ಕೇಳಲಿಲ್ಲ.

ಇಂಥ ಕ್ಷಣಗಳು ಸಿಡ್ ಹಾಗೂ ಫೀಬ್‌ಗೆ ತನ್ನ ಮಗ ಬದುಕನ್ನು ಎಲ್ಲರಂತೆ ಬಾಳಲಿ ಎಂಬ ನಿರ್ಧಾರ ಎಂದಿಗಿಂತ ಬಲಗೊಳ್ಳುವಂತೆ ಮಾಡಿದವು. ಅವರು ಅವನಿಗೆ ಡಿಸ್ನಿಲ್ಯಾಂಡನ್ನು ತೋರಿಸಿದರು. ಒಂದು ಸೈಕಲ್ಲನ್ನು ತೆಗೆದು ಕೊಟ್ಟರು. ಅವರ ಮಗಳು ವಿಕ್ಕಿ ಸ್ನೇಹಿತರ ಜೊತೆ ಈಜಲು ಹೋಗಬೇಕು ಎಂದಾಗ ಆರ್ಥರನ್ನೂ ಕರೆದುಕೊಂಡು ಹೋಗು ಎಂದು ಫೀಬ್‌ಗೆ ಹೇಳು ತ್ತಿದ್ದಳು. "ಅವನನ್ನು ಯಾಕೆ ನಾನು ಕರೆದುಕೋಡು ಹೋಗಬೇಕು. ಜನ ತಮ್ಮನ್ನೇ ನೋಡುವರು. ಅಲ್ಲದೆ ಆರ್ಥರ್ ನಾನು ಕರೆದುಕೊಂಡು ಹೋದರೂ ಬಿಟ್ಟರೂ ಲಕ್ಷಕ್ಕೆ ತೆಗೆದುಕೊಳ್ಳುವುದಿಲ್ಲ" ಎಂದು ವಿಕ್ಕಿ ಹೇಳಿದಾಗ ಫೀಬ್ "ಸರಸ್ಸಿಗೆ ಹೋಗಲು ನಿನಗೆ ಸಂತೋಷವಾಗುತ್ತಿದ್ದರೆ ಅವನಿಗೂ ಸಂತೋಷವಾಗಬಹುದು" ಎನ್ನುವಳು.

ನಿಗೂಢ ಪ್ರಯಾಣ

ಆರ್ಥರಿನ ಅನಿಸಿಕೆಗಳು ಮತ್ತು ಯೋಚನೆಗಳು ಅನೇಕವಾಗಿ ಗುಪ್ತವಾಗಿ ದ್ದರೂ ಆ ಸಂಸಾರಕ್ಕೆ ಒಂದು ವಿಷಯ ಖಾತರಿಯಾಗಿತ್ತು—ಆರ್ಥರಿಗೆ ಸಂಗೀತ ಎಂದರೆ ಇಷ್ಟ; ಅದರಲ್ಲೂ ಅವನ ತಾಯಿ ಪಿಯಾನೊ ನುಡಿಸುವುದು. ಆದ್ದರಿಂದ ಆರ್ಥರಿಗೆ ಪಿಯಾನೊ ಕಲಿಸುವುದಕ್ಕೆ ಏರ್ಪಾಡು ಮಾಡಿದರು.

ಕಲಿಸುವ ಜಾಗಕ್ಕೆ ಇವರು ಮನೆಯಿಂದ ಕಾರಿನಲ್ಲಿ ೧೦ ಮಿನಿಟುಗಳಲ್ಲಿ ಹೋಗ ಬಹುದಾಗಿತ್ತು. ವಿಕ್ಕಿಗೆ ಡ್ರೈವಿಂಗ್ ಲೈಸೆನ್ಸ್ ದೊರೆತ ಮೇಲೆ ಆಗಾಗ ಅವಳೇ ಅವನನ್ನು ವಾಪಸ್ಸು ಕರೆದುಕೊಂಡು ಬರುತ್ತಿದ್ದಳು. ಒಂದು ಸಲ ವಿಕ್ಕಿ ತಡವಾಗಿ ಬಂದು ಆರ್ಥರ್ ಕಾಯುತ್ತಿರುತ್ತಾನೇನೋ ಎಂದು ನೋಡಿದಳು. ಅವನು ಅಲ್ಲಿರಲಿಲ್ಲ. ಅವಳಿಗೆ ಗಾಬರಿಯಾಗಿ ಆ ರಸ್ತೆಯ ಆಚೀಚೆ ಡ್ರೈವ್ ಮಾಡುತ್ತ ಹುಡುಕಿದಳು. ಸಿಕ್ಕಲಿಲ್ಲ. ಅವನು ದಾರಿತಪ್ಪಿ ಯಾವುದೋ ತಿಳಿಯದ ಸ್ಥಳಕ್ಕೆ ಬಂದುಬಿಟ್ಟು, ಯಾರನ್ನಾದರೂ ದಾರಿಕೇಳುವುದಕ್ಕೂ ತಿಳಿಯದೆ ಹೋದರೆ ಏನುಗತಿ ಎಂದು ಅವಳಿಗೆ ಆತಂಕವಾಯಿತು. ಹೃದಯ ಡವಡವಗುಟ್ಟುತ್ತ ವಿಕ್ಕಿ ತನ್ನ ತಂದೆ ತಾಯಿಗಳಿಗೆ ವರ್ತಮಾನ ಕೊಡಲು ಮನೆಗೆ ಬಂದಳು. ಬಾಗಿಲನ್ನು ತಳ್ಳಿಕೊಂಡು ಒಳಕ್ಕೆ ಬಂದಾಗ ಆರ್ಥರ್ ಹಾಲನ್ನು ಕುಡಿಯುತ್ತ ಸ್ವಸ್ಥವಾಗಿ ಅಡುಗೆ ಮನೆಯಲ್ಲಿ ಕುಳಿತಿದ್ದುದು ಕಂಡಿತು. ಕಾರಿನಲ್ಲಿ ಓಡಾಡುತ್ತಿದ್ದಾಗ ಮಾತ್ರ ನೋಡಿದ್ದ ಆ ಬಳಸು ದಾರಿ ಯನ್ನು ಹೇಗೋ ಅವನು ಗುರುತಿಸಿದ್ದನು. ಅದು ಹೇಗೆಂದು ತಿಳಿದುಕೊಳ್ಳ ಬೇಕೆಂದು ಕುಟುಂಬದವರಿಗೆಲ್ಲ ಕುತೂಹಲ. ಆದರೆ ಅವರ ಪ್ರಶ್ನೆಗಳನ್ನು ಅವನ ಮಂದ ಬುದ್ಧಿ ಗ್ರಹಿಸುವ ಬಗೆ ಹೇಗೆ ಎಂಬುದು ಗೊತ್ತಾಗಲಿಲ್ಲ.

ಈಗ ಆರ್ಥರಿಗೆ ೧೮ ವರ್ಷ. ಎತ್ತರವಾಗಿ ತೆಳ್ಳಗೆ ಇದ್ದ. ತಲೆಕೂದಲು ಕಪ್ಪು. ಅವನ ನೀಲಿ ಕಣ್ಣುಗಳು ಎಲ್ಲವನ್ನೂ ಗ್ರಹಿಸುವಂತಿದ್ದರೂ ಅವನಿಗೆ ಏನೂ ಗೊತ್ತಾಗುತ್ತಿರಲಿಲ್ಲ. ಸ್ವಲ್ಪ ಸ್ವಾತಂತ್ರ್ಯ ಕೊಟ್ಟು ನೋಡೋಣವೆಂದು ಸಿಡ್ ಮತ್ತು ಫೀಬ್ ಅವನಿಗೆ ಒಂದು ಏರ್ಪಾಡು ಮಾಡಿದರು. ಕೆಲವು ವರ್ಷಗಳನಂತರ ಹುಟ್ಟು ನಿರ್ಬಲರಾದ ವ್ಯಕ್ತಿಗಳು ಕೆಲಸ ಮಾಡುವ ಒಂದು ಸಂಸ್ಥೆಯಲ್ಲಿ ಸೇರಿಸಿದರು. ಎಲೆಕ್ಟ್ರಾನಿಕ್ ಸಾಮಾನುಗಳ ಜೋಡಣೆ ಮಾಡು ವುದಕ್ಕೆ ಕೊಟ್ಟಿದ್ದ ಒಂದು ಉದ್ದವಾದ ಮೇಜಿನ ಮುಂದೆ ಇತರ ಕೆಲಸಗಾರ ರೊಡನೆಯೇ ಅವನೂ ಕುಳಿತುಕೊಳ್ಳುತ್ತಿದ್ದ. ಅಲ್ಲಿನ ಉಸ್ತುವಾರಿ ಅಧಿಕಾರಿ ಗಳು ದಯಾವಂತರು. ಆದರೆ ಆರ್ಥರಿಗೆ ಅವರು ಹೇಳಿದ್ದು ಒಂದೂ ಅರ್ಥ ವಾಗದೇ ಇದ್ದದ್ದರಿಂದ ಅವನಿಗೆ ಅವರ ಹಾಗೂ ಇತರರ ಸಂಪರ್ಕ ಕಡಿಮೆಯೇ ಆಗಿತ್ತು. ಮಾನಸಿಕ ದುರ್ಬಲರು ಇದ್ದ ಸಂಸ್ಥೆಯಲ್ಲೂ ಆರ್ಥರ್ ತನ್ನ ಲೋಕದಲ್ಲಿ ಏಕಾಂಗಿಯಾಗಿದ್ದ.

ವಾರಾಂತ್ಯದಲ್ಲಿ ಆಗಾಗ್ಗ ಆರ್ಥರ್ ಮನೆಗೆ ಭೇಟಿಕೊಡುತ್ತಿದ್ದ. ಆಗ ತಂದೆ ತಾಯಿಯರು ಏನಾದರೂ ಕೆಲಸಕ್ಕೆ ಹೊರಗೆ ಹೋದರೆ ಅವರ ಜೊತೆ

ಹೋಗುತ್ತಿದ್ದ, ಇಲ್ಲವೆ ಟಿ.ವಿ. ನೋಡುತ್ತ ಕಾಲ ಕಳೆಯುತ್ತಿದ್ದ. ಆದರೆ ಇದು ಲೆಕ್ಕವಿಲ್ಲದ ಗಂಟೆಗಳಷ್ಟು ಕಾಲ ಏನೂ ಸಾಧಿಸದ ದುಃಖಕರವಾದ ಬರಡು ಬಾಳು. ಕೆಲವು ವೇಳೆ ಅವನ ತಂದೆ ತಾಯಿಯರು ಅವನನ್ನು ಏನಾದರೂ ಮಾಡುವಂತೆ ಪುಸಲಾಯಿಸುತ್ತಿದ್ದರು. ಆಗ ಅವನು ಜಾಗ ಬಿಟ್ಟು ಅಲುಗಾಡುತ್ತಲೇ ಇರಲಿಲ್ಲ. ಆರ್ಥರಿಗೆ ಸುಖವಿಲ್ಲ ಅಂತ ಫೀಬಿಗೆ ತಿಳಿಯುವುದು; ಆದರೆ ಏನು ಮಾಡಬೇಕೆಂದು ಗೊತ್ತಾಗುತ್ತಿರಲಿಲ್ಲ.

ಪ್ರತಿಯೊಬ್ಬರೂ, ಡಾಕ್ಟರುಗಳು, ಉಪಾಧ್ಯಾಯರು, ಸಲಹೆಗಾರರು ಎಲ್ಲ ಅವನಿಗೆ ಏನು ಸಾಧ್ಯವೋ ಅದನ್ನೆಲ್ಲ ಸಾಧಿಸುವಂತೆ ಮಾಡಿದ್ದಾಗಿದೆ ಎಂದು ಹೇಳಿ ಬಹುಹಿಂದೆಯೇ ಅವನ ಕೈಬಿಟ್ಟಿದ್ದರು. ಒಂದು ದಿನ ಅಡುಗೆ ಕೋಣೆಯಲ್ಲಿ ಕುಳಿತಿದ್ದಾಗ ಫೀಬ್ ದೇವರು ತನ್ನ ದುಃಖ ಆಕಾಂಕ್ಷೆಗಳು ಮುಂದುವರಿಯದಂತೆ ಮಾಡಲಿ; ಆರ್ಥರ್ ತನ್ನ ಪಾಡಿಗೆ ತಾನು ಸುಖ-ಸಂತೋಷಗಳಿಂದಿದ್ದರೆ ಸಾಕು ಎಂದು ಪ್ರಾರ್ಥಿಸಿದಳು.

ಆರ್ಥರ್‌ಗೆ ೨೫ ವರ್ಷಗಳ ಮೇಲೆ ಆಗಿದ್ದಾಗ ಅವನು ಹೋಗುತ್ತಿದ್ದ ಕೆಲಸಾಗಾರಕ್ಕೆ ಕೆರೋಲ್‌ಲೂಹಿ ಕ್ರೇನ್ ಎಂಬ ಚುರುಕಾದ ತರುಣಿ ಕೆಲಸಗಾರರನ್ನು ನೋಡಿಕೊಳ್ಳುವ ಅಧಿಕಾರಿಣಿಯಾಗಿ ಬಂದಳು. ಅವಳಿಗೆ ಆರ್ಥರಿನ ನಿಶ್ಚೇತನ ಮುಖ ಭಾವಕ್ಕೆ ಏನೋ ಕಾರಣ ಇರಬೇಕು ಎನ್ನಿಸಿತು. ಊಟ ಮಾಡುತ್ತಿದ್ದಾಗ ಸಂಗೀತವೂ ಆಗುತ್ತಿದ್ದರೆ ಅವನು ತಲೆತೂಗುತ್ತಿದ್ದ. "ನರ್ತನ ನಿನಗೆ ಇಷ್ಟವೆ?" ಎಂದು ಕ್ರೇನ್ ಅವನ ಕೈಹಿಡಿದು ಕೇಳಿದಳು. ನಗುಮುಖನಾದ ಆರ್ಥರೂ ಆ ತರುಣಿಯೂ ಶೀಘ್ರದಲ್ಲೆ ಅಲ್ಲೆ ನರ್ತಿಸಲು ಪ್ರಾರಂಭಿಸಿದರು.

ಅದ್ಭುತ ಸಮಾಚಾರ:

ಒಂದು ತಿಂಗಳಷ್ಟು ದೀರ್ಘಸೂಟಿಯಿಂದ ೧೯೯೧ನೇ ಸೆಪ್ಟೆಂಬರಿನಲ್ಲಿ ಪೋಲ್ಡರು ದಂಪತಿಗಳು ವಾಪಸ್ಸು ಬಂದಮೇಲೆ ಒಂದು ದಿನ ಕ್ರೇನ್ ಫೀಬಿಗೆ ಫೋನ್ ಮಾಡಿ "ನೀನು ತಕ್ಷಣ ಇಲ್ಲಿಗೆ ಬರಬೇಕು ಎಂದು ಇಚ್ಛಿಸುತ್ತೇನೆ" ಎಂದು ತಿಳಿಸಿದಳು. ಆ ಮಧ್ಯಾಹ್ನ ಕ್ರೇನ್ ಪೋಲ್ಡರುಗಳನ್ನು ಅಕ್ಷರ ಬರೆಯುವ ಕಂಪ್ಯೂಟರ್ ಇದ್ದ ಒಂದು ಸಣ್ಣ ಕೊಠಡಿಗೆ ಕರೆದುಕೊಂಡು ಹೋದಳು. "ನಾನು ಒಂದು ಅದ್ಭುತ ಸಮಾಚಾರವನ್ನು ಹೇಳುತ್ತೇನೆ. ನಿಮ್ಮ ಮಗ ಮಾನಸಿಕ ದುರ್ಬಲ ಅಲ್ಲ. ಅವನು ಬುದ್ಧಿವಂತ. ವಾಸ್ತವವಾಗಿ ಅವನು

ಓದಿ ಬರೆಯಬಲ್ಲ" ಎಂದು ಕ್ರೇನ್ ಹೇಳಿದಳು. ಈ ಮಾತನ್ನು ಕೇಳಿ ಫೀಬಿಗೆ ಹಠಾತ್ ಘಾತವಾದಂತಾಯಿತು. ೨೪ ವರ್ಷಗಳಿಂದ ಡಾಕ್ಟರುಗಳು, ಉಪಾಧ್ಯಾಯರು "ಅವನು ಮಂದ ಬುದ್ಧಿಯವ" ಎಂದು ಹೇಳುತ್ತಲೇ ಇದ್ದರು. ಈಕೆ ಹೇಗೆ ಅದಕ್ಕೆ ವ್ಯತಿರಿಕ್ತವಾಗಿ ಹೇಳುತ್ತಾಳೆ ಎಂದು ಫೀಬಿಗೆ ಕ್ಷಣಕಾಲ ಏನೂ ತಿಳಿಯದಂತಾಯಿತು. ಅವಳಿಗೆ ನಂಬಿಕೆ ಆಗದ್ದನ್ನು ಗಮನಿಸಿ ಕ್ರೇನ್ ಕೂಡಲೆ ಹೇಳಿದಳು—"ನೀವು ಏನು ಮಾತಾಡುವುದಕ್ಕೂ ಮೊದಲು ನಾನು ನಿಮಗೆ ಏನೋ ತೋರಿಸಬೇಕೆಂದು ಇಚ್ಛಿಸುತ್ತೇನೆ" ಎಂದು ತಕ್ಷಣ ಹೊರಗೆ ಹೋಗಿ ಆರ್ಥರನೊಡನೆ ಹಿಂದಿರುಗಿದಳು. ಅವನನ್ನು ಕಂಪ್ಯೂಟರ್ ಮುಂದೆ ಕೂರಿಸಿ ಅವನ ಬಲಪಕ್ಕಕ್ಕೆ ತಾನೂ ಕುಳಿತಳು. ಅವರ ಹಿಂದೆ ಸಿಡ್ ಹಾಗೂ ಫೀಬ್ ನಿಂತುಕೊಂಡರು. ಕ್ರೇನ್ ಕಂಪ್ಯೂಟರಿನ ಅಚ್ಚುಫಲಕವ ಮೇಲೆ ತ್ವರಿತವಾಗಿ ಏನೇನೋ ಒತ್ತಿದಳು. ಪ್ರತಿಫಲಕದ ಮೇಲೆ "ನೀನು ಇಂದು ಹೇಗಿದ್ದಿ ?" ಎಂದು ಕಾಣಿಸಿತು. "ಆರ್ಥರಿನ ಕಣ್ಣುಗಳನ್ನು ಗಮನಿಸಿ" ಎಂದು ಕ್ರೇನ್ ಅವನ ತಂದೆ ತಾಯಿಯರಿಗೆ ಹೇಳಿದಳು.

ಮೊತ್ತಮೊದಲ ಮೆಸೇಜ್ :

ಕ್ರೇನ್ ಆರ್ಥರಿನ ಬಲಗೈಯನ್ನು ಹಿಡಿದು ಅದಕ್ಕೆ ತನ್ನ ಕೈ ಆಧಾರ ಕೊಟ್ಟು ಅಚ್ಚುಫಲಕದ ಮೇಲೆ ಹಿಡಿದುಕೊಂಡಳು. ಆರ್ಥರಿನ ಭುಜಗಳು ತಗ್ಗಿದವು. ತಲೆ ಮುಂದಕ್ಕೆ ಬಾಗಿತು. ಹಾಳೆಯಲ್ಲಿ ಗೆರೆಗಳು ಮೂಡಿದವು. ಆರ್ಥರಿನ ಕಣ್ಣುಗಳು ಅಚ್ಚುಫಲಕದ ಮೇಲೆ ಹಾಯ್ದು ಗಮನಿಸುವುದನ್ನು ಫೀಬ್ ನೋಡಿದಳು. ನಿಧಾನವಾಗಿ ಅವನ ಬಲಗೈ ತೋರ್ಬೆರಳು ಒಂದು ಅಚ್ಚುಮೊಳೆಯನ್ನು ಕುಟ್ಟಿ ಜಾಗ ಬಿಡುವ ಮೊಳೆ, ಅನಂತರ ಇನ್ನೊಂದು ಅಕ್ಷರದ ಮೊಳೆ ಹೀಗೆ ಕುಟ್ಟುತ್ತ ಹೋಯಿತು.

ಆರ್ಥರಿನ ಗಮನ ಪೂರ ಅಚ್ಚುಮೊಳೆಯ ಫಲಕದ ಮೇಲೆಯೇ ಕೇಂದ್ರೀಕರಿಸಿತ್ತು. ಅಕ್ಷರದ ನಂತರ ಅಕ್ಷರ ಪ್ರತಿಫಲಕದ ಮೇಲೆ ಶ್ರಮಕೆಲಸ ಮಾಡುವಷ್ಟು ನಿಧಾನವಾಗಿ ಮೂಡಿದವು. ಆರ್ಥರಿನ ಕೈ ಈ ಶ್ರಮದಿಂದ ಅದುರುವಾಯು ಬಂದಂತೆ ನಡುಗುತ್ತಿತ್ತು. ಆದರೂ ಅಕ್ಷರಗಳನ್ನು ಕುಟ್ಟುತ್ತಲೇ ಮುಂದುವರಿದನು. ಫೀಬ್ ಪ್ರತಿಫಲಕವನ್ನು ಗಮನಿಸುತ್ತಲೇ ಇದ್ದಳು. ೨೯ ವರ್ಷ ಅವನ ಮೌನವನ್ನು ಅನುಭವಿಸಿದ್ದ ಅವಳು ತಾನು ಕೇಳಬೇಕೆಂದುಕೊಂಡಿದ್ದ ಅತಿ ಹರ್ಷದಾಯಕ ಶಬ್ದಗಳು ಅಲ್ಲಿ ಮೂಡಿದ್ದನ್ನು

ನೋಡಿದಳು. "ನನಗೆ ಸಂತೋಷವಾಗಿದೆ; ಏಕೆಂದರೆ ಈಗ ನಾನು ಅವಳನ್ನು ಪ್ರೀತಿಸುತ್ತೇನೆ ಎಂದು ಅವಳಿಗೆ ಹೇಳಬಹುದು" ಎಂದು ಆರ್ಥರ್ ಅಚ್ಚು ಒತ್ತಿದ್ದ.

ಅವಳು ಸಂತೋಷದಿಂದ ಕಣ್ಣೀರು ಹಾಕುತ್ತ ಆರ್ಥರಿನ ಭುಜಗಳೆರಡನ್ನೂ ಒತ್ತಿದಳು. ಸಿಡ್ ಕೂಡ ಕಣ್ಣೀರು ಹಾಕುತ್ತಿದ್ದ. ಬಹು ಹೊತ್ತು ಮಾತಾಡದಂತೆ ಇಬ್ಬರಿಗೂ ಗಂಟಲು ಕಟ್ಟಿತ್ತು. ಅವರು ಆರ್ಥರಿನ ಕಡೆ ತಿರುಗಿ ಮುಗುಳ್ನಕ್ಕರು. ಆರ್ಥರ್ ಕೂಡ ತಾನು ವಿಜಯಿಯಾದೆನೆಂದು ಸೂಚಿಸುವ ಮುಗುಳ್ನಗೆ ಬೀರಿದನು. "ಇದನ್ನು ಹೇಗೆ ಸಾಧಿಸಿದೆ? ಆರ್ಥರಿಗೆ ಮಾತಾಡಲೂ ಬಾರದಿರುವಾಗ ಅವನು ಅಚ್ಚಿನಲ್ಲಿ ಬರೆದದ್ದು ಹೇಗೆ?" ಎಂದು ಅವರು ಕ್ರೇನನ್ನು ಕೇಳಿದರು. ತಾನು ಆ ಕ್ರಮವನ್ನು ಇನ್ನೊಬ್ಬ ಹೆಂಗಸಿನಿಂದ ಒಂದು ಶಾಲೆಯಲ್ಲಿ ಕಲಿತುಕೊಂಡಳೆಂದು ಕ್ರೇನ್ ಹೇಳಿದಳು.

ಈ ವಿಧಾನಕ್ಕೆ ಸರಾಗ ಸಂಪರ್ಕ ವಿಧಾನ (facilitated communication) ಎಂದು ಹೆಸರು. ಈ ವಿಧಾನವನ್ನು ಆಸ್ಟ್ರೇಲಿಯಾದಲ್ಲಿ ಕಂಡುಹಿಡಿದದ್ದು ೧೯೯೦ರಲ್ಲಿ ಅಮೆರಿಕದಲ್ಲಿ ಪ್ರಚಾರಣೆಗೆ ಬಂದಿತ್ತು. ಅಮೆರಿಕದಲ್ಲಿ ಕಂಡುಹಿಡಿದಿದ್ದ ಇದೇ ವಿಧಾನವೋ ಇದರಂತೆಯೇ ಇದ್ದ ವಿಧಾನಗಳೋ ಈ ಕಾಲಕ್ಕೆ ಹಿಂದೆಯೇ ಅಮೆರಿಕದಲ್ಲಿ ಬಳಕೆಯಲ್ಲಿತ್ತು. ವಾದಗ್ರಸ್ಥವಾದ ಈ ಕ್ರಮ ಕೆಲವು ಹುಟ್ಟು ಮಂದಬುದ್ಧಿಯ ವ್ಯಕ್ತಿಗಳು ಏನಾದರೂ ಹೇಳಬೇಕೆಂದಾಗ ಸಹಾಯಕವಾಗಿವೆ.

"ಈಗ ಒಂದು ತಿಂಗಳಿಂದ ನಾನೂ ಆರ್ಥರೂ ಈ ಕ್ರಮವನ್ನು ರೂಢಿಮಾಡಿಕೊಳ್ಳುತ್ತಿದ್ದೇವೆ. ಆರ್ಥರಿಗೆ ಎಷ್ಟು ವಿಷಯಗಳು ತಿಳಿದಿವೆ ಅಂತ ಗೊತ್ತಾದರೆ ನಿಮಗೆ ಆಶ್ಚರ್ಯವಾಗುತ್ತದೆ" ಎಂದು ಕ್ರೇನ್ ಫೀಬಿಗೆ ಹೇಳಿದಳು. ಈ ಮಾತು ಫೀಬಿಗೆ ಅತ್ಯಂತ ಸ್ಪಷ್ಟವಾಗಿ ಗ್ರಹಿಕೆ ಆಯಿತು. ಏಕೆಂದರೆ ಅವಳು ತನ್ನ ಅಂತರ್ಯದಲ್ಲಿ "ಆರ್ಥರ್ ವಿಷಯಗಳನ್ನು ತಿಳಿದುಕೊಂಡಿರುವುದಕ್ಕಿಂತ ಹೆಚ್ಚಾಗಿ ಅರ್ಥಮಾಡಿಕೊಳ್ಳುತ್ತಾನೆ. ಈಗ ತಿಳಿಸಿದ ಮಾತುಗಳನ್ನು ನಮಗೆ ಹೇಳಬೇಕೆಂದು ಬಹುಕಾಲದಿಂದ ಪ್ರಯತ್ನಿಸುತ್ತಿದ್ದ ಅಂತ ತೋರುತ್ತೆ" ಅಂದುಕೊಂಡಳು. ಅವಳ ಕಡೆ ನೋಡಿ ಹುಸಿನಗೆ ನಗುತ್ತಿದ್ದ ಆರ್ಥರಿನ ಭುಜ ತಟ್ಟುತ್ತ "ಅವನಿಗೆ ಓದುವುದಕ್ಕೆ ಹೇಗೆ ಬಂತು ಅಂತ ತಿಳಿಯಲು ನನಗೆ ಆಸೆ ಆಗುತ್ತೆ" ಅಂತ ಫೀಬ್ ಹೇಳಿದಳು. "ನಿಮ್ಮ ಮನೆಯಲ್ಲಿ ಯಾವಾಗಲೂ ತುಂಬ ಪುಸ್ತಕಗಳಿರುತ್ತವೆ ಅಂತ ಆರ್ಥರ್ ಹೇಳಿದ. ನನ್ನ ವಿಶಿಷ್ಟ ಪಾಠಕ್ರಮ ಹಾಗೂ

ಟಿ. ವಿ. ಇವುಗಳಿಂದ ಓದುವುದನ್ನು ಕಲಿತ ಅಂತ ತೋರುತ್ತೆ" ಎಂದು ಕ್ರೇನ್ ಹೇಳಿದಳು.

ಈ ಗಳಿಗೆಗಿಂತ ಉತ್ತಮವಾಗಬಹುದಾದದ್ದು ಇನ್ನು ಒಂದೇ ವಿಷಯದಿಂದ ಅಂತ ಫೀಬ್ ಯೋಜಿಸಿದಳು—ತಾನೂ ಅವನ ಜೊತೆ ಕಂಪ್ಯೂಟರಿನಲ್ಲಿ ಅಚ್ಚು ಒತ್ತುವಂತಾದರೆ ಎಷ್ಟು ಚೆನ್ನ ಎನ್ನಿಸಿತು. "ಆರ್ಥರಿನ ಜೊತೆ ನಾನೂ ಅಚ್ಚು ಒತ್ತುವ ವಿಧಾನವನ್ನು ನನಗೆ ಕಲಿಸು" ಎಂದು ಫೀಬ್ ಕ್ರೇನನ್ನು ಕೇಳಿ ಕೊಂಡಳು. ಕ್ರೇನ್ ಇದನ್ನು ಕಂಪ್ಯೂಟರ್ ಮೂಲಕ ಆರ್ಥರಿಗೆ ತಿಳಿಸಿದಾಗ ಅವನು ಫೀಬ್‌ಗೆ "ನೀನು ಕಲಿತುಕೊಳ್ಳಬೇಕೆಂದೇ ನನ್ನ ಆಸೆ" ಎಂದು ತಾಯಿಗೆ ಉತ್ತರಿಸಿದನು.

ದೇವವಾಣಿ :

ಮುಂದಿನ ಸಲ ಕ್ರೇನ್ ಮತ್ತು ಫೀಬ್ ಭೇಟಿ ಆದಾಗ ಕ್ರೇನ್ ಆ ವಿಶೇಷ ವಿಧಾನವನ್ನು ವಿವರಿಸಲು ಪ್ರಾರಂಭಿಸಿದಳು. "ಸರಳ ಸಂಪರ್ಕ ವಿಧಾನ"ಕ್ಕೆ ಸಾಧಾರಣವಾಗಿ ಸ್ವಲ್ಪ ದೈಹಿಕ ಶ್ರಮ ಬೇಕಾಗುತ್ತೆ" ಎಂದು ಹೇಳುತ್ತ ಫೀಬಿನ ಕೈಯಲ್ಲಿ ಆರ್ಥರಿನ ಬಲಗೈ ಮಣಿಗಂಟನ್ನಿಟ್ಟಳು. "ಆರ್ಥರಿನ ತೋಳಿಗೆ ನೀನು ಆಸರೆಯನ್ನು ಕೊಡಬೇಕಾಗುತ್ತದೆ. ಅದರಿಂದ ಒಂದು ರೀತಿಯ ಹಿಂತುಯ್ತು ಉಂಟಾಗಿ ಯಾವ ಅಕ್ಷರವನ್ನು ಕುಟ್ಟಬೇಕೆಂದು ಅವನ ಇಚ್ಛೆಯೋ ಆ ಅಕ್ಷರಕ್ಕೇ ಅವನ ಕೈ ಚಲಿಸುವಂತೆ ಮಾಡುತ್ತದೆ" ಎಂದು ಕ್ರೇನ್ ಹೇಳಿದಳು.

ಆರ್ಥರ್ ಹಾಗೂ ಕ್ರೇನ್ ಇವರ ನಡುವೆ ಫೀಬ್ ಕುಳಿತಳು. "ನೀನು ಊಟ ಮಾಡಿದೆಯೆ? ನಿನ್ನ ಚಿಕ್ಕಂದಿನಲ್ಲೆ ಮೃತರಾದ ನಿನ್ನ ಅಜ್ಜಅಜ್ಜಿಯರ ನೆನಪಿದೆಯೆ? ನಿನ್ನ ಸೋದರ ಸಂಬಂಧದವರ ಹೆಸರುಗಳು ನಿನಗೆ ಗೊತ್ತೆ? ಮುಂತಾದ ಹೌದು, ಇಲ್ಲ ಎಂಬ ಜವಾಬು ಮಾತ್ರ ಇರುವಂತ ಪ್ರಶ್ನೆಗಳನ್ನು ಕೇಳಹತ್ತಿದಳು. ಮುಂದಕ್ಕೆ ಸ್ವಲ್ಪ ಕಠಿಣ ಪ್ರಶ್ನೆಗಳನ್ನು ಕೇಳಿದಾಗ ಅವನು ಉತ್ತರವನ್ನು ಅಚ್ಚು ಮಾಡುವುದಕ್ಕೆ ಬಹುಕಾಲ ತೆಗೆದು ಕೊಳ್ಳುತ್ತಿದ್ದ. ಹಲವು ಬಾರಿ ಅವನ ಕೈಗೆ ಸಾಕಷ್ಟು ಆಸರೆ ಕೊಡಲು ಫೀಬ್ ಮರೆತು ಹೋಗುತ್ತಿದ್ದಳು. ಹಾಗಾದಾಗ ಆರ್ಥರ್ ತಪ್ಪು ಅಕ್ಷರಗಳನ್ನು ಕುಟ್ಟುತ್ತಿದ್ದ. ಇಷ್ಟು ಶ್ರಮಪಡುತ್ತ ಫೀಬ್ ಅರ್ಧ ಗಂಟೆಗೇ ಸುಸ್ತಾದಳು.

ಕೆಲವು ವಾರಗಳಲ್ಲಿ ಪೋಲ್ಡರುಗಳಿಗೆ ತಮ್ಮ ಮಗನ ಹೊಸ ಹೊಸ ಮೊಗಗಳು (facets) ಗೊತ್ತಾಗುತ್ತ ಬಂದವು. ಆರ್ಥರಿಗೆ ಹಾಸ್ಯದ ಚಟ ಇದ್ದದ್ದು ತಿಳಿದು ಬಂದಿದ್ದು ಇಂಥ ಒಂದು ಮೊಗ ಸಿಡ್ ಅವನ ಮಗನನ್ನು ಲೇಬರ್ ಡೇ (ಸೆಪ್ಟೆಂಬರಿನ ಮೊದಲ ಸೋಮವಾರ—ಅಮೆರಿಕದಲ್ಲಿ ಕಾರ್ಮಿಕ ದಿನಾಚರಣೆಯ ರಜಾ ದಿನ) ಎಂದರೆ ಏನು ಎಂದು ಕೇಳಿದಾಗ ಈ ಮೊಗ ಗೋಚರವಾಯಿತು. ಆರ್ಥರ್ "ಅದಕ್ಕೆ ಅರ್ಥ ಏನೆಂದರೆ ವಾರಾಂತ್ಯ ರಜವನ್ನು ಪಡೆಯಬೇಕೆಂದರೆ ನೀನು ಶ್ರಮದುಡಿತ ಮಾಡಬೇಕು ಅಂತ" ಎಂದು ಹೇಳಿದ. ಇನ್ನೊಂದು ಸಲ ಫೀಬ್ ಪ್ರಶ್ನೆಗಳನ್ನು ಕೇಳುವುದಕ್ಕೆ ತಾನು ಆರ್ಥರ್ ಜವಾಬು ಕೊಡಲು ಮನಸ್ಸನ್ನು ಅಣಿ ಮಾಡಿಕೊಳ್ಳುವಷ್ಟು ಮಾಡಿಕೊಳ್ಳದೇ ಇರುವುದಕ್ಕೆ ಕ್ಷಮಾಪಣೆ ಕೇಳಿದಾಗ ಆರ್ಥರ್ ತಮಾಷೆಯಿಂದ "ನಾನು ಚೆನ್ನಾಗಿ ಅಣಿಮಾಡಿಕೊಳ್ಳುವುದು ಹೆಚ್ಚಲ್ಲ; ನಿನಗೆ ಯೋಚಿಸುವುದಕ್ಕೆ ಅಧಿಕ ಕಾಲ ದೊರೆಯುತ್ತೆ" ಎಂದು ಹೇಳಿದ.

ಸಂಗತಿಗಳನ್ನು ವೀಕ್ಷಿಸಿ ಅರಿತುಕೊಳ್ಳಲು ಆರ್ಥರಿಗೆ ಅವನದೇ ಆದ ಮಾರ್ಗ ಒಂದು ಇತ್ತು. ಒಂದು ದಿನ ಫೀಬ್ ತಾನು ಬಾಯಲ್ಲಿ ಆಡಿದ ಶಬ್ದಗಳು ಅರ್ಥವಾಗುತ್ತವೆಯೆ ಎಂದು ಕೇಳಿದಳು. "ಕೆಲವು ವೇಳೆ ಸಾಧ್ಯ. ಮಿಕ್ಕ ವೇಳೆ ಮಾತಾಡಿದ ವೈಖರಿ ಮಾತ್ರ ತಿಳಿಯುತ್ತದೆ" ಎಂದು ಉತ್ತರಿಸಿದ. "ನಿನ್ನ ಕೈಲಿ ಮಾತನಾಡಿದಾಗ ನನ್ನ ಶಬ್ದದ ವೈಖರಿ ಏನು?" ಎಂದು ಕೇಳಿದಳು. "ಅದು ಒಂದು ಶಾಮಕಾರಕ ವೈಖರಿ; ದೇವರವಾಣಿಯಂತೆ ಮೃದು ಹಾಗೂ ಪ್ರಿಯವಾದದ್ದು" ಎಂದು ಜವಾಬು ಕುಟ್ಟಿದ. ಇನ್ನೊಂದು ಸಲ ತಾಯಿ ಪಿಯಾನೊ ನುಡಿಸುತ್ತಿದ್ದರೆ ನುಡಿಗಳು ಹಾರಾಡುತ್ತಿರುವ ಗಾಳಿಪಟ ವೃತ್ತಗಳಲ್ಲಿ ಸುತ್ತುತ್ತಿರುವಂತೆಯೇ ಸುತ್ತುತ್ತಿರುತ್ತವೆ ಎಂದು ವಿವರಿಸಿದ. ಅಲ್ಲದೆ ಫೀಬ್‌ಗೆ ಇನ್ನೂ ತಿಳಿಯಿತು—ಆರ್ಥರಿಗೆ ಗಣಿತವೂ ಗೊತ್ತು. ಪ್ರಪಂಚದ ಅನೇಕ ದೇಶಗಳ ರಾಜಧಾನಿಗಳ ಹೆಸರೂ ಗೊತ್ತು ಎಂದು.

ಕಂಪ್ಯೂಟರ್ ಬಳಸಿಕೊಂಡು ಶಬ್ದಗಳ ಆಟ ಆಡುವಾಗ ಅವನು ವಿಶೇಷ ಬಳಕೆಯಿಂದ ಅಪರೂಪ ಶಬ್ದಗಳನ್ನು ಹುಡುಕಿ ಉಪಯೋಗಿಸುತ್ತಿದ್ದನು. ತುಚ್ಛಕವನಗಳಿಗೆ ಡಾಗರೆಲ್, ಹೃದಯಾಘಾತಕ್ಕೆ ಕಾರೊನರಿ, ನಾವೆಯ ಮೂತಿಯನ್ನು Huk, ಶುಭ್ರಮಾಡುವುದಕ್ಕೆ ಬ್ರೀಮ್ ಎಂದು ಹೇಳಿದ್ದುಂಟು. ಅವನಿಗೆ ತಿಳಿಯದ ಪ್ರಪಂಚಜ್ಞಾನ ಅಲ್ಪ ಮಾತ್ರ ಎನ್ನಿಸುತ್ತಿತ್ತು.

ಫೀಬ್ ಆರ್ಥರಿಗೆ ನೀಡುವ ಸಹಾಯದ ಕೈಚಳಕ ಉತ್ತಮವಾಗುತ್ತಿದ್ದಂತೆ ಅವರ ಪರಸ್ಪರ ಸಂಭಾಷಣೆ ಗಂಟೆಗಟ್ಟಲೆ ಎಳೆದು ಆರ್ಥರ್ ತನ್ನ ಮನಸ್ಸಿನ ಯೋಚನೆಗಳು, ಅನಿಸಿಕೆಗಳು ಎಲ್ಲವನ್ನೂ ತಿಳಿಸುವಂತಾಯಿತು. ಆರ್ಥರ್ ಎಷ್ಟು ದಯಾಪರ ಹಾಗೂ ಆಲೋಚನಾಪರ ಯುವಕನಾಗಿದ್ದನೆಂದು ತಾಯಿಗೆ ತಿಳಿದು ಆಶ್ಚರ್ಯವಾಯಿತು. ಆದರೆ ಆಗಾಗ ಬೇಸರ (annoyance), ಕೋಪ, ದಿಗ್ಭ್ರಮೆಗಳೂ ಉಂಟಾಗುತ್ತವೆಯೆಂದು ಆರ್ಥರ್ ಒಪ್ಪಿಕೊಂಡನು.

ವಂದನೆಗಳ ಪ್ರಾರ್ಥನೆ :

ಆರ್ಥರ್ ಕುಟುಂಬದವರೊಡನೆ ಎಲ್ಲಂದರಲ್ಲಿ ಯಾವಾಗಬೇಕಾದರೂ ಸಂಪರ್ಕ ಪಡೆಯುವಂತೆ ಸಾಧಿಸುವ ತೊಡೆಯ ಮೇಲೆ ಇಟ್ಟುಕೊಂಡು ಬಳಸಬಲ್ಲ ಕಂಪ್ಯೂಟರ್ ಒಂದನ್ನು ವ್ರೋಲ್ಡರರ ಚರ್ಚಿನವರು ತೆಗೆದು ಕೊಡಲು ಚಂದಾ ಎತ್ತಿದರು. ಜನ ಆರ್ಥರಿನೊಡನೆ ಮಾತನಾಡುವಾಗ ಅವನನ್ನು ದೃಷ್ಟಿಸುವರು. ಆರ್ಥರ್ ಕೂಡ ತನ್ನ ಮುಖದಲ್ಲಿ ಸ್ಥೈರ್ಯ ಸಂಯಮಗಳನ್ನು ಬೀರುತ್ತಿದ್ದ. ಒಂದು ಸಾಯಂಕಾಲ ತಾಯಿ ಮಗ ಕಂಪ್ಯೂಟರ್ ಸಂವಾದವನ್ನು ಮುಗಿಸುವ ವೇಳೆ ಆರ್ಥರ್.ಕಂಪ್ಯೂಟರಿಗೆ ವಿದ್ಯುಚ್ಛಕ್ತಿ ಪೂರೈಕೆಯನ್ನು ಕಡಿದುಹಾಕಿಬಿಟ್ಟ. ಅವರು ಮಾತಾಡಿಕೊಂಡಿದ್ದು, ಸಂಸಾರದ ನೆನಪು ಕನಸುಗಳು, ಆಸೆಗಳು ಎಲ್ಲ ಅಳಿಸಿಹೋದವು. ಉಳಿದಿದ್ದರೆ ಅವು ಅವರುಗಳ ಜ್ಞಾಪಕದಲ್ಲಿ ಮಾತ್ರ. ಫೀಬ್‌ಗೆ ಕೋಪ ಜಿಗುಪ್ಸೆಗಳು ಉಂಟಾಗಿ ಹಾಗೆಂದೇ ಅವಳು ಆರ್ಥರಿಗೆ ಹೇಳಿದಳು. ಮರುಕ್ಷಣವೆ ಅವಳಿಗೆ ಹೊಳೆಯಿತು. ಇಷ್ಟು ವರ್ಷಗಳು ಏತೇತಕ್ಕೆ ಅವಳು ದೇವರನ್ನು ಪ್ರಾರ್ಥಿಸುತ್ತಿದ್ದಳೋ ಅವೆಲ್ಲ ಸಫಲವಾಗಿದ್ದವು. ಆರ್ಥರ್ ಇನ್ನು ಯಾವಾಗಲೂ ಮೌನಿಯಾಗಿರುವುದಿಲ್ಲ. ಅವಳ ದುಃಖದ ವರ್ಷಗಳೆಲ್ಲ ಈಗ ನೂತನವಾಗಿ ಸಂಭವಿಸಿದ ಸಂತೋಷದಲ್ಲಿ ಮುಳುಗಿಹೋದವು.

"ನೀನು ಯಾವಾಗಲಾದರೂ ದೇವರನ್ನು ಪ್ರಾರ್ಥಿಸುವೆಯ?" ಎಂದು ಅವಳು ಅವನನ್ನು ಕೇಳಿದಳು. ಹಾಗೆಯೇ ಕಂಪ್ಯೂಟರಿಗೆ ವಿದ್ಯುಚ್ಛಕ್ತಿ ಒದಗುವಂತೆ ಸ್ವಿಚ್ ಹಾಕಿದಳು. "ಹೌದು; ಕೆಲಸಮಯ ನಿನ್ನ ಮತ್ತು ಅಪ್ಪನ ಪರವಾಗಿ ಪ್ರಾರ್ಥಿಸುತ್ತೇನೆ" ಎಂದು ಉತ್ತರಿಸಿದ. "ನಿನಗಾಗಿ ಇಷ್ಟು ವರ್ಷ ಪ್ರಾರ್ಥಿಸುತ್ತಿದ್ದ ನಮ್ಮ ಪರವಾಗಿ ನೀನು ದೇವರನ್ನು ಪ್ರಾರ್ಥಿಸುವುದು ವಿಚಿತ್ರವಾಗಿ ಹಾಗೂ ಆಶ್ಚರ್ಯವಾಗಿ ಕಾಣುತ್ತೆ" ಎಂದು ಫೀಬ್ ಅವನೆಡೆ ನಿಟ್ಟಿಸಿ ನೋಡುತ್ತ ಕಂಪ್ಯೂಟರ್ ಅಚ್ಚು ಒತ್ತಿದಳು ಹಾಗೂ ಅವನ ಕೈಗೆ

ಆಸರೆ ಆಗುವಂತೆ ಅವನ ಕೈ ಹಿಡಿದಳು. ಅವನು ನಿಧಾನವಾಗಿ "ದೇವರು ನನ್ನ ಕೈ ಬಿಡ; ನನ್ನ ಆತ್ಮವನ್ನು ರಕ್ಷಿಸುತ್ತಾನೆ; ಇತ್ಯಾದಿಯಾದ ಬೈಬಲಿನ ಒಂದು ಪ್ರಾರ್ಥನೆಯನ್ನು ಅಚ್ಚೊತ್ತಿದ. ಫೀಬ್ ಅವನ ಕೈ ಒತ್ತಿದಳು. ಮಬ್ಬು-ಮುಸುಕಿನಲ್ಲೀ ನಡೆದವರು ಯಾರಾದರೂ ಇದ್ದರೆ ಅದು ಆರ್ಥರ್. ಇಷ್ಟು ವರ್ಷಗಳು ಅವರಿಬ್ಬರೂ ಈ ಮಬ್ಬಿನಲ್ಲೆ ಅಲೆಯುತ್ತ ಒಬ್ಬರನ್ನೊಬ್ಬರು ಅರಿಯದವರಾಗಿದ್ದರು. ಆರ್ಥರಿನ ಈ ಪ್ರಾರ್ಥನೆ ಇಬ್ಬರ ಸಲುವಾಗಿಯೂ ಹಿಡಿದಿದ್ದ ಅವನ ಕೈಯನ್ನು ಬಿಟ್ಟು ಫೀಬ್ ಕಂಪ್ಯೂಟರ್ ಮುಂದೆ ತಾವಿಬ್ಬರೂ ಕುಳಿತ ದಿನದಿಂದ ಹೇಳಬೇಕೆಂದಿದ್ದ ಮಾತನ್ನು ಮೆತ್ತನೆ ಧ್ವನಿಯಲ್ಲಿ ಹೇಳಿದಳು—"ನಿಜ; ಮಗನೆ, ನಿಜ. ದೇವರು ನಮ್ಮಿಬ್ಬರ ಆತ್ಮಗಳನ್ನೂ ಪುನರಕ್ಷಣೆ ಮಾಡಿದ್ದಾನೆ."

ಎಸ್. ರಾಮರಾವ್

ಲೇಖನಗಳಿಗೆ ಆಹ್ವಾನ:

'ಪುಸ್ತಕ ಪ್ರಪಂಚ' ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖಕರಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ. ಪ್ರಕಟಗೊಂಡ ಲೇಖನಕ್ಕೆ ಸೂಕ್ತ ಸಂಭಾವನೆ ನೀಡಲಾಗುವುದು. ಲೇಖನಗಳನ್ನು ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಿದೆ.

ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸ ಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು - 570006

ದೂರವಾಣಿ ಸಂಖ್ಯೆ : 520435

ಷಾರ್ಕ್‌ಗಳ ನಡುವೆ ಒಂಟಿಯಾಗಿ ಕಡಲಲ್ಲಿ

ಸುತ್ತಲೂ ಸುರಿವ ದಟ್ಟ ಮಂಜಿನ ಮಬ್ಬು....ತುಪ್ಪಳದ ದಪ್ಪ ಹನಿಬೆರೆತ ಮೊರೆಯುವ ಕಡಲ ಬಿರುಗಾಳಿ....ಗುಡುಗು–ಸಿಡಿಲು....ಎತ್ತರೆತ್ತರದ ಭೀಮ ತೆರೆ....ಕಡಲ ಮೊರೆತ—ರಭಸದ ಮುತ್ತಿಗೆಯ ಹುಲಿಮೀನು ತಂಡ!.... ಸಿಲುಕಿ ಮುಳುಗೇಳುತ್ತಿದ್ದ ಆಕಾಶಪಡೆಯಾಳು ಸಾವು-ಬದುಕಿನ ಹೋರಾಟಕ್ಕೆ ಎದೆಗೆಡದೆ ಸನ್ನದ್ಧನಾದ....ಅವನಿಗಿದ್ದುದೆರಡೇ ಉಪಕರಣ....ಒಂದು ಸೋರಿ ಹೋಗುತ್ತಲಿದ್ದ ತೇಲುಕವಚ....ಎರಡು, ಹತಾಶೆಯಿಂದ ತುಟಿಕಚ್ಚಿ ಕೈಗೊಂಡ ಕಟುನಿರ್ಧಾರ....“ನಾನು ಬದುಕಲೇಬೇಕು....ಬದುಕಲೇಬೇಕು !”

ಡಿಸೆಂಬರ್ ೧೯೮೬ರ ಒಂದು ದಿನ....ಅದು ವಾಲ್ಟರ್‌ವ್ಯಾಟನ ಪಾಲಿಗೆ ದುರ್ದಿನ ಆಗುವದೆಂದು ಅವನು ಕನಸುಮನಸಿನಲ್ಲಿಯೂ ನೆನೆಸಿರಲಿಕ್ಕಿಲ್ಲ! ಬಹಾಮ ದ್ವೀಪಗಳಿಂದ ೬೫ ನಿಮಿಷದ ವಿಮಾನಯಾನದ ಯೋಜನೆಯನ್ನು ಹಮ್ಮಿಕೊಂಡದ್ದು ಅಥವಾ ಒಂದು ತಾಸಿನೊಳಗೇ ಆದಾತು! ಎರಡು ಇಂಜನ್ನಿನ ‘ಬೀಚ್‌ಕ್ರಾಫ್ಟ್’ ಮಾದರಿ ವಿಮಾನವದು. ಆಕಾಶಪಡೆಯಲ್ಲಿಯೆ ನುರಿತು ಪಳಗಿದವ ವ್ಯಾಟ್. ಸುರಿವ ಮಳೆಯಲ್ಲೂ ಹಾಗೆಯೆ ಒಮ್ಮೆ ದೂರದ ಮಿಯಾಮಿ ದರ್ಶನ....ಸುಳಿವೇನಾದರೂ ಕಂಡಾತೆ ಎಂದು ಹಣಿಕಿ ಹಾಕುತ್ತ, ದಿಟ್ಟಿಸಿದ! “ನಾಸ್ಸವು” ಎಂಬೆಡೆಯಲ್ಲಿ ಕಳ್ಳರು ಹಟಾತ್ತನೆ ಧಾಳಿಯೆರಗಿ, ಅವನ ವಾಯುಯಾನ ಸಾಮಗ್ರಿ ಇದ್ದ ಪೆಟ್ಟಿಗೆ, ಎಲ್ಲವನ್ನೂ ಕೊಳ್ಳೆ ಹೊಡೆದಿದ್ದರು!

ವ್ಯಾಟನಿಗೀಗ ೩೭ರ ಹರೆಯ. ಈಗ ಆತ ವಿಮಾನಯಾನ ವಿಭಾಗದಲ್ಲಿ ಎಂಜಿನೀಯರ್! ವಿಮಾನದಲ್ಲಿ ಹೊರಟದ್ದು ದು ಮನೆಗೆ—ಫ್ಲಾರಿಡಾಗೆಂದು. ಇದ್ದದ್ದಿಷ್ಟೆ; ವಿಮಾನದ ದಿಕ್ಸೂಚಿ, ಕೈರೇಡಿಯೊ. ಅವುಗಳೇ ಅವನ ಮಾರ್ಗ ದರ್ಶಕ ಸಾಮಗ್ರಿ! ಅಂತೂ ಹೊರಟದ್ದಾಯಿತು. ಹೊರಡುವಾಗ ಕೂಡ ಏನೂ ತೊಂದರೆ ಕಾಣಬರಲಿಲ್ಲ. ಎಲ್ಲವೂ ಸರಿಯಾಗಿಯೇ ಇತ್ತು.

ವ್ಯಾಟ್, ಆ್ಯಂಡ್ರೊಸ್ ದ್ವೀಪಸಾಲನ್ನು ದಾಟಿದ. ಅಲ್ಲಿಂದಾರಂಭ—ನೀಲಾಗಸ ದಟ್ಟ ಕಪ್ಪಾಯಿತು, ಮೋಡಗಳು ದಪ್ಪಗೆ ದಟ್ಟೈಯಿಸಿದುವು. ದಿಕ್ಸೂಚಿ ಸುರುಳಿಸುರುಳಿ ಸುತ್ತಿ, ತಿರ್ರನೆ ತಿರುಗಿತಷ್ಟೆ! ಎಂದೂ ಅಳುಕದ ವ್ಯಾಟ್, ಇಂದೇಕೊ ಸಣ್ಣಗೆ ನಡುಗಿದ....ಎಲ್ಲಿಯಾದರೂ ಈ ದಿಕ್ಸೂಚಿ

೧೯೮೮ರ ಮೇ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪೀಟರ್ ಮೈಕೇಲ್ ಮೂರ್ ನೈಜಾನುಭವ ಲೇಖನದ ಅನುವಾದ.

ಪಡುವಣದೆಡೆಯಿಂದ ಬೇರೆ ದಿಸೆಗೆ ನನ್ನನ್ನು ತಿರುಗಿಸಿತೇನು? ಎಂದುಕೊಂಡವನೆ ಹಾಗೆಯೇ ಯಾವುದಾದರೂ ಭೂಪ್ರದೇಶದ ಗುರುತು ಕಾಣುವುದೆ ಎಂದು ಗಮನಿಸಿದ. ಅವನೆಲ್ಲಿರುವುದು? ಆವರಿಸಿದ್ದ ಮೋಡಗಳಿಂದ ೧೧೦೦ ಮೀಟರ್ ಕೆಳಗೆ ಹಾರುತ್ತ ಹಾರುತ್ತ ಕಂಡದ್ದು, ಬಂಡೆಗಲ್ಲುಗಳಿಗೆ ರಪ್ಪನೆ ಅಪ್ಪಳಿಸುತ್ತಿದ್ದ ಕಡಲತೆರೆಗಳನ್ನು....ಬಿಮಿನಿಯತ್ತ ಕರೆದೊಯ್ಯುವ ಕೊಂಡಿ....ಕಡಲಕರೆ....ಇದರ ಒಂದು ಭಾಗವೇ ಇದ್ದಿತು....! ಅವನು ಹಾಗೆಯೇ ಉತ್ತರದತ್ತ ಬಂಡೆಗಲ್ಲಿನ ಸಾಲನ್ನೆ ಅನುಸರಿಸಿದ. ಎಲ್ಲಿದೆ ಅವನು ಕಾಣುವ ಬಿಮಿನಿ? ಅದು ದೃಷ್ಟಿಗೋಚರವಾಗಲೆ ಇಲ್ಲ. ತಾನೆಲ್ಲಿದೇನೊ ಎಂದು ಮಸುಕುಮಸುಕಾಗಿಯೂ ಅವನಿಗೆ ಅರಿಯದಾಯಿತು.

ತಾನೆಲ್ಲಿದ್ದೇನೆ ಎನ್ನುವುದೂ ಅರಿಯಲಾಗದ ವ್ಯಾಟ್‌ನಿಗೆ ತೋಚಿದ್ದೊಂದೇ ಹಾದಿ....ರೇಡಿಯೊವನ್ನು ತಿರುಗಿಸಿದ. 'ಮೇಡೇ? ಮೇಡೇ!' ನನ್ನ ಜೀವ ಉಳಿಸಿ!! (May day! May day!) ಕೂಗಿದ ವ್ಯಾಟ್. ಮಿಯಾಮಿಾ ಕಡೆಗೆ ಹೋಗುತ್ತಿದ್ದ ಏರ್‌ಜಮೈಕ್ ಜೆಟ್ ವಿಮಾನವು ವ್ಯಾಟನಿಗೆ ಉತ್ತರ ವಿತ್ತಿತು ಹಾಗೂ ಲಗುಬಗೆಯಿಂದ ವ್ಯಾಟನ ಸಂದೇಶವನ್ನು ಅಮೆರಿಕಾ ಕಡಲ ಕರೆಯ ರಕ್ಷಾದಳಕ್ಕೂ ಮುಟ್ಟಿಸಿತು! ಫ್ಯಾಲ್ಕನ್ ಜೆಟ್ ತಪಾಸಣಾ ವಿಮಾನ ವೊಂದು, ವಾಲ್ಟರ್‌ವ್ಯಾಟನ ಪತ್ತೆಹಚ್ಚಲು ಹವಣಿಸಿತು—ಮಿಯಾಮಿಾಯ ಜೆಟ್‌ಲೈನರ್ ನೀಡಿದ ಸಂಕೇತದ ಮೇರೆಗೆ ವ್ಯಾಟನ ರೇಡಿಯೊ ಸಂಕೇತ ಪತ್ತೆ ಹಚ್ಚಲೋಸುಗ, ಒಂದು ಮರುಸಂಕೇತವನ್ನು ನೀಡಿತು....ಆದರೆ, ಏನೂ ಉಪಯೋಗವಾಗಲಿಲ್ಲ! ಇನ್ನೊಂದು ಯಾವುದೋ ನೋವು-ನಿರಾಶೆಯ ಸಂಕೇತದ ಉತ್ತರ! ಅದಕ್ಕೂ ಗುಡುಗು-ಸಿಡಿಲು ಬಡಿತಗಳ ಅಡಚಣೆ! ಎಲ್ಲಿ ಹುಗಿದುಹೋಯಿತೊ ವ್ಯಾಟನ ಸಂಕೇತ? ಕೊನೆಗೊಮ್ಮೆ ಹಾಗೂ ಹೀಗೂ ವ್ಯಾಟ್ ಎಲ್ಲಿ ಅಪಾಯದಲ್ಲಿ ಸಿಲುಕಿರುವನೆಂದು ಗುರುತಿಸಲು ಸುಮಾರು ಒಂದು ತಾಸು ಹಿಡಿಯಿತು! ಇತ್ತ ಆವರೆಗೂ....ವ್ಯಾಟ್ ದಿಕ್ಸೂಚಿಯ ಸುಳಿಗೆ ಸಿಲುಕಿ, ಪಥದಿಂದ ಪರದಾಡುತ್ತಲಿದ್ದ.

ಒಂದು ಬಿಳಿ-ಕಿತ್ತಲೆರಂಗಿನ ಜೆಟ್, ಮೋಡದಾಚೆ ತೂರಿಬರುತ್ತಿದ್ದುದನ್ನು ವ್ಯಾಟ್ ಕಾಣುವ ವೇಳೆಗೆ, ಅವನ ಬೀಚ್‌ಕ್ರಾಫ್ಟ್ ಬಲ ಇಂಜಿನ್ ಭುಕ್! ಭುಕ್!" ಎಂದು ಉಗುಳುತ್ತಿತ್ತು ರಾತ್ರಿನಿಶೆಯ ಸೆರಗು....ಸಮಿಾಪ ಆಗುತ್ತಿತ್ತು! ಕಡಲ ನಡುವಿನ ಕತ್ತಲಸೆರಗು ಅದೆಷ್ಟು ಕರಾಳ ಕಪ್ಪು ಎಂಬುವದನ್ನು ವ್ಯಾಟ್‌ಬಲ್ಲ! "ಹ್ಲೇಯ್! ನಾವು ನಿನ್ನನ್ನು ಕೆಳಗಿಳಿಸಿಕೊಳ್ತೇವೊ,

ಹೆದರಬೇಡ!" ಫ್ಯಾಲ್ಕನ್ ಜೆಟ್ ಲೈನರಿನ ಲೆಫ್ಟಿನೆಂಟ್ ಕಮಾಂಡರ್ ಸ್ಟೀವನ್ ಬ್ಲಾಂಕನ್‌ಶಿಪ್, ಭರವಸೆಯಿಯಾಯುವ ನುಡಿಗಳನ್ನಾಡಿದ! "ಅಲ್ಲೇ 'ಕೇತಾಲ್' ಮೇಲೊಂದು ತುರ್ತು ಇಳಿದಾಣವಿದೆ....ನೆಲದತುಂಡು....ಕೇಳಿಯಿತೆ ವ್ಯಾಟ್! ಅಲ್ಲೇ ಬಾ....ಇಳಿ...." ಬ್ಲಾಂಕನ್‌ಶಿಪ್, ವ್ಯಾಟನನ್ನು ತನ್ನ ವಿಮಾನವನ್ನೆ ಅನುಸರಿಸುವಂತೆ ಸಂಕೇತ ನೀಡಿದ.

ನೀಲ ಕಡಲಿಗೆ ಬಿಳಿ ಮುಗಿಲ ಹೊಳಪು ಪ್ರತಿಫಲಿಸಿದಂತೆ, ಬಿಳಿಯಟೊಪ್ಪಿಗೆ ಧರಿಸಿದಂತಿತ್ತು ಮೊರೆಯುವ ಕಡಲು! ನೀಲಕಡಲ ಬಿಳಿಯ ತೆರೆ, ಎತ್ತರೆತ್ತರಕ್ಕೆ ಚಿಮ್ಮುತ್ತಲಿವೆ! ಅಲ್ಲಿಯೆ, ಕಡಲಿನ ಮೇಲ್ಮೈ ಮೇಲೆಯೆ ವಿಮಾನವು ಹಾದು ಹೋಗುತ್ತಿರುವಂತೆ, ಬ್ಲಾಂಕನ್‌ಶಿಪ್ ವ್ಯಾಟನ್ನು ಕೂಗಿ ಕರೆದ—ಸಂಕೇತವ ಮೂಲಕ! "ಅಲ್ಲಿ....ಅಲ್ಲೇ ನಿಲ್ಲು. ವಾಲ್ಟರ್ ವ್ಯಾಟ್....ಹತ್ತೇ ಕಿ.ಮೀ. ದೂರ....ನೀನು ನೆಲವನ್ನು ನೋಡುತ್ತೀಯೆ...."

ಆದರೆ, ಆದದ್ದೊ? ವ್ಯಾಟನ ವಿಮಾನದ ಬಲ ಇಂಜಿನ್ ಉಗುಳುತ್ತಿದ್ದುದು ಒಮ್ಮೆಲೇ ಅಸ್ತಮಾ ರೋಗಿ ದಮ್ಮುಕಿದು ಕೆಮ್ಮಿದಂತೆ, ಫೊಕ್ಕನೆ ಕೆಮ್ಮಿ ಹಾಗೆಯೇ ನಿಂತಿತು....ನಿಂತೇ ಹೋಯಿತು! ಎಡಭಾಗದ ಇಂಧನದ ಟ್ಯಾಂಕ್ ಒಣಗಿಹೋಗಿ, ಇನ್ನೊಂದು ಎಂಜಿನ್ ಮೋಟಾರನ್ನೇ ಸಾಯಿಸಿತು! ಯಾವುದೇ ಯಾಂತ್ರಿಕ ನೆರವು ಇರದ ವ್ಯಾಟ್, ಈಗ ನೀಲಕಡಲ ನಡುವೆ ಒಂಟಿ, ತಬ್ಬಲಿ! ವಿಮಾನವು ನೇರ ನೀಲ ಜಲದತ್ತ ಧಾವಿಸಿತು. ವಿಮಾನವನ್ನು ಹೇಗಾದರೂ ಮಾಡಿ ಏರಿಸಲು ತೂಗಾಡಿಸಿದ, ಇಳಿವ ವೇಗ ತಗ್ಗಿಸಲು ಪ್ರಯತ್ನಿಸುತ್ತಲೇ ವ್ಯಾಟ್ ಕಿರಲಿದ, "ನಾನು ಹೋಗುತ್ತಿದ್ದೇನೆ, ನಾನು ಹೋಗುತ್ತಿದ್ದೇನೆ! ನನ್ನನ್ನು ಉಳಿಸಿ!"

ಕಮಾಂಡರ್ ಬ್ಲಾಂಕನ್‌ಶಿಪ್ ದಿಗ್ಭ್ರಮೆಗೊಂಡ! ಅರೆ ತಾಸು ದಿಕ್ಕೇ ತೋಚಲಿಲ್ಲ. ವ್ಯಾಟನ ಬ್ರೀಚ್‌ಕ್ರಾಫ್ಟ್ ದೀಪಸಾಲು, ಕಡಲನ್ನಪ್ಪಳಿಸಿತು, ಹಾಗೆಯೇ ಕತ್ತಲಗರ್ಭದಲ್ಲಿ ಕರಗಿಹೋದವು! "ಓಹ್" ಎಂದು ಕೈಕೈ ಹಿಸುಕಿ ಕೊಂಡ ಕಮಾಂಡರ್, ತನ್ನ ಜೆಟ್‌ಲೈನರ್ ಅನ್ನು ಅಲ್ಲೇ ಕಡಲ ಮೇಲೆಯೆ, ಸನಿಹದಲ್ಲೆ ಹಾಲಿಸುತ್ತ ಹಾದುಹೋದ—ವಿಮಾನದ ವೇಗವನ್ನು ತಗ್ಗಿಸುತ್ತ! ಯಾರದೇ ಸುಳಿವು ಇಲ್ಲ! ಮನುಷ್ಯನೂ ಇಲ್ಲ....ವಿಮಾನದ ಅವಶೇಷ ತುಣುಕೂ ಕಾಣಿಸುತ್ತಿಲ್ಲ!

ಕಮಾಂಡರ್‌ನ ಜತೆಗೇ ಹೊರಟಿದ್ದ ವಾಯುಪಡೆಯ ೧-೧೩೦ ಸಾಲಿಗೆ ವಿಮಾನವೂ ಒಂದು ದೊಡ್ಡ ಪ್ಯಾರಾಚೂಟ್ ಅನ್ನು ವಿಮಾನದ ಮಗ್ಗುಲಲ್ಲಿಯೆ

ಇಳಿಬಿಟ್ಟಿತು. ಆದರೆ, ಮತ್ತೆ ನಾಲ್ಕು ಸಲ ಪ್ರದಕ್ಷಿಣೆ ಮಾಡಿದರೂ ವಿಮಾನದ ಪಕ್ಕಗಳನ್ನು ಕಾಣಲಾಗಲಿಲ್ಲ! ಹೋಗಲಿ, ಪ್ರಾಣವುಳಿಸಿಕೊಳ್ಳಲು ತೇಲು ದೋಣಿ ಯಾದರೂ ಕಾಣಬಾರದೆ! ಅದೂ ಇಲ್ಲ 'ಯಾವುದೇ ತುರ್ತು ಸಮಾಚಾರ, ಅಪಾಯದ ಸಂಕೇತ ಕೂಡ ವಿಮಾನದ ರೇಡಿಯೊ ಸಿಗ್ನಲ್ ವರದಿ ಮಾಡಲೆ ಇಲ್ಲ! "ವಾಲ್ಟರ್ ವ್ಯಾಟ್ ಸತ್ತಿರುವುದೇ ಖಂಡಿತ" ಎಂದುಕೊಂಡರು ವಾಯು ದಳದವರು ವಿಮಾನದ ಸಹಚಾಲಕ ಮೈಕ್‌ಫ್ಲಾಹರ್ಟಿ, ಹಾಗೆಯೇ, ಇಂಧನ ವೆಷ್ಟಿದೆಯೆಂಬುದನ್ನು ಪರಿಶೀಲಿಸಿದ "ಓಹ್ಹ್! ಆಗಲೇ ಇಂಧನ ಖಾಲಿಯಾಗು ತ್ತಿದೆ! ಸಂಜೆ ೬ ಘಂಟೆಯು ಸಂದಾಯಿತು" ವಾಯುಪಡೆಯ ವಿಮಾನದವರು ಫ್ಲಾರಿಡಾದ "ಕೀವೆಸ್ಟ್" (Keywest)ಗೆ ವಾಪಸ್ ಆದರು. ಹವಾಕನಾದ ಕಮಾಂಡರ್, ನೋವಿಂದ ನುಡಿದ: "ನಾವು ಏನೇನು ಮಾಡಬಹುದೊ ಅದೆಲ್ಲ ವನ್ನೂ ಮಾಡಿ ಮುಗಿಸಿದೆವು. ಮತ್ತೆ ಪೆಟ್ರೋಲ್ ತುಂಬಿಸಿಕೊಂಡು ಬರೋಣ, ವ್ಯಾಟನನ್ನು ಪತ್ತೆ ಹಚ್ಚಲೇಬೇಕು!" ಯಾರೂ ಒಲ್ಲೆ ಎನ್ನಲಿಲ್ಲ.

ಇತ್ತ ಕಡಲಿಗೆ ಬಿದ್ದವನ ಕತೆಯೊ, ವ್ಯಥೆಯೋ! ಅವನಿಗೆ, ತನ್ನ ನೆತ್ತಿಯೇ ವಿಮಾನದ ಉಕ್ಕಿನ ಜೀನುಗಳಿಗೆ ಬಡಿದಂತೆ ಅನುಭವವಾಯಿತಷ್ಟೆ! ವಿಮಾನವು ಎಗರಿ, ಎಗರಿ, ಕಡಲಿನೊಳಕ್ಕೇ ಧೊಪ್ಪನೆ ರಾಚಿಕುಸಿದಿತು. ವಿಮಾನದ ಎರಡು ಪಕ್ಕಗಳನ್ನು ಎಳೆದುಕೊಂಡ ವಾಲ್ಟರ್, ಒಂದು ರೆಕ್ಕೆಗೆ ಹಾಗೇ ನೇತುಬಿದ್ದ. ಲಗುಬಗೆಯಿಂದ ತನ್ನ ತೇಲುಕವಚ ತೆಗೆದು ಶಕ್ತಿಮೀರಿ ಊದಿ, ಗಾಳಿತುಂಬಿಸಿದ; ಯಾವುದೊ ಕಡಲ ಕರೆಯ ರಕ್ಷಕ ವಿಮಾನದ ದೀಪಗಳು ಅವನ ಕಡೆಯೇ ಸಾಗಿ ಬರುತ್ತಿದ್ದುದನ್ನು ಕಂಡ! ತನ್ನ ವಿಮಾನದ ಒಂದು ಪಕ್ಕದ ಉರಿಯ ತೂತಿನ ಮೂಲಕ ಹಾಗೆಯೆ ಹೊತ್ತಿಸಿ, ಸಂಕೇತ ನೀಡಿದ. ಅದೇನೂ ಪ್ರತಿಕ್ರಿಯೆ ನೀಡಲಿಲ್ಲ, ಪ್ರಯತ್ನವೆಲ್ಲ ನಿಷ್ಫಲ! ಬೀಚ್‌ಕ್ರಾಫ್ಟ್‌ನ ಇನ್ನೊಂದು ಪಕ್ಕದಲ್ಲಿದ್ದ ಇಂಧನದ ಮುಚ್ಚಳದ ಮೂಲಕ ಹಾಗೆಯೆ ಹೊತ್ತಿಸಿದ, ಸಂಕೇತ ನೀಡಿದ, ಅದೇನೂ ಪ್ರತಿಫಲ ನೀಡಲಿಲ್ಲ. ಮತ್ತೊಂದು ಕಡೆಯ ಇಂಧನದ ಮುಚ್ಚಳ ಕುಸಿದು ವಾಲ್ಟರನ ಕೈಗೇ ಕಿತ್ತುಬಂದಿತು! ದೊಪ್ಪನೆ ಬಡಿದು ಕಿರಲಿದ ವಾಲ್ಟರ್ 'ಕೈಗೆ ನೋವಾಯಿತಷ್ಟೆ ಇನ್ನು.... ತನ್ನ ಗತಿ'

ವಿಮಾನದ ರೆಕ್ಕೆ ಅವನಡಿಯಲ್ಲೆ ಹಾಗೇ ಕಡಲಲ್ಲಿ ಮುಳುಗುತ್ತಿರುವ ಅನುಭವವಾಯಿತು, ವ್ಯಾಟನಿಗೆ ತನ್ನ ಮೂಗಿನ ನೇರಕ್ಕೇ ಕಡಲಲ್ಲಿ ಇಳಿಯುತ್ತ ಲಿದೆ, ತಾನಿರುವ ಬೀಚ್ ಕ್ರಾಫ್ಟ್! ಕೆಲವು ಸೆಕೆಂಡುಗಳಷ್ಟೆ. ವಿಮಾನವು ನೀರ

ಕಡಲೊಳಹೊಕ್ಕಿತು, ನೆಲೆಯಿಂದ ಆಳದ ಕಡಲ ನೀರಲ್ಲಿ ವಾಲ್ಟರ್ ಪ್ರಾಣ ಉಳಿಸಿಕೊಳ್ಳಲು ಹೆಣಗತೊಡಗಿದ!

ವಾಲ್ಟರ್, ಕಡಲಲ್ಲಿ ಗಂಡಾಂತರವೊದಗಿದರೆ, ಜೀವ ಉಳಿಸಿಕೊಳ್ಳುವಂತೆ ತರಬೇತಿ ಪಡೆದಿದ್ದ. ಹೇಗಾದರಾಗಲಿ, ತಾನು ಬದುಕಿ ಉಳಿಯಲೇಬೇಕು—ಅದು ಅವನ ಸಂಕಲ್ಪ. ಹೊರಗೆ ಕವಿದಿದ್ದ ಕಪ್ಪು ಕತ್ತಲ ನಿಗೂಢತೆ! ಒಟ್ಟಾರೆ ೩೦ ನಿಮಿಷ ಸರಿಯಿತು. ವಾಲ್ಟರ್, ಗಡಗಡನೆ ನಡುಗುತ್ತಿದ್ದ. ಅವನ ಎರಡು ಕಾಲುಗಳೂ ಕೊರೆವ ಕಡಲ ನೀರಲ್ಲಿ ಸೆಟೆತುಕೊಳ್ಳಲಾರಂಭ! ಅಪ್ಪಳಿಸುವ ಎತ್ತರದಲೆಗಳಲ್ಲಿ ಸಿಲುಕಿದ ವಾಲ್ಟರ್, ತಾನು ಹೀಗೆಯೆ ಹೆಣಗುತ್ತ ಸ್ವಲ್ಪ ಸಮಯ ಬದುಕಿದ್ದರೂ, ತನ್ನನ್ನು ಹುಡುಕುತ್ತಿರುವವರ ದೃಷ್ಟಿಗೆ ಮಾತ್ರ ಅಗೋಚರನಾಗಿ ಉಳಿದೆನೆ ಎಂದುಕೊಂಡು ತನ್ನ ದುರದೃಷ್ಟವನ್ನು ಹಳಿದುಕೊಂಡ, ಕಿರಲಿ ಗೋಳಿಟ್ಟ! ಮೊರೆಯುವ ಕಡಲೇ ಉತ್ತರವಷ್ಟೆ! ಹಾಗೆಯೆ ಈಸುವುದು ಸರಿ ಎಂದುಕೊಂಡ ವಾಲ್ಟರ್ ಈಸತೊಡಗಿದ "....ಕೇಸಾಲ್" ಭೂಪ್ರದೇಶ ಇಂಥ ದಿಕ್ಕಲ್ಲೆ ಇರಬಹುದೆಂದು ಆಲೋಚಿಸಿ! ಮನಸ್ಸು ನಡೆಸಿದತ್ತ ಮಾರ್ಗ!

ಕಡಲ ನಡುವೆ ಎದ್ದ ಭೀಕರ ಮಂಜು-ಮಳೆಯೊಡಗೂಡಿದ ಬಿರುಗಾಳಿ ಇಡೀ ಕಡಲನ್ನೇ ಕಡೆಯಿತು, ಸುರುಳಿ ಸುರುಳಿ ಸುತ್ತಿತು! ಕೇವಲ ಒಂದೇ ತಾಸಿನಲ್ಲಿ ವಾಲ್ಟರ್ ದಿಕ್ಕು ತೋರದೆಹೋದ. ತಾನೆಲ್ಲಿ ಈಜಲಾದೀತು ಈ ಕಡಲ ಹೊಯ್ಗುಳಿಯಲ್ಲಿ! ಅವನ ನಂಬುಗೆ ಬಲು ಬೇಗನೆ ಸೋರಿಹೋಯಿತು ....ಸಾಲದುದಕ್ಕೆ ಅವನ ತೇಲುಕವಚ ಬೇರೆ ನೀರು ಸೇರಿ ಮೆದು ಆಗುತ್ತಿರುವಂತೆ ಅನ್ನಿಸಿತು! ಹಾಗೆಯೆ ಪ್ರಯಾಸ ಪಟ್ಟು ಗಾಳಿಯೂದಿ ಉಬ್ಬಿಸಿದ....ಕೊಳವೆಯ ಜೋಡಿಸಿದ ಭಾಗದಲ್ಲಿ ಗಾಳಿ ಹೊರಹೋಗುತ್ತಿದ್ದು....ಹಾಗೇ ತೇಲಂಗಿ ಕುಸಿಯಿತು! ಪ್ಲಾಸ್ಟಿಕ್ ಕೊಳವೆ ಒಡೆದುಹೋಗಿ, ಇಡೀ ತೇಲಂಗಿ ಮುದುಡಿಕೊಂಡಿತು! ಎಲ್ಲಿ ಒಡೆದಿತ್ತೊ ಆ ಭಾಗವನ್ನೆ ಅದುಮಿಹಿಡಿದ ವಾಲ್ಟರ್ ಮತ್ತೆ ಕಸುವಿಂದ ಊದಿದ, ಗಾಳಿ ತುಂಬಲು ಪ್ರಯತ್ನಿಸಿದ!

ಕೊರೆಯುವ ಕಡಲ ತೆರೆಗಳಲ್ಲಿ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಏಳುತ್ತ ಬೀಳುತ್ತ ಈಸಿದ ವಾಲ್ಟರ್. ಉಪ್ಪುನೀರು ಬಡಿದು ಬಡಿದು ಅವನ ನೆತ್ತಿಯಿಂದ ರಕ್ತದ ಹನಿ ತೊಟ್ಟಿಕ್ಕಿದವು: "ಅಯ್ಯೋ ದೇವರೆ! ಇನ್ನು ಈ ನೆತ್ತರಿನ ವಾಸನೆಯೇನಾದರೂ ಹುಲಿಮೀನು ಹಿಡಿಯಿತೊ! ಅವುಗಳಿಗೆ ನಾನು ಬಲಿ

ಅಷ್ಟೆ!" ಎಂದು ಹಲುಬಿದ, ವಾಲ್ಟರ್....ಅವನ ಊಹೆಯು ಸುಳ್ಳಾಗಲಿಲ್ಲ. ಇಷ್ಟಾದರೂ ಅವನು ತಿಳಿದಿದ್ದ : ನಾನು ಬದುಕಿ ಉಳಿಯಲು ದೃಢವಾಗಿ ನಿಂತುಹೋಗಬೇಕು; ಸೋತು ಶರಣಾಗಿ ಸೊಪ್ಪಾಗುವುದೆಂದರೆ ಆತ್ಮಹತ್ಯೆ ಮಾಡಿಕೊಂಡಂತೆ. "ಇಂದೇ ನನ್ನ ಅಂತಿಮ ದಿನವಾದರೆ....ಓ, ದೇವರೆ! ನನ್ನ ಎಲ್ಲ ಅಕೃತ್ಯಗಳನ್ನೂ ಕ್ಷಮಿಸು!" ಎಂದು ವ್ಯಾಟ್ ಪ್ರಾರ್ಥಿಸಿದ.

ಆಳದ ಕಡಲ ನೀರಿನಲ್ಲಿ ನಿಲುವೀಸು ಈಸತೊಡಗಿದ ವಾಲ್ಟರ್, ಮತ್ತೆ ತನ್ನ ತೇಲಂಗಿಯನ್ನು ಆದಷ್ಟೂ ಸುವ್ಯವಸ್ಥಿತ ರೀತಿಯಲ್ಲಿ ಸಜ್ಜುಗೊಳಿಸಿದ. ಅದರಿಂದ, ತನ್ನ ಕಡೆಯಾಸೆಗಳನ್ನು ತಾನೊಲಿದವರಿಗೆ ತನ್ನ ತೇಲಂಗಿಯಾದರೂ ಒಯ್ಯಲೆಂಬುದೇ ವ್ಯಾಟ್‌ನ ಗುರಿ. ತೊಯ್ದು ಸೆಟೆದಿದ್ದ ತನ್ನ ಸಮವಸ್ತ್ರದ ಷರ್ಟ್‌ನಿಂದ "ವಿಮಾನ ಪಡೆಯ ಗುರುತಿನ ಬ್ಯಾಡ್ಜ್" ಅನ್ನು ತೆಗೆದು, ಅದರ ಮೇಲೆ ಗಡಿಯಾರದ ಚೈನಿನಿಂದ ಕೆರೆದು ಬರೆದ: "ತೃಷಾ....ಮನೆ!" ಇಷ್ಟೆ. ತನ್ನ ಈ ಉಯಿಲನ್ನು ತೇಲುವ ಕವಚ ಪತ್ತೆ ಮಾಡುವ ಯಾರಾವರೂ ಗುರುತಿಸಿ, ಓದುತ್ತಾರೆ, ಅರ್ಥೈಸುತ್ತಾರೆ. ಉಯಿಲಿನ ಸಾರಾಂಶವಿಷ್ಟೆ: ವಾಲ್ಟರ್ ವ್ಯಾಟ್, ಫ್ಲಾರಿಡಾದ ತನ್ನ ಮನೆಯನ್ನು ಅವನ ಪ್ರಿಯ ಗೆಳತಿ—ಪ್ರೇಯಸಿ–ತೃಷಾ ಲ್ಯಾನ್ಸ್‌ಕೇಲಳಿಗೆ ಬಿಟ್ಟುಹೋಗಿದ್ದೇನೆಂದು! ಗುರುತಿನ ಬ್ಯಾಡ್ಜ್ (Badge)ನ ಇನ್ನೊಂದು ಕಡೆ, ಸಾಧ್ಯವಾದಷ್ಟೂ ಕಸುವಿಂದ ಗೀರಿ ಕೊರೆದ: "೧೪೩ ಎಂ.ಡಿ.ಜೆ. ಡಬ್ಲ್ಯೂ ಟಿ." ಈ ಸಂಕೇತ—ಸಂಖ್ಯೆಗಳೆಲ್ಲ ಅವನು ಬಳಸುತ್ತಿದ್ದ ಮಾತಿನ ಸಂಕೇತಗಳು: "ನಾನು ನಿನ್ನನ್ನು ಪ್ರೀತಿಸುತ್ತೇನೆ" ಹಾಗೂ ತನ್ನ ಅಪ್ಪ–ಅಮ್ಮ, ಮುದ್ದಿನ ಮಗಳು ೧೨ರ ಪ್ರಾಯದ ಜೆನ್ನಿಫರ್, ೧೦ರ ವಯಸ್ಸಿನ ಮಗ ವಾಲ್ಟರ್ ಹಾಗೂ ಪ್ರೇಯಸಿ ತೃಷಾಳಿಗೆ ವ್ಯಾಟ್, ಕಡಲ ನಡುವಿಂದ ಕೊರೆದ ಅಂತಿಮ ಪತ್ರದ ಸಾಲುಗಳು. ವ್ಯಾಟನಿಗೆ ಮದುವೆಯ ನಂಟು ಮುರಿದು, ವಿಚ್ಛೇದನದಲ್ಲಿ ಪರ್ಯವಸಾನಗೊಂಡಿತ್ತು. ಮಕ್ಕಳು, ಅಮ್ಮನೊಂದಿಗೆ ಟೆನಿಸ್ಸೀಯಲ್ಲಿದ್ದರು.

ನೀರಿನಲ್ಲಿ ಜಾರಿಹೋಗುತ್ತಲಿದ್ದ ಲೋಹದ ಬ್ಯಾಡ್ಜನ್ನು ಬಿಗಿಹಿಡಿದು, ಮತ್ತೆ ತನ್ನ ಜೀವವುಳಿಸುವ ಅಂಗಿಯ ತೇಲುಕವಚಕ್ಕೆ ಬಲವಾಗಿ ಸಿಕ್ಕಿಸಿದ. ಮತ್ತೆ ಆರಂಭ, ಪ್ರಾಣ ಉಳಿಸಿಕೊಳ್ಳಲು ಹೋರಾಟ! ಹಾಗೆಯೆ ತನ್ನ ವಾಚನ್ನು ನೋಡಿಕೊಂಡ: ಎರಡು ಗಂಟೆ! ಅಷ್ಟೇಯೆ?! ಈಗಲೊ ಆಗಲೋ ಷಾರ್ಕ್ ಮುತ್ತಿಯಾವು? "ಹತ್ತು ಗಂಟೆ....ಇನ್ನೂ....ಅದೆಷ್ಟು ಸಮಯ ಹೀಗೆ ಹೆಣಗಲಾದೀತು ನನಗೆ?" ಅವನಿಗವನೇ ಬಡಬಡಿಸಿದ.

ಹತ್ತು ಗಂಟೆಯ ಗಡಿರೇಖೆ ಸಮೀಪಿಸುವ ಮುಂಚೆಯೆ ಅವನಿಗೆ ತನ್ನ ಕಾಲನ್ನು ಬಲವಾಗಿ ಒಮ್ಮೆಲೇ ಒದ್ದಂತಹ ಅನುಭವ! ಯಾವುದೊ ಗಡುಸಾದ ಮೈಯ ಜಲಚರ ಧಾವಿಸುತ್ತ ಕಾಲನ್ನೇ ತಿವಿದಂತೆ! ಓಹ್! ಖಂಡಿತ ಅದೊಂದು ಹುಲಿಮೀನೇ!

ಹಾಗೆಯೇ ಸೆಕೆಂಡು ಕಾದ. ಕಾಲಿನ ಶರೀರದ ಮಾಂಸವಿಡೀ ಜೋಲಾಡುವಂತಾಗಿತ್ತು! ರಕ್ತದ ಹನಿ ತೊಟ್ಟಿಕ್ಕುತ್ತಿದೆ! ಮನುಷ್ಯನ ವಾಸನೆ ಕಂಡುಹಿಡಿದಿವೆ. ಅವು ನನ್ನನ್ನು ಖಂಡಿತಾ ಪತ್ತೆ ಮಾಡಿವೆ! ವ್ಯಾಟ್, ತಲೆ ಕೆರೆದ "ಮತ್ತೆ ಬಂದೇ ಬರುತ್ತವೆ!" ಅವನ ನಿರೀಕ್ಷೆ ಹುಸಿಯಾಗಲಿಲ್ಲ.

ಹತ್ತು ಗಂಟೆಯ ವೇಳೆಗೆ ಗಡಿಯಾರದ ಮುಳ್ಳು ಚಲಿಸಿದಂತೆ, ವಾಲ್ಟರನ ಜೀವದ ಕೊನೆ ಗಳಿಗೆ....ಮತ್ತೆ ನಟ್ಟಿರುಳಿಗೇ ಸಂದಾತು ಎಂದು ಅವನೇ ಬಡಬಡಿಸಿದ....ಇನ್ನು ಎರಡು ತಾಸಾದರೂ ಉಳಿಯುವೆನೆಂಬುದೇ ಅವನ ಆಸೆ! ಹರಹಿದ್ದ ತೇಲಂಗಿಯ ಬಲಗಡೆಯಲ್ಲಿ ಸೋರಿ, ಗಾಳಿ ಹೊರಹೋಗುತ್ತ ನೀರು, ಒಳಗೆ ನುಗ್ಗಲಾರಂಭ! ಮತ್ತೆ ಅದನ್ನು ಹೊರಹಾಕುವುದು, ಗಾಳಿಯೂದಿ ಅಂಗಿಯನ್ನು ಉಬ್ಬಿಸುವುದು! ಆದದ್ದಿಷ್ಟು: ಕಡಲ ತೆರೆಯ ಹೊಡೆತಕ್ಕೆ ಆ ತೇಲಂಗಿಯ ಊದುಕೊಳವೆಯು ಕಿತ್ತು ಹೊರಬಿತ್ತು, ವ್ಯಾಟ್ ಬಿಡಲಿಲ್ಲ! ಮತ್ತೆ ಊದಿದ, ಗಾಳಿ ತುಂಬಿಸಿದ, ತನ್ನ ಇನ್ನೊಂದು ತೋರುಬೆರಳನ್ನು ಟ್ಯೂಬಿನ ರಂಧ್ರದ ಮೇಲೆ ಅದುಮಿ ಹಿಡಿದ ಏನೇ ಆಗಲಿ ನೀರಿನ ಮೇಲ್ಮೈಯಿಂದ ತಲೆಯನ್ನು ಮೇಲೆತ್ತಿರಬೇಕು!

ಹಾಗೆಯೇ ತೇಲಂಗಿಯ ಉದ್ದಕ್ಕೂ ಮೈಚಾಚಿ, ಬೆನ್ನು ಮಗ್ಗುಲಾದ, ಪಟಪಟನೆ ಬೀಳುತ್ತಿದ್ದ ಮಳೆನೀರು, ಊದಿಕೊಂಡ ನಾಲಗೆಯ ಮೇಲೂ, ಉಪ್ಪಿನಿಂದ ಉರಿಯುತ್ತಿದ್ದ ಕಣ್ಣುಗಳ ಮೇಲೂ ಬಿದ್ದು ತೊಳೆಯಲಿ!" ಎಂಬ ಮನದಿಂದ ಆಕಾಶದಲ್ಲಿ ಮೋಡಗಳು ಮೆಲ್ಲನೆ ತುಸುವೇ ಚಲಿಸಿ, ಬೇರೆ ಬೇರೆ ಆದವು. ನಟ್ಟಿರುಳ ಬಾನಲ್ಲಿ ನಾಕಾರು ಚುಕ್ಕಿ ನೆಯ್ದುಕೊಂಡವು, ಬೆಳಗತೊಡಗಿದವು! ಒಂದು ನಕ್ಷತ್ರವಂತೂ, ಬೇರೆಯವುಗಳಿಂದ ಬೇರೆ ಆಗಿ, ತನ್ನತ್ತಲೇ ಚಿಮ್ಮುತ್ತ ಬಂದಹಾಗೆ ಅನಿಸಿತು ವಾಲ್ಟರನಿಗೆ! "ಇದೇನು ಅಪಲಕ್ಷಣ! ನಕ್ಷತ್ರ ಬೀಳುವುದನ್ನು ಕಾಣುವುದೆ? ನಾನೆಲ್ಲಿಗೆ ಹೋಗಬೇಕೊ ಅಲ್ಲಿಗೆ—ಕಾಣದ ಊರಿಗೆ—ಕರೆದೊಯ್ಯುವಂತೆ ಇಳಿಯುತ್ತಿದೆ!" ಎಂದುಕೊಂಡ ವ್ಯಾಟ್ ಮತ್ತೆ ಬೇಡಿದ: "ದೇವರೆ! ದಯಮಾಡಿ ನನ್ನ ಜೀವವನ್ನು ಬೇಗನೆ ತೆಗೆದುಕೊ."

ಇತ್ತ ಬಾನಲ್ಲಿ ಚಟುವಟಿಕೆ....

ವಾಲ್ಟರ್ ವ್ಯಾಟನನ್ನು ಪತ್ತೆ ಹಚ್ಚುವ ಪ್ರಯತ್ನ ಸಾಕಷ್ಟು ಬಿರುಸಿನಿಂದಲೇ ಮುಂದುವರಿಯಿತು. ನಾಡಿಗಾಗಿ ದುಡಿಯುವ ವಾಯುದಳದವನನ್ನು ಕಳೆದುಕೊಳ್ಳಲು ಕಮಾಂಡರ್ ಬ್ಲಾಂಕನ್‌ಷಿಪ್ ಸರ್ವಥಾ ತಯಾರಿರಲಿಲ್ಲ!

ಬಾನಿನಲ್ಲಿ ಪಡುವಣ ದಿಸೆಯತ್ತ ಲೆಫ್ಟಿನೆಂಟ್ ಬ್ಲಾಂಕನ್‌ಷಿಪ್ ತನ್ನ ಜೆಟ್ ವಿಮಾನ "ಕೇಸಾಲ್" ಭೂಶಿರ ಪ್ರದೇಶದೆಡೆಗೆ ಒಯ್ದು, ಹಾಗೆಯೆ ಅದರ ಮೇಲೆಯೆ ವಿಮಾನವನ್ನು ನೇರ ನಿಲ್ಲಿಸಿ, ವಾಲ್ಟರನನ್ನು ಹುಡುಕುವ ಹೋರಾಟ ನಡಸಿದ್ದ ! "ಕೀ ವೆಸ್ಟ್" ಎಂಬಲ್ಲಿ ವಿಮಾನಕ್ಕೆ ಸಾಕಾಗುವಷ್ಟು ಇಂಧನ ತುಂಬಿಸಿ, ಮರಳಿದ್ದ ಅವನ ಸಂಗಡವೇ ನೌಕಾಪಡೆಯ ಹೆಲಿಕಾಪ್ಟರ್, ವಾಲ್ಟರನು ಮುಳುಗಿದ ಕಡಲತಾಣ ಪತ್ತೆ ಮಾಡುವಲ್ಲಿ ನೆರವಾಗಲೆಂದು ಹಾರುತ್ತಿದ್ದರೂ, ಕಣ್ಣಿಗೆ ಕಾಣಿಸದು! ಸುರಿಸುರಿಯುವ ಉಧೋ! ಜಲಧಾರೆ! ಮುಂಜಿಂದೊಳಗೂಡಿದ ಮಳೆ, ಗುಡುಗು, ಮಿಂಚಿನ ಫಳಾರ್ ಎಂದು ಚಾಚುವ ನಾಲಗೆ, ಕಣ್ಣುಗಳನ್ನು ಕ್ಷಣಕಾಲ ತಬ್ಬಿಬ್ಬಾಗಿಸುವ ಚಿನ್ನಾಟ ಆಡುತ್ತಿರಬೇಕಾದರೆ, ಕಣ್ಣಿಲ್ಲಿ ಕಂಡೀತು! ಹೀಗೆಯೆ ಹುಡುಕುವುದಾದಲ್ಲಿ ವಿಮಾನ, ವಾಯುಪಡೆ—ಇಬ್ಬರಿಗೂ ಆಪತ್ತು ಖಾತ್ರಿ! ತಾಸುಗಟ್ಟಲೆ ಕಡಲುದ್ದಕ್ಕೂ ಹಾರಿಯಾಗಿತ್ತು! ಬ್ಲಾಂಕನ್‌ಷಿಪ್, ಹೆಲಿಕ್ಯಾಪ್ಟರಿಗೆ ಸೂಚನೆಯಿತ್ತು, ಹಿಂದಿರುಗಿದ! ಬೆಳಕು ಹರಿದು ಹಗಲು ಕೋರೈಸಲಿ, ಆಗ ಹುಡುಕಿದರಾಯ್ತು !

ಕಡಲಲ್ಲಿ....

ವಿಮಾನದ ವಿಫಲಯತ್ನ ಆ ರೀತಿಯದಾದರೆ, ಇಲ್ಲಿ, ಆಳದ ಮೊರೆವ ಕಡಲಿನಲ್ಲಿ, ದಣಿದು ಸೊಪ್ಪಾದ ಈಸುಗಾರ, ಮುಂಬೆಳಗಿನ ಬಾನಿನಲ್ಲಿ ವಿಮಾನಗಳು ನೆರೆದು ತನ್ನನ್ನೇ ಅರಸುತ್ತಿವೆ ಎಂದೇ ಕಲ್ಪಿಸಿಕೊಂಡಿದ್ದ! ನಡುರಾತ್ರಿ ಸರಿಯಿತು. ವಾಲ್ಟರ್ ತನ್ನ ಜೀವ ಉಳಿಯುವ ಕ್ಷಣಗಳನ್ನು ಇನ್ನೂ ಮುಂದೂಡಿದ. ಬೆಳಕು ಹರಿದು ಹಗಲು ಹೊತ್ತು ಮೂಡುವ ತನಕ ಬದುಕಿ ಉಳಿದು ಹೋರಾಡುತ್ತೇನೆ! ಅದೇ ಅವನ ನಿರ್ಧಾರ.

ನಿಲುವೀಸು ಈಸುತ್ತಿದ್ದ ವ್ಯಾಟನಿಗೆ ಒಮ್ಮೆಲೆ ಕಾಲಿನ ಮೇಲೊಂದು ಬಲವಾದ ಒದೆ ಬಿತ್ತು! ಕಡಲ ನೀರಿನ ಕೊರತೆ, ಸೆಟೆದ ಕಾಲುಗಳು, ಅದರ ಮೇಲೊಂದು ಒದೆ....ಸುರಿಯುವ ಮುಂಜಿನ ಮಳೆ! ಇನ್ನೊಂದು ಷಾರ್ಕ್

ನುಗ್ಗಿತು, ಥಕ್ಕನೆ ವ್ಯಾಟ್ ಆದಷ್ಟೂ ಕಸುವಿಂದ ಝಾಡಿಸಿ ಒದ್ದ! ಗಾಳಿ ಹೊರಹೋಗದಂತೆ ಅದುವರಿ ಹಿಡಿದಿದ್ದ ಕೈಗಳನ್ನು ತೇಲುವಂಗಿಯಿಂದ ಎಳೆದು ಕೊಂಡ....ನೀರು ರಂಧ್ರದ ಮೂಲಕ ನುಗ್ಗಿತು, ತೇಲಂಗಿಯೊಳಕ್ಕೆ. ನೀರಿ ನೊಳಗೆ ಮುಳುಗಿದ....ಒಂದೂವರೆ ಮೈಲು ಆಳವಿದ್ದಿತು....ತೇಲಂಗಿಯನ್ನು ಹರಿದು, ಅವರಿಂದ ಮುಕ್ತನಾಗುವ ತವಕ, ಚಟಪಟನೆ ದೂರಕ್ಕೆ ಕಿತ್ತೊಗೆದ! ತನ್ನೆಡೆಗೇ ಬಂದಿತು.

"ಏಯ್! ಮಂಕೇ! ನಿಲ್ಲು!" ವ್ಯಾಟ್‌ನ ಒಳದನಿ ನುಡಿಯಿತು. "ನಿನ್ನ ತಲೆಯನ್ನು ಕೈಯೊಂದಿಗೇ ಸೆಳೆದುಕೊ, ಈಗಿಂದೀಗಲೇ! ತೇಲಂಗಿಯು ನೀರಿಂದ ತುಂಬಿ ಕಡಲಲ್ಲಿ ಮುಳುಗಿದಂತೆ, ಹತಾಶೆಯಿಂದ ಬಲವಾಗಿ ತಳ್ಳಿದ, ಪುನಃ ಅವನಿಗೆ ತನ್ನ ಬೆರಳುಗಳು ಒರಟಾದ ರಬ್ಬರಿನ ಚೌಕಟ್ಟಿನ ಮೇಲೆ ಇದ್ದಂತೆ ಅನುಭವವೆ! ಮತ್ತೆ ಬಂತೇ ಮೃತ್ಯು?"

ಕಡಲ ಮೇಲೆದ್ದು ಬಂದ. ತೇಲುಕವಚದ ಹರಿದ ಭಾಗವೊಂದು ಕೈಯಲ್ಲಿ ಇನ್ನೊಂದರಲ್ಲಿ ನೀರಲೆಗಳನ್ನು ಬಡಿಬಡಿದು, ಮೇಲೇರುವ ಸಾಹಸ! ತನ್ನ ಕಲಿತ ವಿದ್ಯೆ, ತಂತ್ರಕ್ಕೇ ಸವಾಲೊಡ್ಡುತ್ತಿದೆ ಪರಿಸರ! ತಲೆಯೆತ್ತಿ ಉಸಿರೆಳೆದು ಕೊಂಡ, ಮತ್ತೆ ನೀರೊಳಗೆ ಮುಖಪ್ರೊಡ್ಡಿದಂತೆ ಮಾಡಿ, ತೋಳುಗಳನ್ನು ಚಾಚಿದ! ಕತ್ತರಿಯಾಕಾರದಲ್ಲಿ ನೀರೊದ್ದು, ಮುಂದುವರಿಯಲು ಹೆಣಗತೊಡ ಗಿದ ವಾಲ್ಟರ್! ತಲೆಯೆತ್ತುವುದು,ಉಸಿರು ಬಿಡುವುದು, ಎಳೆದುಕೊಳ್ಳುವುದು, ಮತ್ತೆ ತೇಲುತ್ತ ಮುಂದುವರಿಯಲು ಪ್ರಯತ್ನ! ನೀರೊದ್ದರೆ, ಷಾರ್ಕ್ ದೂರ ಸರಿದಾವು! ಹಾಗೂ ಹೀಗೂ ಒಂದು ತಾಸು ಅವನು ಹೀಗೆಯೆ ಹೆಣಗಿದ್ದಾನು!

ಸ್ವಲ್ಪ ಮಟ್ಟಿಗೆ ಶಾಂತತೆ ನೆಲಸಿತೇನೊ ಎಂದು ಅನ್ನಿಸಿತು. ಹುಲಿಮೀನು ಗಳು ಕಾಣಲಿಲ್ಲ. ಮತ್ತೆ ತನ್ನ ಬಳಿಯಿದ್ದ ತೇಲುಕವಚವನ್ನೆ ಅದುವರಿ ನೀರನ್ನು ಹೊರದಬ್ಬಿದ, ಗಾಳಿಯೂದಿ ತುಂಬಿಸುವ ಪ್ರಯತ್ನ, ಬೆರಳುಗಳಿಂದ ಟ್ಯೂಬಿನ ತೂತನ್ನು ಒತ್ತಿ ಹಿಡಿದು, ಹಾಗೆಯೇ ತೇಲಂಗಿಯ ಮೇಲ್ಮೈ ಮೇಲೆ ತನ್ನನ್ನೆ ತಾನು ಜಾರಿಸಿಕೊಂಡ! ಅಲೆಗಳು ಏರಿಬರುವದನ್ನೆ ಕಾಯುವುದು, ಮೇಲೆ ತೇಲುವುದು, "ಹೀಗೆಯೇ ನಾನು ಮುಂಜಾವಿನವರೆಗೂ ಹೋರಾಡುತ್ತೇನೆ!" ವ್ಯಾಟ್ ನಿರ್ಧರಿಸಿದ.

ಹುಲಿಮೀನುಗಳ ಧಾಳಿ....

ದೂರದ ದಿಗಂತದಲ್ಲಿ ನೇಸರಿನ ಕೆಂಗಿರಣ ಕಂಡಾಗ ವ್ಯಾಟನಿಗೆ ನಂಬುಗೆ, ಬದುಕುಳಿಯುವ ಆಸೆ, ಒಂದು ಕ್ಷಣ ಮಿಂಚಿತು! ವಿಶ್ವಾಸ ದೃಢಪಡಿಸುವ

ಹೊಂಗಿರಣ ಅವು! ಮತ್ತೆ ಆವರಿಸಿದ ಮೋಡ ಸಾಲಲ್ಲಿ ಹೊತ್ತು ಹತ್ತಿ ಮರೆಯಾಯಿತು. ವಾಲ್ಟರ್ ವಿಮಾನಗಳನ್ನೆ ನಿರೀಕ್ಷಿಸಿದ, ಕೈಕಾಲು ಬಡಿದ, ಯಾವುದೂ ಏನೂ ಕಾಣಬರಲಿಲ್ಲ! ಅವನ ನಂಬುಗೆಯೂ ಕುಸಿಯಲು ಆರಂಭ!

ಹಾಗೆಯೆ ಒಮ್ಮೆ ಕಣ್ಣಿನ ನೇರದೃಷ್ಟಿ ಕಡಲೊಳಗೇ ಬೀರಿದ. ಆತನು ಕಂಡುದಾವದರೂ ಏನು? ಉಬ್ಬಿ ಬಂದ ತೆರೆಯ ಮೂಲಕ ಬರುತ್ತಿರುವ ಬೃಹದಾಕಾರದ ಈಜುರೆಕ್ಕೆಯ ಮತ್ಸ್ಯದೈತ್ಯ! ನೀಲಿ ಮಿಶ್ರಿತ ಕಪ್ಪು ಬಣ್ಣ, ಚಕ್ರಾಕಾರದ ಕಣ್ಣು, ಆಗಾಗ್ಗೆ ಕಾಣುವ ಹಲ್ಲು! ಅಬ್ಬಬ್ಬಾ! ನೀರನ್ನು ಹಾಗೆಯೆ ಕತ್ತರಿಸಿ ಮುಂದೆ ಬಂದಿತು! ಮತ್ತೆ ಅವನ ಎಡಗಾಲಿನ ಮೂಳೆಯ ಮೇಲೆ ಇಡೀ ಮೈ ತಲೆಕೆಳಗಾಗಿಸುವ ಒದೆತ! ವಾಲ್ಟರ್ ವ್ಯಾಟ್ ಗಾಯಗೊಂಡ ನಾಯಿಯಂತೆ ಬೊಗಳಿದ, ಕಿಟ್ಟನೆ ಕಿರುಚಿದ, ಎರಡನೆಯ ಷಾರ್ಕ್ ಜಾರಿ ಹೋಯಿತು....ಹಳದಿ–ಹಸಿರು ಮಿಶ್ರಿತ ಬಣ್ಣದ ದೊಡ್ಡ ಹುಲಿಮೀನು, ಆಳದ ಕಡಲಿನಲ್ಲಿ ಅದೆಲ್ಲಿ ಹುಗಿದಿತ್ತೊ! "ಓಹೊಹ್ಹೊ!" ಎಂದ, ವಾಲ್ಟರ್. ಷಾರ್ಕ್, ಷಾರ್ಕ್, ಎಲ್ಲೆಲ್ಲೂ ಷಾರ್ಕ್ ಮೀನುಗಳ ತಂಡವೇ ಅವನ ಸುತ್ತಲೂ ನೆರೆಯುವುದೆ? ಮೈ ಎಷ್ಟು ಕುಗ್ಗಿಸಿದರೂ ಅಷ್ಟೆ, ಒದ್ದರೂ ಕಾಲಿಗೇ ನೋವು, ಮಂಜುಗಟ್ಟಿದ ತೊಡೆ ಸೆಟೆತ, ಮೈ ಹಿಗ್ಗಲಿಸಿ ಒದ್ದರೂ ಕಷ್ಟವೆ!

ವಾಲ್ಟರ್ ವ್ಯಾಟ್, ಇದೀಗ ಬೆನ್ನ ಮೇಲೆ ಮಗ್ಗುಲಾಗಿ ಉರುಳಿದ. ಕಡಲ ತೆರೆಯ ದಟ್ಟ ನೀಲಿ ಗೋಡೆ, ಎತ್ತರಕ್ಕೆ! ಅದನ್ನು ಛೇದಿಸಿಯೆ ನುಗ್ಗುತ್ತಿದೆ, ಗೂಳಿಯಂತಹ ಷಾರ್ಕ್! ಥಟ್ಟನೆ ಅದು ನೆಗೆಯಿತು, ವಾಲ್ಟರನ ಕಾಲುಗಳನ್ನು ಬುಡಮೇಲಾಗಿಸುವಂತೆ ಒದೆಯಿತು! ಅವನೂ ಅಷ್ಟೇ ವೇಗದಿಂದ ಕಾಲೆಳೆದುಕೊಂಡ, ಅಳಿದುಳಿದ 'ಟೆನಿಸ್‌ಷೂ'ಗಳಿಂದ ಹುಲಿಮೀನಿನ ಕಣ್ಣುಗಳ ನಡುವೆಯೆ ಝಾಡಿಸಿ ಒದ್ದ! ಗುಂಡಿನಂತೆ ಚಿಮ್ಮಿ, ವಾಪಸ್ಸಾಯಿತು, ೬ ಮೀಟರು ದೂರ ಮಗ್ಗುಲಿಗೆ! ಅಲ್ಲಿಯೆ ಗಿರಿಗಿರಿ ಸುತ್ತಲು ಆರಂಭಿಸಿತು. ಅದರ ಎಲ್ಲೆಡೆ ಅನೇಕ ರೆಮೋರ ಹೀರುಮೀನು ಹಾಗೆಯೆ ನೇತುಹಾಕಿಕೊಂಡಿವೆ, "ಹೇಯ್! ನಾನಿನ್ನೂ ಸಾಯಲು ಸಿದ್ಧನಿಲ್ಲ" ಕಿರಲಿದ ವ್ಯಾಟ್.

ಇನ್ನೆರಡು ಗೂಳಿ ಹುಲಿಮೀನು ಚಿಮ್ಮಿ ಧಾವಿಸಿದವು. ವಾಲ್ಟರ್ ರೋಷದಿಂದ, ಉನ್ಮತ್ತನಾಗಿ, ಒದ್ದ. ಮತ್ತೆ ಅವು ತಮ್ಮ ಹಾದಿ ಹಿಡಿದವು. ಅದರ ಬೆನ್ನಿಗೇ ಬಂದಿತು, ಸುತ್ತಿಗೆತಲೆ ಮೀನು! ಅದರ ತಲೆಯೋ ಸುತ್ತಿಗೆಯ ರೀತಿ, ಭಾರ, ಒರಟು! ವೇಗದಿಂದ ವಾಲ್ಟರನೆಡೆ ನುಗ್ಗಿತು. ಒಮ್ಮೆ ಕಸುವನ್ನು ಕೂಡಿಸಿ ಒದ್ದ, ಗುರಿ ತಪ್ಪಿತು! ಅವನ ಕಾಲಿನ ಒದೆ ಆ ಕೆಟ್ಟ ಮೀನಿನ ತಲೆಗೆ

ತಾಗಲಿಲ್ಲ! ಆದರೆ, ಸುತ್ತಲಿದ್ದ ಮೀನುಗಳಿಗೆ ಒದೆ ಬಿತ್ತು, ಪರಿಣಾಮವಾಗಿ ಹುಲಿಮೀನು ಸರಿದು, ಹಿಂಜರಿದವು.

ಇದೀಗ ವ್ಯಾಟ್, ತನ್ನ ಸೋತ ಕಣ್ಣುಗಳಲ್ಲಿ ಕಡಲನೀಲವನ್ನೆ ದಿಟ್ಟಿಸಿದ. ನೀಲಿ ಮುಸುಡಿಯ ದೊಡ್ಡ ಶಾರ್ಕ್, ತಗಡಿನಂತೆ ಹೊಳೆಯುವ ನೀಲಿ ಬಾಲ! ಹಾಗೆಯೆ, ಕಡಲಗರ್ಭವನ್ನೆ ಸೀಳಿ, ಈಸಿದ್ದು. “ಅಬ್ಬಬ್ಬಾ! ಅದು ಗಂಟೆಗೆ ೧೫೦ ಕಿ. ಮೀ. ವೇಗದಲ್ಲಿ ಈಸುವ ಹುಲಿಮೀನು!” ವ್ಯಾಟ್, ತನಗೆ ತಾನೆ ಎಚ್ಚರಿಕೆ ಹೇಳಿಕೊಂಡ. ಆತಂಕದ ಕ್ಷಣಗಳು, ಅವು! ಮಿಂಚಿನಂತೆ ಎರಗಿ, ಬಡಿಯುವುದಂತೂ ನಿಜ. ಶಾರ್ಕ್ ತೆರೆಯೊಂದರಿಂದ ತನ್ನ ತಲೆಯೆತ್ತಿ, ಹಸಿದ ಮೃಗ ಎರಗುವಂತೆ ಎರಗುವುದನ್ನೆ ವ್ಯಾಟ್ ನಿರೀಕ್ಷಿಸಿದ್ದು! ಅದರ ಕಣ್ಣುಗಳಲ್ಲಿ ಏನೂ ಸೂಚನೆ ಇರದಿದ್ದರೂ, ಅದೊಂದು ಮಾಂಸಪ್ರಿಯ ಹುಲಿಮೀನೆ! ವಾಲ್ಟರನನ್ನು ನುಂಗುವಂತೆ ದಿಟ್ಟಿಸಿತು. ಅದೇನಾಯ್ತೊ? ಮತ್ತೆ ಮಿಂಚಿನ ವೇಗದಲ್ಲೆ ಎಗರಿ, ಕಡಲಿನಲ್ಲಿ ಕರಗಿಹೋಯಿತು.

ವ್ಯಾಟನಿಗೆ ಇದೀಗ ಮೈಯಿನ ತ್ರಾಣವೇ ಹೀರಿಹೋದಂತೆ, ಅನ್ನಿಸಿತು. “ನನ್ನನ್ನು ಬೇಟೆಯಾಡುವ ಈ ಶಾರ್ಕ್‌ಗಳು ನನ್ನ ಈ ನಿತ್ರಾಣವನ್ನೂ ಗುರುತಿಸುತ್ತವೆ” ಎಂದಾತ ಅರಿತುಕೊಂಡ. ಒಂದೇ ಬಾರಿ, ಕಚ್ಚಿ, ಒದೆಯಲು ಆತ ಅವಕಾಶ ಮಾಡಿಕೊಟ್ಟನೆಂದರೆ, ಆವೇಶದಿಂದ ಶಾರ್ಕ್ ತಂಡವೇ ಮುತ್ತಿಯಾತು! ಏನು ಮಾಡುವುದು? ಹಾಗೆಯೆ ಕಷ್ಟಪಟ್ಟು ತಲೆ ಎತ್ತಿದ.

ಆಕಾಶದಲ್ಲಿ ದೂರದಿಂದ ವಿಮಾನದ ಮೊರೆಯುವ ಘರ್ಜನೆ! ಅವನ ಕಣ್ಣು ಪುನಃ ಚೈತನ್ಯ ಪಡೆದಂತೆ, ದಿಟ್ಟಿಸಿದವು. ಕಡಲಿನ ಕಡೆಯ ಕಾವಲು ವಿಮಾನವೊಂದನ್ನು ವ್ಯಾಟ್ ಗುರುತಿಸಿದ. ಮತ್ತೆ ಹಾಗೆಯೆ ನೀಲಾಗಸದಲ್ಲಿ ಕರಗಿಹೋಯಿತು. ಒಂದೇ ನಿಮಿಷ, ಮತ್ತೆ ಮೊರೆಯುತ್ತ ಕಾಣಿಸಿಕೊಂಡಿತು! ಹಿಂದೆ ಮುಂದೆ ಹಾರುತ್ತಲಿತ್ತು. “....ಓಹ್ಹೊ! ನನ್ನನ್ನೆ ಹುಡುಕುತ್ತಿದ್ದಾರೆ” ಎಂದು ಕಾತುರದಿಂದ ನಿರೀಕ್ಷಿಸಿದ, ವ್ಯಾಟ್.

“....ಓಹ್ಹೊ! ನಾನಿನ್ನೂ ಬದುಕಿದ್ದೇನೆ!”

ವಿಮಾನವು ಹಿಂದೆ ಮುಂದೆ ಹಾರುತ್ತ ಹಾರುತ್ತ ಹತ್ತಿರಾದಂತೆ, ವಾಲ್ಟರ್, ತನ್ನ ಕಿತ್ತಳೆಬಣ್ಣದ ತೇಲಂಗಿಯನ್ನು ಎತ್ತಿಹಿಡಿದು, ತೂಗಾಡಿಸಿದ, “ಹೊ ಹೋಹೊ!” ಎಂದು ಕಸುವೆಲ್ಲ ಕೂಡಿಸಿ ಕಿರುಚಿಕೊಂಡ. ಮತ್ತೆ ಮತ್ತೆ ತೇಲಂಗಿಯನ್ನು ತೂಗಾಡಿಸಿದ.

ವಿಮಾನ ಇದೀಗ ಸಮಿಪಿಸಿತು....ಮಂದಗತಿಯಲ್ಲಿ! ಅದು, ಈಗ, ಅವನ ತಲೆ ಮೇಲೆಯೆ ಇದೆ! ಹುಚ್ಚನಂತೆ ತನ್ನ ಅಂಗಿಯನ್ನು ತೂಗಾಡಿಸಿದ ವ್ಯಾಟ್, ತನ್ನ ಇಡೀ ಶರೀರವನ್ನು ಬಿಲ್ಲಿನಂತೆ ಬಾಗಿಸಿ, ನೀರ ಮೇಲೆತ್ತಿ, ಕಿರಲಿದ, "ಅಯ್ಯೋ! ಅವರು ನನ್ನನ್ನೇಕೆ ನೋಡುತ್ತಿಲ್ಲ" ಎಂದು ಹಲುಬಿದ. ಮತ್ತೆ ಮುತ್ತಿಡುವ ಷಾರ್ಕ್‌ಗಳ ಭೀತಿ!!

ಇತ್ತ ವಿಮಾನದಲ್ಲಿ ಕಮಾಂಡರ್, ಹಾಗೆಯೆ ಕಡಲಿನಲ್ಲಿ ವಿಮಾನದ ನೇರ ಕೆಳಭಾಗಕ್ಕೇ ಅರಸುತ್ತಿದ್ದ.... "ಬೀಚ್‌ಕ್ರಾಫ್ಟ" ಅವಕಾಶವೇನಾದರೂ ಕಂಡೀತೋ ಎಂದು! ಇದ್ದಕ್ಕಿದ್ದಂತೆ, ಅವನ ಮೆದುಳಿನಲ್ಲಿ ಒಂದು ಟೆಲಿಪತಿ! ಸೂಚನೆ! "ಎಲ್ಲೋ ಅಲ್ಲೀ—ವಿಮಾನ ಕಡಲನ್ನು ಹೊಕ್ಕ ಎಡೆಯಲ್ಲಿ ಯಾರೊ ವ್ಯಕ್ತಿಯ ಶರೀರ, ದೆವ್ವದ ಹಾಗೆ ಕೈಯಾಡಿಸಿದಂತೆ!" ಅದೂ, ಉಬ್ಬಿಳಿಯುವ ಕಡಲಲ್ಲಿ ಅರ್ಧ ಹೂತುಹೋಗಿ, ತನ್ನ 'ಪ್ರಾಣವುಳಿಸುವ ಅಂಗಿ' ಯನ್ನು ಅತ್ತಿಂದಿತ್ತ ತೂಗಾಡಿಸುತ್ತಿರುವಂತಿದೆ! ಹಾಗೇ ಕಂಪ್ಯೂಟರ್ ಗುಂಡಿ ಒತ್ತಿದ. ತಾನು ಗುರುತಿಸಿದ ಸ್ಥಳದಲ್ಲಿ ವಿಮಾನವನ್ನು ಒಮ್ಮೆ ನೆಲೆನಿಲ್ಲಿಸಲೆಂದು! ತನ್ನ ವರಿಗೆ ಕೂಡಲೆ ಸೂಚನೆಯಿತ್ತ! "ಹೇಯ್! ಅಲ್ಲಿ, ನೋಡು, ಸಮುದ್ರದ ನೀರಲ್ಲಿ ಒಬ್ಬ ಅರ್ಧ ಹುಗಿದು, ಅರ್ಧ ಕಾಣುತ್ತಾ ಇದ್ದಾನೆ! ಕೂಡಲೆ ಕಡಲತೆರೆಯ ಕಾವಲು ವಿಮಾನ, "ಕೇಪ್‌ಯಾರ್ಕ್" ರೇಡಿಯೋದಲ್ಲಿ ಸೂಚನೆ ನೀಡಿದ—! ಕೇವಲ ೧೨ ನಿಮಿಷ ಕಾಲದ ಒಕ್ಕೂವೆಯ ನೌಕೆಯದು!

ಮೈಕ್ ಫಾಲ್ಹರ್ಟಿ, ವಿಮಾನದ ಚಾಲಕ, ಹಾರುತ್ತ ಬಂದ. ....ವಿಮಾನದಿಂದ ಒಂದು ಹೊಗೆಯಾಡುವ ಡಬ್ಬಿಯನ್ನು ಇಳಿಬಿಟ್ಟ, ...ಕೇಪ್‌ಯಾರ್ಕ್ ಗುರುತಿಸಲೆಂದು' ವಾಲ್ಟರ್, ಕಡಲಿಂದಲೆ ಅದನ್ನು ನೋಡಿದ. ಕೂಡಲೆ ಈಸಿದ, ನೀರನ್ನು ಬಲವಾಗಿ ಒದ್ದು, ತಳ್ಳುತ್ತ, ತೋಳು ಬೀಸಿ ಈಸುತ್ತಾ ದೋಣಿಯೆಡೆಗೇ ಸಾಗುತ್ತ ಬಂದ! ಅವನ ಬೆನ್ನಲ್ಲೆ ಕಪ್ಪು ನೆರಳು—ಬೃಹದಾಕಾರದ್ದು! ಬ್ಲಾಂಕನ್‌ಷಿಪ್ ರೇಡಿಯೋದ ಮೂಲಕ ಕೂಗಿದ! "ಏಯ್! ನೌಕೆಯನ್ನು ಜಾಗ್ರತೆ ನಡಸು. ಆ ಆಸಾಮಿಯನ್ನು ನೋಡು! ಷಾರ್ಕ್ ನುಗ್ಗುತ್ತಿದೆ.... ಜೋಕೆ, ಅವನು ಜೋಕೆ!" ಬಡಬಡಿಸಿದ.

ವ್ಯಾಟ್ ಕಂಡದ್ದು, ಬೆಳ್ಳಿಯಂತೆ ಹೊಳೆಯುವ ತಗಡು ಡಬ್ಬಿಯನ್ನು! ಆದರೆ, ಅವರು ನನ್ನ ಜೀವ ಉಳಿಸಿಕೊಳ್ಳಲು ಒಂದು ದೋಣಿಯನ್ನು ಇಳಿಬಿಟ್ಟಿಲ್ಲವಲ್ಲ! ಕೆಲವೇ ಸೆಕೆಂಡು, ವಾಲ್ಟರನ ಖುಷಿ! ತುಪ್ಪುಳದಂತಹ ಬಿಳಿ ಬಣ್ಣದ ದೋಣಿ, ವಾಲ್ಟರನೆಡೆಗೇ ಬರುತ್ತಿತ್ತು ಕಡಲ ತೆರೆಗಳಲ್ಲಿ ಬಳುಕುತ್ತ.

ಕೇಪ್‌ಯಾರ್ಕ್, ಮುಂದೆ ಬಂದಂತೆ, ತೂಗೇಣಿಯನ್ನು ಹಾವಿನಂತೆ ಇಳಿಬೀಳಿಸಿತು. ವಾಲ್ಟರ್ ವ್ಯಾಟ್ ಹಾಗೆಯೇ ಆ ಏಣಿಯ ಕೊನೆ ಮೆಟ್ಟಿಲಯನ್ನು ಹಿಡಿದ, ಹಾಗೇ ನೇತು ಬಿದ್ದುಕೊಂಡ, ಏನೂ ತ್ರಾಣವಿಲ್ಲದೆ! ನುಗ್ಗಿ ಬಂದ ಹುಲಿಮೀನು, ಚಿಮ್ಮಿ ಮರೆಯಾಯಿತು.

“ಹೇಯ್! ನೀರು ತುಂಬಿರೋ ತೇಲಂಗಿ ಎಸೆಯೊ!” ಕೂಗಿತು ಒಂದು ಧ್ವನಿ! ಇಬ್ಬರು ವ್ಯಾಟನನ್ನು ಅನಾಮತ್ತಾಗಿ ಹಿಡಿದು, ಮೇಲೆಳೆದುಕೊಂಡರು.

“ಏನೂ ಅಪಾಯವೇ ಇಲ್ಲ” ಪಟಗುಟ್ಟಿದ ವಾಲ್ಟರ್. “ನಾನೆಲ್ಲಿಯೋ, ಆ ತೇಲು ಅಂಗಿಯೂ ಅಲ್ಲೇ....ನನ್ನ ಜೊತೆಗೇ....” ದೋಣಿಯ ಕಂಬಿಯ ಮೇಲೆ ಬಂದ ವ್ಯಾಟ್! ಇಡೀ ಕಣ್ಣು ಕೆಂಗಾವಿಯಾಗಿ ಊದಿದ್ದವು, ಶರೀರ ಥರಥರನೆ ನಡುಗುತ್ತಿತ್ತು! ಮಂಡಿಯೂರಿ ಕುಸಿದ ವಾಲ್ಟರ್, ದೋಣಿ ಅಟ್ಟದಲ್ಲಿ ಬಿದ್ದ, ಅದನ್ನೇ ಹುಚ್ಚನಂತೆ ಚುಂಬಿಸಿದ. ಬೆಳಗ್ಗೆ ೯ ಗಂಟೆ ಸಮಯ. ವಾಲ್ಟರ್ ಹದಿನೈದು ತಾಸುಗಳಿಗೂ ಹೆಚ್ಚು ವೇಳೆ ಈಸುತ್ತಿದ್ದದ್ದು, ಅದೂ ಹುಚ್ಚೆದ್ದ ಕಡಲಿನಲ್ಲಿ, ಹುಲಿಮೀನುಗಳ ನಡುವೆ ಒಂಟಿಯಾಗಿ!

ವಿಮಾನದಲ್ಲಿ ಸುರುಳಿ ಸುರುಳಿ ಸುತ್ತುತ್ತ ಫ್ಲಾಹರ್ಟಿ, ಕಮಾಂಡರನ ಬೆನ್ನಿನ ಮೇಲೆ ಖುಷಿಯಿಂದ ಗುದ್ದಿದ. ಬ್ಲಾಂಕನ್‌ಷಿಪ್ ಅಷ್ಟೇ ಮಟ್ಟಿಗೆ ಬಾಯ್ತೆರೆದು ನಕ್ಕ. ವ್ಯಾಟನನ್ನು ಜೀವದಿಂದ ಉಳಿಸಿದ ಖುಷಿಯ ನಗು, ಅದು! “ನೋಡಯ್ಯ, ಇದು ಪ್ರಾಣ ಉಳಿಸೋ ಸಾಹಸ. ಎಲ್ಲವೂ ಒಳ್ಳೆಯದಾಯಿತಷ್ಟೆ”.

ಅನಂತರ, ವ್ಯಾಟನನ್ನು ಆಸ್ಪತ್ರೆಗೆ ಸೇರಿಸಿದರು. ಅವನನ್ನು ವಿವರವಾಗಿ ಪರೀಕ್ಷಿಸಿದರು. ಸುದ್ದಿ ಕೇಳಿದ ಅವನಪ್ಪ-ಅಮ್ಮ ಬಂದು, ಮನೆಗೇ ಕರೆದೊಯ್ದರು! ಪ್ರೇಯಸಿ ತೃಷಾಳ ಜತೆ ಗಂಟೆಗಟ್ಟಲೆ ಇದ್ದ ವಾಲ್ಟರ್ ಹೇಳುತ್ತಿದ್ದ—ಮತ್ತೆ ಮತ್ತೆ....“ನಾನು ಇನ್ನೂ ಬದುಕಿರುವೆನೆಂದು ನಂಬಲು ಆಗುತ್ತಿಲ್ಲ....” ಬಿಸಿ ಬಿಸಿ ಕಾಫಿ ಹೀರಿ, ತೃಷಾಳನ್ನು ತನ್ನ ತೋಳುಗಳಲ್ಲಿ ತಬ್ಬಿ, ಮಲಗಿದ ವ್ಯಾಟ್....ಮಗುವಿನಂತೆ ನಿದ್ರಿಸಿದ....ಒಂದೆಡೆ ಅವನ ಮಗ್ಗುಲಲ್ಲೇ ಕಡಲಸಂಗಾತಿಯಾಗಿದ್ದ ತೇಲಂಗಿಯೂ ಅವನಿಗೆ ಹೊದಿಕೆಯಾಗಿ ಬಿದ್ದಿತ್ತು.

ಎನ್. ಕೆ. ರಾಮಶೇಷನ್

ಇಂಟರ್‌ಪೋಲ್–ರಹಸ್ಯಗಳ ಮಳಿಗೆ

ನೀರಿನಿಂದ ತುಂಬಿರುವ ಕಂದಕ ಸುತ್ತುರಿದಿರುವ ಕೋಟೆಯಂತಿರುವ 'ಇಂಟರ್‌ಪೋಲ್'ನ ಕೇಂದ್ರ ಕಛೇರಿ ಫ್ರಾನ್ಸ್ ದೇಶದ ಲಯೋನ್ಸ್ ನಗರದ ಬಳಿ ಇದೆ. ಈ ಕಛೇರಿಯಲ್ಲಿರುವ ಈ ಪೋಲೀಸ್ ಸಂಘಟನೆಯಲ್ಲಿನ ಪುರುಷರು ಮತ್ತು ಮಹಿಳೆಯರು ಭಯೋತ್ಪಾದನೆ ಹಾಗೂ ಅಂತರ-ರಾಷ್ಟ್ರೀಯ ಅಪರಾಧಗಳ ವಿರುದ್ಧ ನಡೆಸಲಾಗುತ್ತಿರುವ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದಾರೆ.

ಇತಿಹಾಸದಲ್ಲಿಯೇ ಭಾರಿ ಬೀದಿ ದರೋಡೆಯೆಂದು ಭಾವಿಸಲಾಗಿದ್ದ ಆ ಪ್ರಕರಣ "ಶುದ್ಧಾಂಗವಾಗಿ ಅನುಕೂಲಸಿಂಧು" ಕಾರ್ಯಾಚರಣೆಯಾಗಿತ್ತು ಎಂಬುದಾಗಿ ಮೊದಲಿಗೆ ಲಂಡನ್ನಿನ ಪೋಲೀಸರು ಹೇಳಿದ್ದರು. ಕಿರಿದಾಗಿದ್ದ ಹಾಗೂ ಗಜಿಬಿಜಿಯಿಂದ ಕೂಡಿರುತ್ತಿದ್ದ ಆ ಬೀದಿಯಲ್ಲಿ ಬಲಶಾಲಿಯಾಗಿದ್ದ ತರುಣನೊಬ್ಬ ಹಣಕಾಸಿನ ದಳ್ಳಾಳಿಯ ಸಹಾಯಕನೊಬ್ಬನನ್ನು ಚೂರಿಯ ತುದಿಯಿಂದ ಒತ್ತಿಹಿಡಿದು ಅವನ ಹಣದ ಪೆಟ್ಟಿಗೆಯನ್ನು ಬಲವಂತವಾಗಿ ಕಸಿದು ಕೊಂಡಿದ್ದ. ಆ ಬಳಿಕ ಅವನು ಜನಸಂದಣಿಯ ನಡುವೆ ನುಸುಳಿಕೊಂಡು ಆ ಹಣದ ಪೆಟ್ಟಿಗೆಯೊಂದಿಗೆ ಮಾಯವಾಗಿದ್ದ. ಆ ಪೆಟ್ಟಿಗೆಯಲ್ಲಿ ೨೯೧.೯ ದಶಲಕ್ಷ ಪೌಂಡುಗಳಷ್ಟು ಬೆಲೆಯ ಧಾರಕ—ಬಾಂಡುಗಳು (ಅಂದರೆ, ಯಾರು ಬೇಕಾದರೂ ಬ್ಯಾಂಕಿಗೆ ಸಲ್ಲಿಸಿ ಹಣಪಡೆದುಕೊಳ್ಳಬಹುದಾಗಿರುವಂಥ ಹುಂಡಿಗಳು) ಇದ್ದವು.

ಇಷ್ಟೊಂದು ಬೆಲೆಯ ಹಣಕಾಸಿನ ದರೋಡೆಯ ಪ್ರಕರಣವನ್ನು ಪತ್ತೆಹಚ್ಚಿ, ಅಪರಾಧಿಗಳನ್ನು ಬಂಧಿಸಿದ ಕ್ರಮವೇನೂ ಆಕಸ್ಮಿಕ ಅವಕಾಶವಾಗಿರಲಿಲ್ಲ. ೧೯೯೦ರ ಮೇ ತಿಂಗಳಿನ ಆ ಬುಧವಾರ ಜಗತ್ತಿನಾದ್ಯಂತ ಸಂಪರ್ಕ ಜಾಲವನ್ನು ಹೊಂದಿದ್ದ ಅಪರಾಧಿಕ ಸಂಘಟನೆಯೊಂದು ದಾಳಿಯಿಟ್ಟಿತ್ತು. ಆದರೂ, ನಾಲ್ಕು ತಿಂಗಳ ಒಳಗಾಗಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಪಶ್ಚಿಮಜರ್ಮನಿ ಮತ್ತು ಸೈಪ್ರಸ್ ದೇಶಗಳಲ್ಲಿನ ಪೋಲೀಸರು ಕಳವಾಗಿದ್ದ ಆ ಬಾಂಡುಗಳಲ್ಲಿ ೧೮೪.೯ ದಶಲಕ್ಷ ಪೌಂಡುಗಳಷ್ಟು ಬೆಲೆಯ ಬಾಂಡುಗಳನ್ನು ವಶಪಡಿಸಿಕೊಂಡು ಎಂಟುಮಂದಿ

೧೯೯೪ರ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಫೆಂಟನ್ ಬ್ರೆಸ್ಲರ್ ಅವರ 'ಇನ್‌ಸೈಡ್ ಇಂಟರ್‌ಪೋಲ್ : ವೇರ್ ಹೌಸ್ ಆಫ್ ಸೀಕ್ರೆಟ್ಸ್' ಎಂಬ ಲೇಖನದ ಸರಳಾನುವಾದ.

ಯನ್ನು ಬಂಧಿಸಿದ್ದರು. ಜನವರಿ ೧೯೯೧ರ ಹೊತ್ತಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಹಾಗೂ ಸಿಂಗಪುರದಲ್ಲಿ ಇನ್ನೂ ಹಲವು ವ್ಯಕ್ತಿಗಳನ್ನು ಬಂಧಿಸಲಾಗಿತ್ತು ಹಾಗೂ ೪ ದಶಲಕ್ಷ ಪೌಂಡುಗಳಷ್ಟು ಬೆಲೆಯ ಬಾಂಡುಗಳು ಮಾತ್ರವೇ ಲೆಕ್ಕಕ್ಕೇ ಸಿಗದೆಹೋಗಿದ್ದುವು. ಮಾರ್ಚ್ ೧೯೯೨ರ ಹೊತ್ತಿಗೆ ಜಗತ್ತಿನಾದ್ಯಂತ ೭೧ ಮಂದಿಯನ್ನು ಬಂಧಿಸಲಾಗಿತ್ತು ಹಾಗೂ ೨ ದಶಲಕ್ಷ ಪೌಂಡುಗಳಷ್ಟು ಬೆಲೆಯ ಬಾಂಡುಗಳು ಮಾತ್ರವೇ ಕೈಗೆಸಿಗದೆ ಹೋಗಿದ್ದುವು. ಆದರೆ, ಕಳ್ಳರು ಅವನ್ನು ನಗದಾಗಿಸಿಕೊಳ್ಳಲು ಯಾರನ್ನಾದರೂ ಹಿಡಿಯುವ ಸಾಧ್ಯತೆಯೂ ಅಷ್ಟಾಗಿ ಇರಲಿಲ್ಲ. ಏಕೆಂದರೆ, 'ಬ್ಯಾಂಕ್ ಆಫ್ ಇಂಗ್ಲೆಂಡ್' ಆ ಬಾಂಡುಗಳ ಸಂಖ್ಯೆಗಳ ಬಗ್ಗೆ ವ್ಯಾಪಕವಾಗಿ ಸುದ್ದಿಯನ್ನು ಹರಡಿಬಿಟ್ಟಿತ್ತು.

ವಿಶಿಷ್ಟವಾದ, ಅಷ್ಟಾಗಿ ಯಾರಿಗೂ ತಿಳಿಯದ ಹಾಗೂ ಅತ್ಯಂತ ರಹಸ್ಯಾತ್ಮಕವಾಗಿರುವ ಸಂಘಟನೆಯೊಂದು ಇಲ್ಲದೆ ಹೋಗಿದ್ದರೆ, ಈ ದೂರವ್ಯಾಪಿ ಫಲಿತಾಂಶವೊಂದನ್ನು ಸಾಧಿಸುವುದು ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ. ಆ ಸಂಸ್ಥೆಯೇ 'ಇಂಟರ್‌ಪೋಲ್.' ಇದು ಅಂತರರಾಷ್ಟ್ರೀಯ ಅಪರಾಧ-ಪತ್ತೆಗಾರಿಕೆಯ ಏಕೈಕ ಪೋಲೀಸ್ ಸಂಘಟನೆಯಾಗಿದ್ದು, ವಿಶ್ವವ್ಯಾಪಿ ರಹಸ್ಯ ಮಾಹಿತಿ ಜಾಲದ ಸಂಪರ್ಕವ್ಯವಸ್ಥೆಯನ್ನು ಹೊಂದಿದೆ.

ಫ್ರಾನ್ಸ್‌ದೇಶದ ಲಯೋನ್ಸ್‌ನಗರದಲ್ಲಿ ಇದರ ಕೇಂದ್ರ ಕಛೇರಿ ಇದೆ. ಇದರ ೧೭೯ ಸದಸ್ಯ ರಾಷ್ಟ್ರಗಳಲ್ಲಿ—ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ಸಂಖ್ಯೆಗಿಂತಲೂ ಈ ಸಂಖ್ಯೆ ಹತ್ತು ಹೆಚ್ಚಾಗಿದೆ—ಪ್ರತಿಯೊಂದರಲ್ಲಿಯೂ ಇದು 'ನ್ಯಾಷನಲ್ ಸೆಂಟ್ರಲ್ ಬ್ಯೂರೋ' ಎಂಬ ಹೆಸರಿನ ರಾಷ್ಟ್ರೀಯ ಶಾಖಾ ಕಾರ್ಯಾಲಯಗಳನ್ನು ಹೊಂದಿದೆ. ಅಂತರರಾಷ್ಟ್ರೀಯ ಅಪರಾಧಗಳ ವಿರುದ್ಧ ನಡೆಸಲಾಗುತ್ತಿರುವ ಹೋರಾಟದಲ್ಲಿ 'ಇಂಟರ್‌ಪೋಲ್' ಮುಂಚೂಣಿಯಲ್ಲಿದೆ; ಈ ಎಲ್ಲ ಚಟುವಟಿಕೆ ಅಥವಾ ಕಾರ್ಯಾಚರಣೆಗಳಿಗೆ ಅದು ಹೃದಯಸದೃಶವೇ ಆಗಿದೆ. ಇದರ ರಾಷ್ಟ್ರೀಯ ಶಾಖಾ ಕಾರ್ಯಾಲಯಗಳು ಸ್ಥಳೀಯ ಪೋಲೀಸ್ ಸಿಬ್ಬಂದಿಯನ್ನೇ ಒಳಗೊಂಡಿದ್ದರೂ, ಅವು 'ಇಂಟರ್‌ಪೋಲ್'ಗಾಗಿ ಮಾತ್ರವೇ ಕೆಲಸ ಮಾಡುತ್ತವೆ. ಈ ರಾಷ್ಟ್ರೀಯ ಶಾಖಾ ಕಾರ್ಯಾಲಯಗಳ ನಡುವೆ ಮಿಂಚಿನ ವೇಗದಲ್ಲಿ ಮಾಹಿತಿವರ್ಗಾವಣೆ ನಡೆಯುವಂಥ ವ್ಯವಸ್ಥೆ ಇರುವುದೇ ವಾಸ್ತವವಾಗಿ ಇದರ ಜೀವದುಸಿರಾಗಿದೆ.

ಚಿತ್ರೀಕರಣದ ರಂಗಸಜ್ಜಿಕೆ: ೧೩ ದಶಲಕ್ಷ ಪೌಂಡುಗಳಷ್ಟು ವೆಚ್ಚದಲ್ಲಿ ಕಟ್ಟಲಾಗಿರುವ ಬೆಣಚುಕಲ್ಲಿನ ಹಾಗೂ ಗಾಜಿನ ಈ ಕೇಂದ್ರ ಕಛೇರಿ ಜಗತ್ತಿ

ನಲ್ಲಿಯೇ ಅತ್ಯಾಧುನಿಕವಾಗಿರುವ ಪೋಲೀಸ್ ಕೇಂದ್ರ ಕಛೇರಿಯಾಗಿದೆ. ಕೆಲವರಂತೂ ಇದು ಅತ್ಯಂತ ಸುಂದರವಾದ ಪೋಲೀಸ್ ಕೇಂದ್ರ ಕಛೇರಿಯಾಗಿದೆ ಎಂದೂ ಹೇಳುತ್ತಾರೆ. ಇದರಲ್ಲಿನ ೩೦೦ ಮಂದಿ ಸಿಬ್ಬಂದಿಯಲ್ಲಿ ೪೦ ರಾಷ್ಟ್ರಗಳಿಗೆ ಸೇರಿದ ೮೦ ಮಂದಿ ಪೋಲೀಸ್ ಅಧಿಕಾರಿಗಳಿದ್ದಾರೆ! ಐದು ಅಂತಸ್ತುಗಳ ಕಟ್ಟಡದ ಇದರ ಎರಡನೆಯ ಅಂತಸ್ತಿನಲ್ಲಿ ಇರುವ 'ಸಂದೇಶ ಅನುಕ್ರಿಯಾ ಶಾಖೆ'ಗೆ ಹೋದರೆ ಜೇಮ್ಸ್‌ಬಾಂಡ್ ಚಿತ್ರದ ಚಿತ್ರೀಕರಣಕ್ಕಾಗಿ ಸಜ್ಜುಗೊಳಿಸಲಾಗಿರುವ ರಂಗಸ್ಥಳಕ್ಕೆ ಹೋದಂಥ ಅನುಭವವಾಗುತ್ತದೆ. ಆ ವಿಶಾಲವಾಗಿರುವ ಕೋಣೆ ವೈದ್ಯಶಾಲೆಯಷ್ಟು ಶುದ್ಧವಾಗಿ ಶುದ್ಧ ಕೆನೆಬಣ್ಣದಿಂದ ಅಲಂಕೃತವಾಗಿದ್ದು, ಅಷ್ಟೇ ತಂಪಾಗಿದ್ದು, ಅದು ಇತರ ಶಾಖೆಗಳಿಗಿಂತ ಬೇರೆಯಾದ ಶಾಖೆಯೊಂದು ಗುರುತಿಸಿ ಹೇಳಲಾಗದ ಮಟ್ಟಿಗೆ ಅನಾಮಕವಾಗಿದೆ—ಅಂದರೆ, ಅದಕ್ಕೆ ಯಾವುದೇ ನಾಮಫಲಕವನ್ನು ಹಾಕಿಲ್ಲ.

ಮೂಲೆಯೊಂದರಲ್ಲಿ ಕಂಪ್ಯೂಟರ್ ಮುದ್ರಕದ ಸದ್ದು ಕೇಳಿಬರುತ್ತಿದೆ. ಕಂಪ್ಯೂಟರ್-ನಿರ್ವಾಹಕ ವಿಸಂಕೇತಿತ—ಅಂದರೆ, ಸಂಕೇತ ಭಾಷೆಯಿಂದ ಸಾಮಾನ್ಯ ಭಾಷೆಗೆ ಪರಿವರ್ತಿಸಲಾದ—ಸಂದೇಶದ ಹಾಳೆಯನ್ನು ಹರಿಯುತ್ತಾನೆ. ಟೆಹರಾನ್ ನವದೆಹಲಿಯನ್ನು ಸಂಪರ್ಕಿಸುತ್ತಿದೆ. ವಾಣಿಜ್ಯ-ವಂಚನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಕಾಗಿರುವ ಇರಾನೀಯರ ತಂಡವೊಂದು ಟೆಹರಾನಿನಿಂದ ಪರಾರಿಯಾಗಿ, ಕಲ್ಕತ್ತೆಯ ಹೋಟೆಲ್ ಒಂದರಲ್ಲಿ ತಂಗಿರುವುದಾಗಿ ತಿಳಿದುಬಂದಿದೆ, ಅವರನ್ನು ಪ್ರತ್ಯರ್ಪಣಕ್ಕಾಗಿ—ಅಂದರೆ ಆ ನಾಡಿಗೆ ಮತ್ತೆ ಒಪ್ಪಿಸಿಕೊಡುವ ಸಲುವಾಗಿ—ಭಾರತೀಯ ಪೋಲೀಸರು ತಡೆಹಿಡಿಯಬೇಕೆಂದು ಟೆಹರಾನ್ ಬಯಸುತ್ತದೆ ಎಂಬ ಸಂದೇಶ ಅದರಲ್ಲಿ ದಾಖಲಾಗಿರುತ್ತದೆ.

ಇನ್ನೊಂದು ಸಂದೇಶಕ್ಕೆ '೦೦' ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ. ಇದರ ಅರ್ಥ "ಅದು ತುಂಬ ತುರ್ತಿನ ವಿಷಯ" ಎಂದು. ವಿಯೆನ್ನಾದಿಂದ ಬ್ರಸ್ಸೆಲ್ಸ್‌ಗೆ ಹೋಗುವ ಮಾರ್ಗದಲ್ಲಿ ಪೋಲೀಸರು ಲಕ್ಸೆಂಬರ್ಗ್‌ನಲ್ಲಿ ಒಬ್ಬ ಆಸ್ಟ್ರಿಯನ್ ಮತ್ತು ಒಬ್ಬ ಜರ್ಮನ್ ಪ್ರಜೆಗಳನ್ನು ಬಂಧಿಸಿ, ಅವರಿಂದ ಎಂಟು ಕಿಲೋಗಳಷ್ಟು ಹೆರಾಯಿನ್ ಮಾದಕ ದ್ರವ್ಯವನ್ನು ವಶಪಡಿಸಿಕೊಂಡಿದ್ದಾರೆ. ಇನ್ನಷ್ಟು ಸಾಗಣೆದಾರರು ಪ್ರಯಾಣ ಮಾಡುತ್ತ ಇರಬಹುದೆಂದು ಅವರು ಶಂಕಿಸಿದ್ದಾರೆ. 'ಇಂಟರ್‌ಪೋಲ್' ತನ್ನ ಇತರ ರಾಷ್ಟ್ರೀಯ ಶಾಖಾ ಕಾರ್ಯಾಲಗಳನ್ನು ಈ ವಿಷಯದ ಬಗ್ಗೆ ಎಚ್ಚರಿಸಬಹುದೆ ಎಂಬುದು ಈ ಸಂದೇಶದ ಅಭಿಪ್ರಾಯವಾಗಿದೆ.

ಈಗ ಲಂಡನ್ನಿನ 'ಶಾಖಾ' ಕಾರ್ಯಾಲಯ ಕೋಪನ್‌ಹೆಗೆನ್ ಅನ್ನು ಸಂಪರ್ಕಿಸುತ್ತಿದೆ. ಏಕ ಕಾಲಕ್ಕೆ ಆ ಸಂದೇಶವನ್ನು ರೋಮ್, ಜಿನೀವಾ, ಪ್ಯಾರಿಸ್, ದಿ ಹೇಗ್ ಮತ್ತು ಅಂಕಾರಾ ನಗರಗಳಿಗೂ ಕಳಿಸಿಕೊಡಲಾಗುತ್ತಿದೆ. ಬ್ರಿಟಿಷ್ ಪ್ರಜೆಯೊಬ್ಬನನ್ನು ಮಾದಕ ವಸ್ತುಗಳ ಭಾರಿ ಸಾಗಣೆಯ ಆರೋಪದ ಮೇಲೆ ಡೆನ್ಮಾರ್ಕ್‌ನಲ್ಲಿ ಬಂಧಿಸಲಾಗಿದೆ ಎಂಬುದು ಈ ಸಂದೇಶದ ಆಶಯ. ಇದನ್ನು ಇತರ ನಗರಗಳಿಗೆ ಏಕೆ ಕಳಿಸಿಕೊಡಲಾಗಿದೆ? ಅಮೆರಿಕಾ ಸಂಯುಕ್ತ ಸಂಸ್ಥಾನ ಈ ಕಾರ್ಯಗೌರವಕ್ಕಾಗಿ ಬಿಡುಗಡೆ ಮಾಡಿರುವ ಹಾಗೂ 'ಸಂದೇಶ' ಅನುಕ್ರಿಯಾ ಶಾಖೆಯ ಕಾರ್ಯನಿರ್ವಹಣೆಯ ಹೊಣೆಯನ್ನು ಹೊತ್ತು ಕೊಂಡಿರುವ ಚಾರ್ಲ್ಸ್ ಕೊಜ್ಲೋಸ್ಕಿ ಅವರು ಈ ವಿಚಾರವನ್ನು ಹೀಗೆ ವಿವರಿಸುತ್ತಾರೆ. "ಆ ನಗರಗಳೂ ಈ ಕಥೆಯಲ್ಲಿ ಕಾಣಿಸಿಕೊಳ್ಳುತ್ತವೆ. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳನ್ನೊಳಗೊಂಡಿರುವ ದಸ್ತಾವೇಜುಗಳು ನಮ್ಮಲ್ಲಿವೆ ಎಂಬುದು ಲಂಡನ್ನಿಗೆ ಗೊತ್ತಿದೆ."

ಈ 'ಅಂಚೆ ಕಛೇರಿ'ಯ ಕೆಲಸದ ಜೊತೆಗೆ ಕೊಜ್ಲೋಸ್ಕಿಯವರ ತಂಡ— ಇದು ಇಂಗ್ಲಿಷ್, ಫ್ರೆಂಚ್, ಸ್ಪ್ಯಾನಿಷ್ ಭಾಷೆಗಳಲ್ಲಿ ಕಾರ್ಯನಿರ್ವಹಿಸುತ್ತದೆ —ಪ್ರತಿ ವರ್ಷವೂ ಮಾಹಿತಿಗಾಗಿ ಬರುವ ಸುಮಾರು ೧.೨ ದಶಲಕ್ಷ ಕೋರಿಕೆಗಳನ್ನು ಪೂರೈಸುತ್ತದೆ. ಸಾಮಾನ್ಯವಾಗಿ ಕೆಲವೇ ನಿಮಿಷಗಳಲ್ಲಿ ಅವರು ಈ 'ಶಾಖಾ' ಕಾರ್ಯಾಲಯಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಕಳಿಸಬಲ್ಲವರಾಗಿದ್ದಾರೆ. ವಾಸ್ತವವಾಗಿ, 'ಇಂಟರ್‌ಪೋಲ್' ರಹಸ್ಯಗಳ ಒಂದು ಭಾರಿ ಉಗ್ರಾಣವೇ ಆಗಿದೆ, ಜಗತ್ತಿನಲ್ಲಿಯೇ ಅತ್ಯಂತ ಬೃಹತ್ತಾದ 'ಅಪರಾಧ ಗ್ರಂಥಾಲಯ'ವೆನ್ನಿಸಿಕೊಂಡಿದೆ. ಸುಮಾರು ೨,೦೦,೦೦೦ ವ್ಯಕ್ತಿಗಳ ಚಹರೆಗಳು, ಬೆರಳು-ಚಿಹ್ನೆಗಳು, ಅವರು ಬಳಸುವ ಉರ್ಫ್ ಅಥವಾ ಪರ್ಯಾಯ ಹೆಸರುಗಳು ಮತ್ತು ಇತರ ವೈಯಕ್ತಿಕ ವಿವರಗಳು ಅದರ ಕಂಪ್ಯೂಟರ್ ಕಡತಗಳಲ್ಲಿ ಲಭ್ಯವಾಗಿವೆ.

ಇಂಟರ್‌ಪೋಲ್ ಮಹಾಶಯ: ಕಡತದಲ್ಲಿರುವ ಒಂದು ಕ್ಷುಲ್ಲಕ ಸಂಗತಿ ಪ್ರಕರಣವೊಂದನ್ನು ಬಗೆಹರಿಸಲು ನೆರವಾಗಬಹುದು. ಪಾವತಿಯಾಗದ ಚೆಕ್ಕುಗಳನ್ನು ನೀಡುತ್ತಿದ್ದ ಹಾಗೂ ಕಾರೊಂದನ್ನು ಅಪಹರಿಸಿದ್ದ ಇಪ್ಪತ್ತೈದು ವರ್ಷ ವಯಸ್ಸಿನ ಕೆನಡಾದ ಪ್ರಜೆಯೊಬ್ಬ ಫ್ರೆಂಚ್ ಪೋಲೀಸರಿಗೆ ಬೇಕಾಗಿದ್ದ. ಅವನ ಹೆಸರೇನೂ ಕಂಪ್ಯೂಟರ್ ತೆರೆಯ ಮೇಲೆ ಕಾಣಿಸಿಕೊಳ್ಳಲಿಲ್ಲ, ಆದರೆ, ಕಾರಿನ ನೋಂದಣಿ ಸಂಖ್ಯೆ ಕಾಣಿಸಿಕೊಂಡಿತು. 'ಕೃತಕ ಕಲಾಕೃತಿಗಳ ವ್ಯವಹಾರ'

ಎಂಬ ತಲೆಬರೆಹವನ್ನು ಹೊತ್ತಿದ್ದ ಕಡತದಲ್ಲಿ ಈ ಮಾಹಿತಿ ದೊರೆಯಿತು. ಈ ಮಾಹಿತಿಯ ಮೂಲಕ ಅಂತಿಮವಾಗಿ ಆ ವ್ಯಕ್ತಿಯನ್ನು ಸ್ವಿಜರ್ಲೆಂಡಿನಲ್ಲಿ ಬಂಧಿಸಲಾಯಿತು. ಕೃತಕ ಕಲಾಕೃತಿಗಳ ವ್ಯವಹಾರವನ್ನೊಳಗೊಂಡ ಗಂಭೀರ ಆರೋಪಗಳ ಮೇಲೆ ಆ ಬಳಿಕ ಅವನನ್ನು ಫ್ರಾನ್ಸಿಗೆಪ್ರತ್ಯರ್ಪಿಸಲಾಯಿತು.

ಜಗತ್ತಿನಲ್ಲೆಲ್ಲ ಸಂಚಾರಮಾಡಿ, ಅಂತರರಾಷ್ಟ್ರೀಯ ದರೋಡೆಕೋರರ ತಂಡದ ಸದಸ್ಯರುಗಳನ್ನು ಬಂಧಿಸುತ್ತ ಹೋಗುವ 'ಇಂಟರ್‌ಪೋಲ್‌ನ ಮನುಷ್ಯ' (Man from Interpol)ನನ್ನು ಕುರಿತಂತೆ ೧೯೬೦ರ ದಶಕದಲ್ಲಿ ಪ್ರಸಾರಗೊಂಡ ದೂರದರ್ಶನದ ಧಾರವಾಹಿ ಶುದ್ಧಾಂಗವಾಗಿ ಕಪೋಲಕಲ್ಪಿತವಾದದ್ದು. ಸಂಘಟನೆಯು ಪರವಾಗಿ ಯಾರನ್ನೇ ಆಗಲಿ ಬಂಧಿಸುವ ಅಧಿಕಾರವನ್ನು ಇಂಟರ್‌ಪೋಲ್‌ನ ಯಾವನೇ ಅಧಿಕಾರಿಗೂ ನೀಡಿಲ್ಲ.

ಇಷ್ಟಾಗಿಯೂ, 'ಇಂಟರ್‌ಪೋಲ್ ಮಹಾಶಯ'ನೊಬ್ಬನಿದ್ದಾನೆ. ಆತನೇ ೫೯ ವರ್ಷ ವಯಸ್ಸಿನ ರೇಮಂಡ್ ಕೆಂಡಾಲ್. ಆತ ಮೊದಲಿಗೆ 'ಸ್ಕಾಟ್ಲೆಂಡ್ ಯಾರ್ಡ್'ನಲ್ಲಿ (ಬ್ರಿಟಿಷ್ ಪೋಲೀಸ್ ವ್ಯವಸ್ಥೆಯ ಗುಪ್ತಚರ್ಯೆ ವಿಭಾಗ) ಉಪ ಸಹಾಯಕ-ಆಯುಕ್ತರಾಗಿದ್ದರು. ಫ್ರೆಂಚ್ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಆತನ ಪತ್ನಿ ಫ್ರಾನ್ಸ್ ದೇಶದವಳೇ ಆಗಿದ್ದಾಳೆ. ಆತ ಈಗ ಮಹಾ ಕಾರ್ಯದರ್ಶಿಯಾಗಿ ಐದು ವರ್ಷಗಳ ಸೇವೆಯ ಎರಡನೆಯ ಅವಧಿಯಲ್ಲಿ ಸೇವೆ ಸಲ್ಲಿಸುತ್ತ ಇದ್ದಾರೆ. ಆತ ಈ ಹುದ್ದೆಯನ್ನು ಅಲಂಕರಿಸಿರುವ ಮೊಟ್ಟಮೊದಲನೆಯ ಬ್ರಿಟಿಷ್ ಪೋಲೀಸ್ ಅಧಿಕಾರಿಯೂ ಹೌದು. ಆತ ಹೇಳುತ್ತಾರೆ: "ಇಲ್ಲಿ ನಾನು ಯಾರಿಗೂ ಸೇರಿದವನಲ್ಲ. ನಾನು ಈಗಂತೂ ಬ್ರಿಟಿಷ್ ಸಂಬಂಧವನ್ನು ಮೀರಿ ನಿಂತಿರುವಂಥವನು. ನಾನೀಗ ಅಂತರ-ರಾಷ್ಟ್ರೀಯ ಪೌರ ಸೇವಕ."

'ಇಂಟರ್‌ಪೋಲ್'ನ ಶೇ. ಮೂವತ್ತರಷ್ಟು ಕಾರ್ಯನಿರ್ವಹಣೆ ಶಿಷ್ಟತೆಯ ಸೋಗಿನಲ್ಲಿ ನಡೆಯುವ ಅಪರಾಧಗಳ ವಿರುದ್ಧ ನಡೆಸುವ ಹೋರಾಟಗಳಿಗೆ ಸಂಬಂಧಿಸಿದೆ. ಇದು ನಕಲಿ ಮಾಲುಗಳ ಮಾರಾಟ, ಸಕಾಲಿಕ-ಷೇರು ವಂಚನೆ ಪ್ರಕರಣಗಳು, ವೀಡಿಯೋ ಕೃತಿಚೌರ್ಯ, ಸಾಲಗಳನ್ನು ಪಡೆದುಕೊಳ್ಳಲು ಸುಳ್ಳು ಭದ್ರತೆಗಳನ್ನು ಬಳಸುವ ಪ್ರಕರಣಗಳು—ಇವೇ ಮೊದಲಾದುವುಗಳನ್ನು ಒಳಗೊಂಡಿರುತ್ತದೆ. ನಾರ್ವೆಯಲ್ಲಿ ಈಚಿನ ಪ್ರಕರಣವೊಂದು ನಡೆದ ಸಂದರ್ಭದಲ್ಲಿ ಡೆನ್ಮಾರ್ಕಿನ ಪ್ರಜೆಯಾಗಿರುವ ಸ್ವೆನ್-ಎರಿಕ್ ಲೇಡ್‌ಫೋಗೆಡ್ 'ವಂಚನೆ ಮತ್ತು ಆರ್ಥಿಕ ಅಪರಾಧಗಳ ತಂಡದ ಮೇಲ್ವಿಚಾರಕನಾಗಿದ್ದರು.

"ಚಿನ್ನದ ಗಟ್ಟಿಗಳೆಂದು ಹೇಳಲಾಗಿದ್ದ ಗಟ್ಟಿಗಳ ಆಧಾರದ ಮೇಲೆ ಬ್ಯಾಂಕೊಂದು ಬೃಹತ್ ಮೊತ್ತವನ್ನು ಸಾಲವಾಗಿ ನೀಡಿತ್ತು. ಅವರಿಗೆ ತೋರಿಸಲಾಗಿದ್ದ ಮೊದಲ ಎರಡು ಗಟ್ಟಿಗಳು ಚಿನ್ನದವೇ ಆಗಿದ್ದುವು; ಉಳಿದವನ್ನು ಪರೀಕ್ಷಿಸಿ ನೋಡುವ ಗೊಡವೆಗೆ ಬ್ಯಾಂಕ್ ಹೋಗಲಿಲ್ಲ. ಅಚ್ಚುಕಟ್ಟಾಗಿ ಹಾಗೂ ಒಳ್ಳೆಯ ಉಡುಗೆ-ತೊಡುಗೆಗಳನ್ನು ತೊಟ್ಟು, ನೀವು ಒಳಗೆ ಬಂದಿರಿ ಎಂಬ ಮಾತ್ರಕ್ಕೆ ಜನ ಅದು ಹೇಗೆ ನಿಮ್ಮನ್ನು ನಂಬುತ್ತಾರೆ ಎಂಬುದು ಆಶ್ಚರ್ಯದ ಸಂಗತಿ" ಎಂದು ಆತ ಹೇಳುತ್ತಾರೆ.

ಕಂಪ್ಯೂಟರ್ ವಂಚನೆ ಆಧಾರಿತ ಅಪರಾಧಗಳು ಬ್ರಿಟನ್ ಒಂದರಲ್ಲಿಯೇ ಪ್ರತಿ ವರ್ಷ ಸುಮಾರು ೨,೫೦೦ ದಶಲಕ್ಷ ಪೌಂಡುಗಳಷ್ಟು ಮೊತ್ತವನ್ನು ಒಳಗೊಂಡಿರುತ್ತವೆಂದು ಭಾವಿಸಲಾಗಿದೆ. ಆದರೆ ಕಂಪ್ಯೂಟರ್-ವಂಚನೆ ಆಧಾರಿತ ಪ್ರಕರಣಗಳ ವಿಚಾರದಲ್ಲಿ ವ್ಯವಹರಿಸುವ ಪೋಲೀಸ್ ಅಧಿಕಾರಿ ಹೇಳುವಂತೆ, "ಅನೇಕ ಪ್ರಕರಣಗಳು ವರದಿಯಾಗುವುದೇ ಇಲ್ಲ. ಇಂಥ ವಂಚನೆಗಳಿಗೆ ಒಳಗಾಗುವರಲ್ಲಿ ಬಹುಮಟ್ಟಿನವರಾಗಿರುವ ಬ್ಯಾಂಕುಗಳು, ವಿಲೇವಾರಿ ಕೇಂದ್ರಗಳು ಮತ್ತು ಬೃಹತ್ ನಿಗಮಗಳು ತಾವು ಮೋಸಹೋಗಿರುವ ಸಂಗತಿ ತಮ್ಮ ಗ್ರಾಹಕರುಗಳಿಗೆ ತಿಳಿಯಬಾರದೆಂದೇ ಬಯಸುತ್ತಾರೆ."

ರೇಮಂಡ್ ಕೆಂಡಾಲ್ ಅವರು ಹೇಳುವಂತೆ "ಮಾದಕ ದ್ರವ್ಯಗಳ ಕಳ್ಳ ಸಾಗಣೆಯನ್ನು ಪತ್ತೆ ಹಚ್ಚುವುದೇ ಇಂಟರ್‌ಪೋಲ್‌ನ ಪ್ರಮುಖ ಕಾಳಜಿಯ ವಿಚಾರವಾಗಿದೆ." ಇದು ಅಂತರರಾಷ್ಟ್ರೀಯ ಅಪರಾಧ-ಪರಂಪರೆಯಲ್ಲಿನ ಅಗ್ರಗಣ್ಯ ಅಪರಾಧವೆನ್ನಿಸಿಕೊಂಡಿದೆ. ತಮ್ಮ ಅಧಿಕಾರಿಗಳ ಅಮೂಲ್ಯ ಸಮಯದ ಶೇ.ಐವತ್ತರಷ್ಟು ಭಾಗವನ್ನು ಈ ಮಾದಕ ದ್ರವ್ಯಗಳ ಪ್ರಕರಣಗಳೇ ಕಬಳಿಸಿಬಿಡುತ್ತವೆ ಎಂದು ಅವರು ಅಂದಾಜು ಮಾಡಿದ್ದಾರೆ.

'ಇಂಟರ್‌ಪೋಲ್'ನ ಮಾದಕ ದ್ರವ್ಯ-ಉಪ ವಿಭಾಗದ ಮುಖ್ಯಸ್ಥರಾಗಿರುವ ಉತ್ಸಾಹಿ ಬೆಲ್ಜಿಯನ್ ಪೋಲೀಸ್ ಅಧಿಕಾರಿ ಸರ್ಜ್ ಸಬೋರಿನ್ ಒಂದು ಪ್ರಸಂಗವನ್ನು ನೆನೆಪಿಸಿಕೊಳ್ಳುತ್ತ ಹೀಗೆಂದು ಹೇಳಿದರು: "ಒಂದು ದಿವಸ ಬೆಳಿಗ್ಗೆ ಲಂಡನ್ನಿನ 'ರಾಶಾ' ಕಾರ್ಯಾಲಯದಿಂದ ನನಗೊಂದು ಕೇಬಲ್ ಸುದ್ದಿ ಬಂತು. ಆಕ್ಸ್‌ಫರ್ಡ್‌ನಲ್ಲಿ ಕಾರು ನಡೆಸುತ್ತಿದ್ದ ತರುಣ ಭಾರತೀಯನೊಬ್ಬನ ಆಸನದ ಅಡಿಯಲ್ಲಿ ಒಂದು ಕಿಲೋ ತೂಕದಷ್ಟು ಹೆರಾಯಿನ್ನನ್ನು ಅಡಗಿಸಿಟ್ಟಿದ್ದುದು ಕಂಡು ಬಂದಿತು. ಅವನ ಜೊತೆಯಲ್ಲಿ ವಯಸ್ಸಾದ ಒಬ್ಬ ಭಾರತೀಯ ಮಹಿಳೆ ಇದ್ದಳು ಎಂಬುದೇ ಆ ಸುದ್ದಿಯಾಗಿತ್ತು.

ಗಣ್ಯರ ಪಡೆ: "ಅವರಿಬ್ಬರ ಹೆಸರುಗಳನ್ನೂ ನಾನು ತಪಾಸಣೆ ಮಾಡಿ ನೋಡಿದೆ. ಬೆಲ್ಜಿಯಂ, ನೆದರ್ ಲ್ಯಾಂಡ್ಸ್ ಮತ್ತು ಫ್ರಾನ್ಸ್ ದೇಶಗಳಲ್ಲಿ ನಡೆಸಿದ ಹಿಂದಿನ ತನಿಖೆಗಳಲ್ಲಿ ಆಕೆಯನ್ನು ಹೆಸರಿಸಲಾಗಿತ್ತು. ಆ ಎಲ್ಲ ಸಂದರ್ಭ ಗಳಲ್ಲಿಯೂ ತರುಣ ಭಾರತೀಯ ಸಾಗಣೆದಾರರು ಸಿಕ್ಕಿಹಾಕಿಕೊಂಡಿದ್ದರು ಹಾಗೂ ಆ ತರುಣರಿಗೆ ಶಿಕ್ಷೆ ವಿಧಿಸಲಾಗಿತ್ತು. ಆದರೆ ಆಕೆ ಮಾತ್ರ ಬಂಧನಕ್ಕೆ ಒಳಗಾಗದೆ, ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಳು. ಆಗ ಕೈಗೊಂಡ ಕ್ರಮದ ಬಗ್ಗೆ ಆತ ಹೀಗೆನ್ನುತ್ತಾರೆ:

"ಆದ್ದರಿಂದ ನಾನು ಬ್ರಿಟನ್ನಿನ ಶಾಖೆಯನ್ನು ಮತ್ತೆ ಸಂಪರ್ಕಿಸಿದೆ. ಅವರೂ ಆಕೆಯನ್ನೂ ಬಿಟ್ಟುಬಿಟ್ಟಿದ್ದರು. ಆದರೆ, ಆಕೆಗೆ ತನ್ನ ಬಗ್ಗೆ ಅದೆಷ್ಟು ಆತ್ಮವಿಶ್ವಾಸ ಇದ್ದಿತೆಂದರೆ, ಆಕೆ ಆಕ್ಸ್‌ಫರ್ಡಿನ ಜೈಲಿಗೆ ಹೋಗಿ, ತನ್ನ ಇತ್ತೀಚಿನ ಗೆಳೆಯನನ್ನು ಭೇಟಿ ಮಾಡಿದಳು. ಅದು ಅವಳ ತಂತ್ರ ಗಳನ್ನೆಲ್ಲ ಹಾಳುಗೆಡವಿತು; ಅವಳ ಬಣ್ಣವನ್ನು ಬಯಲು ಮಾಡಿತು!

"ಈಗ ಆಕೆ ೧೪ ವರ್ಷಗಳ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸುತ್ತಿ ದ್ದಾಳೆ.

೧೫ ಮಂದಿ ಸಂಪರ್ಕಾಧಿಕಾರಿಗಳ ಒಂದು ಗಣ್ಯ ಪಡೆ ಜಗತ್ತಿನಾದ್ಯಂತ ಸಂಚರಿಸುತ್ತದೆ ಹಾಗೂ ಮಾದಕ ದ್ರವ್ಯಗಳ ಕಳ್ಳ ಸಾಗಣೆಯ ವಿರುದ್ಧವಾಗಿ ನಡೆಸುತ್ತಿರುವ ಹೋರಾಟದಲ್ಲಿ ರಾಷ್ಟ್ರೀಯ ಪೋಲೀಸ್ ಪಡೆಗಳ ಜೊತೆಗೂಡಿ ದುಡಿಯುತ್ತದೆ. ಕಾರ್ಯಯೋಜನೆಗಳಲ್ಲಿ ಸಮನ್ವಯ-ಸಾಮರಸ್ಯಗಳನ್ನು ಸಾಧಿಸುವಲ್ಲಿ ಹಾಗೂ ವಿಚಾರಣಾಕ್ರಮದ ಬಗ್ಗೆ ಸಲಹೆ-ಸೂಚನೆಗಳನ್ನು ನೀಡುವಲ್ಲಿ ಅವರು ಸಹಕರಿಸುತ್ತಿದ್ದಾರೆ. ವಿದ್ಯುತ್-ಚಾಲಿತ ಗಾಲಿ-ಕುರ್ಚಿಗಳ ಬ್ಯಾಟರಿಗಳಲ್ಲಿ ಆಳವಾದ ನೀರಿಗೆ ಜಿಗಿಯುವ ಈಜುಗಾರರ ಗಾಳಿ-ಶೀಶೆಗಳಲ್ಲಿ, ಶಾಂಘಾಯ್‌ನಿಂದ ಸ್ಯಾನ್‌ಫ್ರಾನ್‌ಸಿಸ್ಕೋಗೆ ವಾಯುಯಾನದಲ್ಲಿ ಕಳಿಸಲಾಗುವ ನೀರು ತುಂಬಿದ ಪೆಟ್ಟಿಗೆಗಳಲ್ಲಿನ ಹಳದಿ-ಮೀನುಗಳ ಒಳಗೆ ಇರಿಸಲಾದ ತೆಳು ರಬ್ಬರ್ ನಳಿಕೆಗಳಲ್ಲಿ ಹಾಗೂ ಶೀತಲೀಕರಿಸಿದ ಶಿಲುಬೆ-ಫಲದ ರಸದ ೧೧೫ ಪೀಪಾಯಿಗಳಲ್ಲಿ (ಇವುಗಳನ್ನು ೧೯೯೦ ರಲ್ಲಿ ಕೊಲಂಬಿಯಾದಿಂದ ಹಾಲೆಂಡಿಗೆ ಆಮದು ಮಾಡಿಕೊಳ್ಳಲಾಗುತ್ತಿತ್ತು!) ಕೊಕೇನನ್ನೂ ಅಡಿಗಿಸಿಟ್ಟಿದುದನ್ನು "ಇಂಟರ್‌ಪೋಲ್" ಪತ್ತೆ ಮಾಡಿತು. ಆಗಿನ ಯುರೋಪ್ ಖಂಡದಲ್ಲಿ ವಶ ಪಡಿಸಿಕೊಳ್ಳಲಾದ ಕೊಕೇನಿನ ಅತ್ಯಂತ ಬೃಹತ್ ದಾಸ್ತಾನು ಅದಾಗಿದ್ದು, ಅದರ ಬೆಲೆ ೮೦ ದಶಲಕ್ಷ ಪೌಂಡುಗಳಷ್ಟಾಗಿತ್ತು.

ಜಾಗತಿಕ ಅಕ್ರಮ ಮಾದಕ ದ್ರವ್ಯ ವಹಿವಾಟಿನ ಮೌಲ್ಯ ಎಷ್ಟಾಗಿರಬಹುದು? ಇದು ನಾವು ತತ್ತರಿಸುವಂತೆ ಮಾಡಬಹುದಾಗಿರುವ ಪ್ರಮಾಣದಲ್ಲಿದ್ದು, ಇದರ ವಾರ್ಷಿಕ ಮೌಲ್ಯ ಸುಮಾರು ಐನೂರು ಶತಕೋಟಿ ಡಾಲರುಗಳಷ್ಟಾಗಿರಬೇಕೆಂದು 'ಇಂಟರ್‌ಪೋಲ್'ನ ಅಧಿಕಾರಿಗಳು ಅಂದಾಜು ಮಾಡಿದ್ದಾರೆ.

ಸುಂದರ ಜರ್ಮನ್ ತರುಣಿಯೊಂದಿಗೆ ಬೆಳೆದ ಪ್ರೇಮ ಸಂಬಂಧದಿಂದಾಗಿ ಮೊನಾಕೋದ ರಾಜಕುಮಾರನಾದ ಮೊದಲನೆಯ ಆಲ್ಬರ್ಟ್, (ಈಗಿನ ರಾಜಕುಮಾರನ ಮುತ್ತಾತ) ಇಂಟರ್‌ಪೋಲನ್ನು ಸ್ಥಾಪಿಸಿದನೆಂದು ಹೇಳುವ ಕೇಳು ಹಾಸ್ಯದ ಕಥೆಯೊಂದಿದೆ. ಒಂದು ರಾತ್ರಿ ಆ ರಾಜಕುಮಾರ ತನ್ನ ಈ ಪ್ರೇಯಸಿಯೊಂದಿಗೆ ತನ್ನ ಉದ್ಯಾನ ವನದಲ್ಲಿ ವಿಹರಿಸುತ್ತಿದ್ದಾಗ, ಆಕೆಯ ಗೆಳೆಯ ರಾಜಕುಮಾರನ ಖಾಸಗಿ ಸೌಧವನ್ನೂ ಲೂಟಿಮಾಡಿಬಿಟ್ಟನಂತೆ! ಆ ಬಳಿಕ, ಆಲ್ಬರ್ಟನ ಪೋಲೀಸ್ ಪಡೆಯ ಕೈಗೆ ಸಿಲುಕದಂತೆ, ಅವರಿಬ್ಬರೂ ಇಟಲಿಗೆ ಪರಾರಿಯಾಗಿಬಿಟ್ಟರಂತೆ!

ಆಲ್ಬರ್ಟನ ಆಶಯ ಏನಾದರೂ ಆಗಿರಲಿ, ೧೯೧೪ರ ಏಪ್ರಿಲ್‌ನಲ್ಲಿ ೨೪ ದೇಶಗಳ ಪ್ರತಿನಿಧಿಗಳನ್ನು ಸಭೆಯೊಂದಕ್ಕೆ ಆಹ್ವಾನಿಸಿದ. ಆ ಸಮಾವೇಶಕ್ಕೆ ಪ್ರಥಮ ಅಂತರರಾಷ್ಟ್ರೀಯ ಅಪರಾಧಶೋಧಕ ಪೋಲೀಸ್ ಮಹಾಧಿವೇಶನ (First International Criminal Police Congress) ಎಂಬ ಅದ್ಭುತವಾದ ಹೆಸರನ್ನು ಕೊಡಲಾಗಿತ್ತು. ಕೇಂದ್ರೀಕೃತ ಅಂತರ-ರಾಷ್ಟ್ರೀಯ ಅಪರಾಧಿಕ ದಸ್ತಾವೇಜುಗಳನ್ನು ಸಿದ್ಧಪಡಿಸುವುದಕ್ಕೆ (ಇಂಥ ವ್ಯವಸ್ಥೆ ಇಂದು ಲಯೋನ್ಸ್‌ನಲ್ಲಿ ಅಸ್ತಿತ್ವದಲ್ಲಿದೆ!) ಹಾಗೂ ಪ್ರತಿಯೊಂದು ರಾಷ್ಟ್ರಕ್ಕೂ ಸಂಬಂಧಿಸಿದಂತೆ ಸಮಾನ ರೂಪದಲ್ಲಿ ಕಾರ್ಯಶೀಲವಾಗಿರುವಂಥ ತ್ವರಿತ ಪ್ರತ್ಯರ್ಪಣ ಪ್ರಕ್ರಿಯೆಯನ್ನು ರೂಪಿಸುವುದಕ್ಕೆ ಸಂಬಂಧಿಸಿದ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಈ ಬಗೆಯ ಏರ್ಪಾಟು ಇನ್ನೂ ಆಗಿಲ್ಲ.

ಮೊದಲನೆಯ ವಿಶ್ವಯುದ್ಧ ಆರಂಭಗೊಂಡಿದ್ದರಿಂದ ರಾಜಕುಮಾರ ಆಲ್ಬರ್ಟನ ಪ್ರಸ್ತಾವಗಳನ್ನು ಮೂಲೆಗೆ ತಳ್ಳಬೇಕಾಯಿತು. ಆದರೆ ಆಸ್ಟ್ರಿಯಾ ಪೋಲೀಸ್ ಇಲಾಖೆಯ ಮುಖ್ಯಸ್ಥರು ೧೯೨೩ರಲ್ಲಿ ಈ ಪ್ರಸ್ತಾವಗಳನ್ನು ಪುನರುಜ್ಜೀವನಗೊಳಿಸಿದರು. ಹಾಗೂ ಆ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಅಂತರರಾಷ್ಟ್ರೀಯ ಅಪರಾಧ ಶೋಧಕ ಪೋಲೀಸ್ ಆಯೋಗ (International Criminal Police Commission) ವನ್ನೂ ರೂಪಿಸಿ

ದರು. ಇಂದಿನ ಸಂಘಟನೆ ತಾನು ಅಂದಿನಿಂದ ಅಸ್ತಿತ್ವಕ್ಕೆ ಬಂದುದಾಗಿ ಪರಿಗಣಿಸಿದೆ.

ಎರಡನೆಯ ವಿಶ್ವಯುದ್ಧದ ಅವಧಿಯಲ್ಲಿ ಈ 'ಅಂತರ-ರಾಷ್ಟ್ರೀಯ ಅಪರಾಧ ಶೋಧಕ ಪೋಲೀಸ್ ಆಯೋಗ' ಮುಚ್ಚಿಹೋಯಿತು ಎಂಬುದಾಗಿ ಕೆಲವು ಅಧಿಕೃತ ಮೂಲಗಳು ಹೇಳುತ್ತವೆ. ಇಷ್ಟಾಗಿಯೂ ೧೯೪೮ರಲ್ಲಿ ಲಯೋನ್ಸ್‌ನಲ್ಲಿ ಇದರ ಕೇಂದ್ರ ಕಛೇರಿಯನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಫ್ರಾನ್ಸಿನ ಅಧ್ಯಕ್ಷರಾದ ಫ್ರಾಂಕೋಯಿ ಮಿತ್ತೆರಾ ಅವರು 'ಅಂಗೀಕಾರಾರ್ಹವಲ್ಲದಂಥ ಉದ್ದೇಶಗಳಿಗಾಗಿ ಅದನ್ನು ಬಳಸುತ್ತಿದ್ದುದಾಗಿ ಹೇಳಿದ್ದಾರೆ.

ಆಯೋಗದ ಯುದ್ಧಕಾಲ ಸಂಬಂಧಿ ಕಡತಗಳು ಕಣ್ಮರೆಯಾಗಿವೆ. ಆದರೆ, ೧೯೩೮ರಲ್ಲಿ ಜರ್ಮನ್ನರು ಆಸ್ಟ್ರೇಲಿಯಾದ ಮೇಲೆ ಅತಿಕ್ರಮಣವನ್ನು ನಡೆಸಿದ ಬಳಿಕ 'ಅಂತರರಾಷ್ಟ್ರೀಯ ಅಪರಾಧ ಶೋಧಕ ಪೋಲೀಸ್ ಆಯೋಗ'ವನ್ನು ಬರ್ಲಿನ್ನಿಗೆ ವರ್ಗಾಯಿಸಲಾಯಿತು. ಅದು ಅಲ್ಲಿ 'ಗೆಸ್ಟಾಪೋ' (ನಾಜಿಗಳ ಆಡಳಿತಾವಧಿಯಲ್ಲಿ ಕಾರ್ಯಶೀಲವಾಗಿದ್ದ ಜರ್ಮನ್ ಸರ್ಕಾರದ ರಹಸ್ಯ ಪೋಲೀಸ್ ದಳ)ದ ಸೋದರ ಸಂಸ್ಥೆಯಾಗಿ ಪರಿಣಮಿಸಿತು.

ಪ್ಯಾರಿಸ್‌ನ ಕೇಂದ್ರ ಕಛೇರಿ: 'ಅಂತರರಾಷ್ಟ್ರೀಯ, ಅಪರಾಧ ಶೋಧಕ ಪೋಲೀಸ್ ಆಯೋಗ'ವನ್ನು ಕುಟಿಲೋದ್ದೇಶಗಳಿಗಾಗಿ ಬಳಸಲಾಯಿತೇ ಎಂಬುದು ಯಾರಿಗೂ–ನೂರ್ಯೆಂಬರ್ಗ್ ಯುದ್ಧ ವಿಚಾರಣೆಗಳಲ್ಲಿ ಪ್ರಮುಖ ಬ್ರಿಟಿಷ್ ಅಭಿಯೋಜಕರಾಗಿದ್ದ ಲಾರ್ಡ್ ಷಾಕ್ರಾಸ್ ಅವರಿಗೂ-ತಿಳಿದಿರಲಿಲ್ಲ. ಆದರೆ, ಈ ಪಡೆಗಳು ಯೆಹೂದ್ಯರು, ಅಲೆಮಾರಿಗಳು, ಸಲಿಂಗಕಾಮಿಗಳು ಮತ್ತು ಇತರ 'ಅನಪೇಕ್ಷಣೀಯ ವ್ಯಕ್ತಿ'ಗಳನ್ನು ತೊಡೆದುಹಾಕುವುದಕ್ಕೆ ಅತ್ಯುತ್ತಮ ಸಾಧನವಾಗಬಹುದಾಗಿತ್ತು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಯುದ್ಧದ ಅವಧಿಯಲ್ಲಿ ಬಹುಕಾಲದವರೆಗೆ ಈ ಪೋಲೀಸ್ ಆಯೋಗದ ಅಧ್ಯಕ್ಷನಾಗಿದ್ದ ಅರ್ನೆಸ್ಟ್ ಕಾಲ್ಟೆನ್ ಬ್ರೂನ್ನರ್ ದೀರ್ಘಕಾಲ ನಾಜಿ ಅಧಿಕಾರಿಯೂ ಆಗಿದ್ದ. ಕಾವಲು ಪಡೆಯವರೊಂದಿಗೆ ವಿನೋದದ ಮಾತುಗಳನ್ನಾಡುತ್ತ ನಗುತ್ತ ಇರುತ್ತಿದ್ದ ಈ ವ್ಯಕ್ತಿ ಸಾಮೂಹಿಕ ಮರಣ ದಂಡನೆಯ ಕಾರ್ಯಾಚರಣೆಗಳನ್ನು ಸಂತೋಷದಿಂದಲೇ ನೋಡುತ್ತಿದ್ದ. ನ್ಯೂರೆಂಬರ್ಗ್ ವಿಚಾರಣೆಯಲ್ಲಿ ಈತನನ್ನು ಮಾನವತೆಯ ವಿರುದ್ಧವಾಗಿ ಕ್ರೂರ ಅಪರಾಧಗಳನ್ನೆಸಗಿದ ಘೋರ ಅಪರಾಧಿಯೆಂದು ತೀರ್ಮಾನಿಸಿ, ನೇಣುಹಾಕಲಾಯಿತು.

ಯುದ್ಧಾನಂತರದ ಅವಧಿಯಲ್ಲಿ ಈ ಪೋಲೀಸ್ ಆಯೋಗದ ಕಾರ್ಯ ಚಟುವಟಿಕೆಗಳನ್ನು ಪುನರಾರಂಭಿಸಿದಾಗ ಪ್ಯಾರಿಸ್ಸನ್ನು ಇದರ ಕೇಂದ್ರ ಕಛೇರಿಯಾಗಿ ಆಯಲಾಯಿತು ಹಾಗೂ ಫ್ರೆಂಚ್ ಅಪರಾಧ–ತನಿಖಾ ಇಲಾಖೆಯ ಸಹಾಯಕ ಮುಖ್ಯಸ್ಥರಾಗಿದ್ದ ಜೋನ್ ನೆಪ್ರೋಟೆಯನ್ನು ಹೊಸ ಸ್ವರೂಪ ನೀಡಲಾಗಿದ್ದ ಅಂತರರಾಷ್ಟ್ರೀಯ ಅಪರಾಧ–ಹೋರಾಟ ಸಂಘಟನೆಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಆಗಿನ ಸನ್ನಿವೇಶವನ್ನು ವಿವರಿಸುತ್ತ ಆತ ಹೀಗೆಂದಿದ್ದಾರೆ: "ವಿಶಾಲವಾದ ಕೋಣೆಯಲ್ಲಿ ಒಂದೇ ಒಂದು ಮೇಜು ಇತ್ತು. ಒಂದು ಹಾಳೆ ಕಾಗದ ಮತ್ತು ಒಂದು ಪೆನ್ಸಿಲ್ ಹಾಗೂ ಜಮಖಾನೆಯ ಮೇಲೆ ಬಿದ್ದಿರುವ ಕಾಳುಪಾಳುಗಳನ್ನೆ ಕುಕ್ಕಿ ಆಯುವ ಸಣ್ಣಪುಟ್ಟ ಹಕ್ಕಿಗಳನ್ನು ಬಿಟ್ಟು ಅಲ್ಲಿ ಬೇರೇನೂ ಇರಲಿಲ್ಲ."

ಸಂಸ್ಥೆಯ ಬಗ್ಗೆ ತಂತಿವಿಳಾಸವೊಂದು ಬೇಕಾಗಿತ್ತು. ಜುಲೈ ೧೯೪೬ರಲ್ಲಿ ನೆಪ್ರೋಟೆ ವಾಸ್ತವವಾಗಿ ಇತಿಹಾಸವನ್ನೇ ಸೃಷ್ಟಿಸಿಬಿಟ್ಟರೆನ್ನಬೇಕು. ಮುಂದೆ ಇದು ಎಷ್ಟು ಪ್ರಸಿದ್ಧವಾಗಿ ಪರಿಣಮಿಸಬಹುದೆಂಬ ಯಾವುದೇ ಕಲ್ಪನೆಯೂ ಇಲ್ಲದೆ, ಆತ ಪ್ಯಾರಿಸ್ಸಿನ ಅಂಚೆ ಅಧಿಕಾರಿಗಳ ಕಛೇರಿಯಲ್ಲಿ 'ಇಂಟರ್‌ಪೋಲ್' ಎಂಬ ಹೆಸರನ್ನು ನೋಂದಾಯಿಸಿದರು. ಇದು 'ಇಂಟರ್‌ನ್ಯಾಷನಲ್ ಪೋಲೀಸ್' ಎಂಬುದರ ಸಂಕ್ಷಿಪ್ತ ರೂಪವೇ ಆಗಿತ್ತು.

ಬೇರೆ ಬೇರೆ ಬಣ್ಣದ ಮೂಲೆಗಳನ್ನು ಹೊಂದಿರುವ ಸೂಚನಾಪತ್ರ ವ್ಯವಸ್ಥೆಯನ್ನೂ ನೆಪ್ರೋಟೆಯೇ ಜಾರಿಗೆ ತಂದರು. ಇಂದಿಗೂ 'ಇಂಟರ್‌ಪೋಲ್' ಇದೇ ವ್ಯವಸ್ಥೆಯನ್ನು ಬಳಸುತ್ತಿದೆ: ಕಾಣೆಯಾಗಿರುವ ವ್ಯಕ್ತಿಗಳ ಬಗೆಗಿನ ಸೂಚನಾಪತ್ರಗಳು ಹಳದಿ ಬಣ್ಣದಲ್ಲಿಯೂ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಿಹೋಗುತ್ತಿರುವಂಥ ಅಂತರರಾಷ್ಟ್ರೀಯ ಅಪರಾಧಿಗಳ ಬಗೆಗಿನ ಮಾಹಿತಿಯನ್ನೊಳಗೊಂಡಿರುವ ಸೂಚನಾಪತ್ರಗಳು ಹಸಿರು ಬಣ್ಣದಲ್ಲಿಯೂ, ಮೃತ ಶರೀರಗಳ ಚಹರೆಗೆ ಸಂಬಂಧಿಸಿದ ಸೂಚನಾ ಪತ್ರಗಳು ಕಪ್ಪು ಬಣ್ಣದಲ್ಲಿಯೂ, ಅಲಿಯಾಸ್ ಅಥವಾ ಉರ್ಫ್ ಅಥವಾ ಒಬ್ಬನೇ ವ್ಯಕ್ತಿಯ ನಾಮಾಂತರಗಳಿಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಯ ಬಗೆಗಿನ ಕೋರಿಕೆ ಪತ್ರಗಳು ನೀಲಿ ಬಣ್ಣದಲ್ಲಿಯೂ ಇರುತ್ತವೆ. ಇವು ಬಹುಮಟ್ಟಿಗೆ ಕಿಸೆಗಳ್ಳರ ವಿಷಯದಲ್ಲಿ ಬಳಕೆಯಾಗುತ್ತವೆ.

ಅಗಾಧ ಸಮಸ್ಯೆಗಳು: ಇವುಗಳಲ್ಲೆಲ್ಲ ಬಹಳ ಮುಖ್ಯವಾದುದೆಂದರೆ ಕೆಂಪು–ಸೂಚನಾಪತ್ರ. ಇದನ್ನು ಬಹುತೇಕವಾಗಿ "ಅಂತರರಾಷ್ಟ್ರೀಯ ಬಂಧನ

ಆದೇಶ"ವೆಂದೇ ಕರೆಯಲಾಗುತ್ತದೆ. ಉದಾಹರಣೆಗೆ, ಬೋಯಿಂಗ್ ೭೪೭ರಲ್ಲಿ ಬಾಂಬ್ ಆಸ್ಫೋಟನೆಗೊಂಡ ಲಾಕರ್ಬಿ ದುರ್ಘಟನೆಯ ತರುವಾಯ ಇಬ್ಬರು ಶಂಕಿತ ಲಿಬ್ಯನ್ ಉಗ್ರಗಾಮಿಗಳನ್ನು ಬಂಧಿಸಿ ಪ್ರತ್ಯರ್ಪಣ ಕ್ರಮವನ್ನು ಕೈಗೊಳ್ಳುವಂತೆ ಕೋರಿ ಲಂಡನ್ನಿನ ರಾಷ್ಟ್ರೀಯ ಕೇಂದ್ರ (ಶಾಖಾ) ಕಾರ್ಯಾಲಯದ ಕೋರಿಕೆಯ ಮೇಲೆ ಹೊರಡಿಸಲಾದ ಕೆಂಪು-ಸೂಚನಾ ಪತ್ರವನ್ನು ತೆಗೆದುಕೊಳ್ಳಬಹುದು (ಇದನ್ನು ಕರ್ನಲ್ ಗಡ್ಡಾಫಿ ಮತ್ತು ಲಿಬ್ಯಾದ ಪೋಲೀಸರು ನಿರ್ಲಕ್ಷಿಸಿದರು ಎಂಬುದು ಬೇರೆಯೇ ಆದ ಮಾತು!).

೧೯೭೦ರ ದಶಕದಲ್ಲಿ ಉಂಟಾದ ಅಂತರರಾಷ್ಟ್ರೀಯ ಉಗ್ರಗಾಮಿ ಚಟುವಟಿಕೆಗಳ ಹೆಚ್ಚಳ 'ಇಂಟರ್‌ಪೋಲ್'ಗೆ ಅಗಾಧ ಸಮಸ್ಯೆಗಳನ್ನು ಸೃಷ್ಟಿಸಿದ್ದೇ ಅಲ್ಲದೆ, ಅದರ ಅಸ್ತಿತ್ವಕ್ಕೆ ಅಪಾಯವನ್ನು ಒಡ್ಡಿತ್ತು. "ರಾಜಕೀಯ, ಸೈನಿಕ, ಧಾರ್ಮಿಕ ಅಥವಾ ಜನಾಂಗೀಯ ಸ್ವರೂಪ"ದ ಅಪರಾಧಗಳ ವಿಷಯದಲ್ಲಿ ಕೈಹಾಕುವುದನ್ನು ಅದರ ಶಾಸನ ನಿಷೇಧಿಸಿತ್ತು. ಹೀಗಾಗಿ ೧೯೭೨ರಲ್ಲಿ ಮುಸುಕುಧಾರಿ ಪ್ಯಾಲೆಸ್ಟೀನಿಯನ್ ಅರಬ್ಬರು ಮ್ಯೂನಿಕ್ ಒಲಂಪಿಕ್ಸ್‌ನ ಇಸ್ರೇಲಿ ಕ್ರೀಡಾಪಟುಗಳ ತಂಗುದಾಣದ ಮೇಲೆ ಮಿಂಚಿನ ದಾಳಿ ನಡೆಸಿ, ಒಂಬತ್ತು ಮಂದಿ ಕ್ರೀಡಾಪಟುಗಳನ್ನು ಒತ್ತೆಯಾಗಿರಿಸಿಕೊಂಡು, ಅನಂತರದಲ್ಲಿ ಅವರನ್ನು ಕೊಂದುಹಾಕಿದ ಸಂದರ್ಭದಲ್ಲಿ, ಪಶ್ಚಿಮ ಜರ್ಮನಿಯ ರಾಷ್ಟ್ರೀಯ ಶಾಖಾ ಕಾರ್ಯಾಲಯ ಅರಬ್ ಉಗ್ರಗಾಮಿಗಳ ಬಗ್ಗೆ ಮಾಹಿತಿಯನ್ನು ಕೋರಿದಾಗ, ನೆಪ್ರೋಟೆ ಮಾಹಿತಿಯನ್ನು ಒದಗಿಸಲು 'ಸಾಧ್ಯವಿಲ್ಲ' ಎಂದು ನಿರಾಕರಿಸಬೇಕಾಗಿ ಬಂತು. ಈ ಅಪರಾಧ ರಾಜಕೀಯ ಸ್ವರೂಪದ್ದಾಗಿರುವುದರಿಂದ, ಇದರಲ್ಲಿ 'ಇಂಟರ್‌ಪೋಲ್' ಕೈಹಾಕುವುದು ಉಚಿತವಲ್ಲವೆಂದು ಆತ ಭಾವಿಸಿದರು.

ತನ್ನ ಈ ವರ್ತನೆಯಿಂದಾಗಿ 'ಇಂಟರ್‌ಪೋಲ್' ತನ್ನ ವಿಶ್ವಾಸಾರ್ಹತೆಯನ್ನು ಬಹುಮಟ್ಟಿಗೆ ಕಳೆದುಕೊಂಡಿತು. ಹಾಗೂ ಸದಸ್ಯರಾಷ್ಟ್ರಗಳ ವಾಸ್ತವಿಕ ಬೆಂಬಲವನ್ನೂ ಅಷ್ಟರಮಟ್ಟಿಗೆ ಕಳೆದುಕೊಂಡಿತು. ೧೯೭೮ರಲ್ಲಿ ನೆಪ್ರೋಟೆಯ ಉತ್ತರಾಧಿಕಾರಿಯಾಗಿ ಫ್ರಾನ್ಸಿನ ಅಧಿಕಾರಿಯೊಬ್ಬರು ಪ್ರಧಾನ ಕಾರ್ಯದರ್ಶಿಯ ಸ್ಥಾನವನ್ನು ಅಲಂಕರಿಸಿದರು. ಆದರೆ, ೧೯೭೮ರಲ್ಲಿ ಸದಸ್ಯ ರಾಷ್ಟ್ರಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳ ರಹಸ್ಯ ಸೇವಾ ವಿಭಾಗ ಜಾನ್ ಸಿಂಪ್ಸನ್‌ನನ್ನು ಅವರ ಅಧ್ಯಕ್ಷರನ್ನಾಗಿ ಆಯ್ದ ಬಳಿಕವಷ್ಟೇ ಫ್ರೆಂಚ್ ಪೋಲೀಸ್ ಶೈಲಿಯ ಅಧಿಕಾರಶಾಹಿಯ 'ಮೃತ-ಹಸ್ತ'ದ ಕಪಿಮುಷ್ಟಿಯಿಂದ

ಅವಕ್ಕೆ ಬಿಡುಗಡೆ ದೊರೆತಿದ್ದು. ಅದರ ಮಾರನೆಯ ವರ್ಷವೇ ಕೆಂಡಾಲ್ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡದ್ದು.

ಹೊಸದಾಗಿ ಬಂದ ಈ ವಿಭಾಗ ಮುಖ್ಯಸ್ಥರುಗಳು ಕಡತಗಳನ್ನು ಸುವ್ಯವಸ್ಥಿತವಾಗಿಸಬೇಕಾದ ಅಗತ್ಯವನ್ನು ಮನಗಂಡರು. ಅವುಗಳ ಸಂಖ್ಯೆ ೪,೫೩೩,೧೨೮ ಕಾರ್ಡುಗಳಷ್ಟೆ ದಿಗ್ಭ್ರಮೆಗೊಳಿಸುವ ಮಟ್ಟವನ್ನು ಮುಟ್ಟಿತ್ತು. ಅವುಗಳಲ್ಲಿ ೧೯೭೩ರಲ್ಲಿ ಸ್ವಿಜರ್ಲೆಂಡಿನಲ್ಲಿ ಕಳುವಾದ ಸರ್ಕಸ್ ಆನೆಯ ಪ್ರಕರಣದಂಥ ಜನರು ಅರ್ಥಂಬರ್ಥ ಮರೆತುಬಿಟ್ಟಿದ್ದ ಪ್ರಕರಣಗಳೂ ಇದ್ದುವು. ಜೊತೆಗೆ ಅವರು ಕಂಪ್ಯೂಟರೀಕರಣದ ಪ್ರಕ್ರಿಯೆಯನ್ನೂ ತ್ವರಿತಗೊಳಿಸಿದರು. ಕೆಂಡಾಲ್ ಅವರು ಕೈಗೊಂಡ ಆದ್ಯ ಉಪಕ್ರಮಗಳಲ್ಲಿ ಒಂದೆಂದರೆ 'ಉಗ್ರಗಾಮಿ ಚಟುವಟಿಕೆ ವಿರೋಧಿ ತಂಡ'ವೊಂದನ್ನು ಸ್ಥಾಪಿಸಿದ್ದು.

ಕಾರ್ಯಾಚರಣೆ–ಸಂಬಂಧಿ ಕಾರಣಗಳಿಗಾಗಿ ತನ್ನ ಹೆಸರನ್ನು ಬಹಿರಂಗ ಪಡಿಸಲು ಇಚ್ಛಿಸದ ಈ ತಂಡದ ಹಿರಿಯ ಸದಸ್ಯನೊಬ್ಬ ಹೀಗೆನ್ನುತ್ತಾನೆ: “ನಮ್ಮ ಕಂಪ್ಯೂಟರಿನಲ್ಲಿ ೬೪೮ ಉಗ್ರಗಾಮಿ ಚಟುವಟಿಕೆ ವಿರೋಧಿ ಸಂಘಟನೆಗಳು ದಾಖಲಾಗಿದ್ದು ಅವುಗಳ ಚಲನವಲನಗಳ ಮೇಲೆ ಕಣ್ಣಿಟ್ಟಿರಲಾಗುತ್ತದೆ; ಎಚ್ಚರಿಕೆಯ ಸೂಚನೆಗಳನ್ನು ಹೊರಡಿಸಲಾಗುತ್ತ ಇರುತ್ತದೆ; ಹಾಗೂ ಸ್ಥಳೀಯ ರಾಷ್ಟ್ರೀಯ ಶಾಖಾ ಕೇಂದ್ರಗಳಿಗೆ ಮುನ್ನೆಚ್ಚರಿಕೆಗಳನ್ನು ನೀಡಲಾಗುತ್ತದೆ. ಐವರನ್ನು ಆಹುತಿ ತೆಗೆದುಕೊಂಡ ಹಾಗೂ ೧೦೦೦ಕ್ಕೂ ಹೆಚ್ಚು ಮಂದಿಯನ್ನು ಗಾಯಾಳುಗಳನ್ನಾಗಿಸಿದ ನ್ಯೂಯಾರ್ಕಿನ 'ವರ್ಲ್ಡ್ ಟ್ರೇಡ್ ಸೆಂಟರ್'ನ ಬುನಾದಿಯನ್ನೇ ಅಲುಗಾಡಿಸಿದ ಬೃಹತ್ ಬಾಂಬ್ ಸ್ಫೋಟದ ಪ್ರಕರಣದ ತರುವಾಯ, 'ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್' (ಎಫ್. ಬಿ. ಐ) ವಾಷಿಂಗ್‌ಟನ್ನಿನಲ್ಲಿನ ರಾಷ್ಟ್ರೀಯ ಶಾಖಾ ಕಾರ್ಯಾಲಯವನ್ನು ತುರ್ತಾಗಿ ದೂರವಾಣಿಯ ಮೂಲಕ ಸಂಪರ್ಕಿಸಿ, 'ಇಂಟರ್‌ಪೋಲ್'ನ ನೆರವಿಗಾಗಿ ಮನವಿ ಸಲ್ಲಿಸಿತು.

೧೯೯೩ರ ಜನವರಿಯಲ್ಲಿ ಐರೋಪ್ಯ ಸಾಮಾನ್ಯ ಮಾರುಕಟ್ಟೆಯ ಅಂತರ–ರಾಷ್ಟ್ರೀಯ ಗಡಿಗಳು ಸಂಕುಚಿತಗೊಂಡಾಗ, ಐರೋಪ್ಯ ಅಪರಾಧಗಳ ಮಹಾದ್ವಾರವೇ ಮುಕ್ತವಾಗಿ ನಿಲ್ಲುತ್ತದೆಂಬ ಭಯಂಕರವಾದ ಭವಿಷ್ಯವಾಣಿಗಳನ್ನು ನುಡಿಯಲಾಗಿತ್ತು. ಆದರೆ, ಭಯಂಕರ ಅಪರಾಧಗಳ ಹೊಸ ಕಥೆಗಳೇನೂ ಮೂಡಿಬಂದಿಲ್ಲ. ಪೂರ್ವ ಯುರೋಪಿನ ಗಡಿನಾಡು ನಿಯಂತ್ರಣಗಳು ಕುಸಿದು

ಬಿದ್ದ ಪರಿಣಾಮವಾಗಿ, ಅಂತರ-ರಾಷ್ಟ್ರೀಯ ಅಪರಾಧವೃಶ್ಯ ನಾಟಕೀಯವನ್ನ ಬಹುದಾದ ರೀತಿಯಲ್ಲಿ ಬದಲಾವಣೆಗೊಂಡುಬಿಟ್ಟಿದೆ.

ಹಳೆಯ ಸೋವಿಯೆಟ್ ಒಕ್ಕೂಟದ ಹಾಗೂ ಪೂರ್ವದ ಬಣದ ವತಿಯಿಂದ ಹೊಸ ಬಗೆಯ ಅತ್ಯಂತ ಪ್ರಬಲವಾದ ಅಪರಾಧ ಚೇತನ ಹೊರ ಹೊಮ್ಮಿ ಬರುತ್ತಿದೆ. ಚಿನ್ನದಿಂದ ಹಿಡಿದು ಕಲಾಸಂಪತ್ತು ಮತ್ತು ಪೆಟ್ರೋಲಿಯಂವರೆಗೆ ಪ್ರತಿಯೊಂದು ವಸ್ತುವನ್ನೂ ಸಂಘಟಿತ ಗುಂಪುಗಳು ವಿದೇಶಗಳಿಗೆ ಕದ್ದು ಸಾಗಿಸಲಾಗುತ್ತಿವೆ. ಈ ಮೊದಲು ಪೂರ್ವ ಜರ್ಮನಿಯಾಗಿದ್ದ ಭಾಗದಿಂದ, ಕದ್ದು ತಂದ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು, ಟ್ಯಾಂಕುಗಳನ್ನು ಮಾಜಿ ರೆಡ್-ಕ್ರಾಸ್ ಯೋಧರುಗಳು ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ರಷ್ಯ, ಉಕ್ರೇನ್, ಪೂರ್ವ-ಯುಗೋಸ್ಲಾವಿಯ, ಇಟಲಿ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಮಾಫಿಯಾ ವಿರೋಧಿ ಕಾರ್ಯಾಚರಣೆಗಳ ಮುಖ್ಯಸ್ಥರು ಪ್ರಾಹಾದಲ್ಲಿ 'ಶೃಂಗಸಭೆ'ಯೊಂದನ್ನು ನಡೆಸಿದರು.

ಅಗಾಧ ಪ್ರಮಾಣದ ಈ ಹೊಸ ಅಪರಾಧದ ಅಲೆಯ ಅತ್ಯಂತ ಮನ ಕದಡುವ ಸಂಗತಿಯೆಂದರೆ ಪರಮಾಣು ರಿಯಾಕ್ಟರುಗಳಿಂದ ಹಾಗೂ ಉಪಕರಣ ಸಂಸ್ಥಾಪನೆಗಳಿಂದ ವಿಕಿರಣಪಟು ವಸ್ತುಗಳನ್ನು ಪಶ್ಚಿಮ-ಯೂರೋಪಿಗೆ ಕಳ್ಳತನದಲ್ಲಿ ತಂದು ಸಾಗಿಸುತ್ತಿರುವುದು. 'ಇಂಟರ್‌ಪೋಲ್'ನ ಉಗ್ರಗಾಮಿ ಚಟುವಟಿಕೆ ವಿರೋಧಿ ತಂಡದಲ್ಲಿ ಎರಡನೆಯದಾಗಿರುವ ಹಾಗೂ ಫ್ರೆಂಚ್ ಪೋಲೀಸ್ ತಂಡದ ಸದಸ್ಯೆಯಾಗಿರುವ ಲಾರೆನ್ಸ್ ತೋರ್ಕಿ ಹೀಗೆನ್ನುತ್ತಾರೆ: "ಮುಖ್ಯವಾಗಿ ಇವು ಹರಿದು ಬರುವುದು ಜರ್ಮನಿಗೆ. ಪೋಲೆಂಡಿನೊಂದಿಗೆ ಬಹುಮಟ್ಟಿಗೆ ತೆರೆದ ಗಡಿಯನ್ನು ಹೊಂದಿರುವ ಪೋಲೆಂಡಿನ ಮೂಲಕ!"

ರಷ್ಯಾದಿಂದ ೭೯ ಕಿಲೋ ಗ್ರಾಮುಗಳಷ್ಟು ಪ್ಲುಟೋನಿಯಮ್ಮನ್ನು ಕದ್ದು ಸಾಗಿಸಿದ ಆರೋಪದ ಮೇಲೆ ಬ್ರಿಟಿಷ್ ವ್ಯಾಪಾರಿಯೊಬ್ಬನನ್ನು ಜರ್ಮನಿಯ ಫ್ಲೆನ್ಸ್‌ಬರ್ಗ್ ಬಂದರಿನಲ್ಲಿ ಈಗಾಗಲೇ ಬಂಧಿಸಲಾಗಿದೆ. ಅಧಿಕಾರದಾಹಿ ದುಷ್ಟನೊಬ್ಬ ಪರಮಾಣು ಶಸ್ತ್ರಾಸ್ತ್ರಗಳ ಭಂಡಾರದ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಂಡು ಜಗತ್ತನ್ನು ತನ್ನ ಬೆರಳ ತುದಿಯಲ್ಲಿ ಕುಣಿಸುವ ಸಂಭವ ಈಗಂತೂ ಭಾವಾತಿರೇಕದ ಕಲ್ಪನೆ ಮಾತ್ರವಾಗಿ ಉಳಿದಿಲ್ಲ.

ಕೆಂಡಾಲ್ ಅವರ ಆಧುನಿಕೀಕರಣದ ಉತ್ಸಾಹಪೂರ್ಣ ಕಾರ್ಯಕ್ರಮಗಳಿಂದಾಗಿ 'ಇಂಟರ್‌ಪೋಲ್' ತನ್ನ ಅಸ್ತಿತ್ವದ ಔಚಿತ್ಯವನ್ನಿಂದು ಸಾರಿ ಹೇಳುತ್ತಿದೆ ಹಾಗೂ ಹೆಚ್ಚು ಹೆಚ್ಚಾಗಿ ಜನರ (ಅಂದರೆ, ರಾಷ್ಟ್ರೀಯ ಶಾಖಾ ಕಾರ್ಯಾಲಯ

ಗಳ) ಮೆಚ್ಚುಗೆಯನ್ನು ಗಳಿಸುತ್ತಿದೆ. ಜನರ ಬೆಂಬಲವಿಲ್ಲದೆ ಅದು ಬದುಕಿ ಉಳಿಯಲಾರದು ಅಥವಾ ಅಭಿವೃದ್ಧಿಯನ್ನು ಸಾಧಿಸಲಾರದಷ್ಟೆ! ಸದಸ್ಯ ರಾಷ್ಟ್ರಗಳ ದೇಣಿಗೆಯನ್ನು ಆಧರಿಸಿರುವ ಅದರ ಕಾರ್ಯಾಚರಣೆ ಆಯವ್ಯಯ ಇಂದು ೨೭ ದಶಲಕ್ಷ ಸ್ವಿಸ್ ಫ್ರಾಂಕುಗಳಷ್ಟಾಗಿದೆ (ಸುಮಾರು ೧.೨ ದಶಲಕ್ಷ ಪೌಂಡುಗಳು). ಲಂಡನ್ನಿನ ರಾಷ್ಟ್ರೀಯ ಶಾಖಾ ಕಾರ್ಯಾಲಯದ ಮುಖ್ಯಸ್ಥ ರಾಗಿರುವ ತನಿಖಾ ಸೂಪರಿಂಟೆಂಡೆಂಟ್ ಬ್ಯಾರಿ ಟೇಲರ್ ಅವರು ಹೀಗೆನ್ನು ತ್ತಾರೆ: "ಕಳೆದ ಹಲವು ವರ್ಷಗಳಲ್ಲಿ 'ಇಂಟರ್‌ಪೋಲ್' ಬಹುದೂರ ಸಾಗಿ ಬಂದಿದೆ. ಅದು ಇಂದು ಸಕ್ರಿಯ ಸಂಘಟನೆಯಾಗಿದ್ದು, ತನಗೆ ಎದುರಾಗ ಬಹುದಾದ ಸವಾಲುಗಳನ್ನು ಎದುರಿಸಲು ಸನ್ನದ್ಧವಾಗಿದೆ."

ಡಾ॥ ಪ್ರಧಾನ್ ಗುರುದತ್ತ



ಬ್ರಹ್ಮನ ಸೃಷ್ಟಿಕಾರ್ಯದಂತೆ ನಮ್ಮ ಕಲ್ಪನೆಯೂ ಸೃಷ್ಟಿ ಕಾರ್ಯ ಮಾಡುತ್ತಿರುತ್ತದೆ, ದುಃಖ-ಗೆಲುವು, ಚೆಲುವು-ನಲಿವು, ನ್ಯಾಯಾ ನ್ಯಾಯ, ಹೀಗೆ ಜಗತ್ತಿನಲ್ಲಿ ಕಲ್ಪನೆ ಸೃಷ್ಟಿಸದೇ ಇರುವ ವಿಷಯವೇ ಇಲ್ಲ. ಆದ್ದರಿಂದ ನಿಮ್ಮ ಕಲ್ಪನಾ ಸೃಷ್ಟಿ ಸತ್ಪರಿಣಾಮದಿಂದ ಕೂಡಿರು ವಂತೆ, ಸದಿಚ್ಛೆಯಿಂದ ಆವರಿಸಿರುವಂತೆ, ಸೃಷ್ಟಿಸುತ್ತ ಹೋಗಿರಿ.

—ಪಾಸ್ಕಲ್

ಗ್ರಾಮ ಪಂಚಾಯಿತ್ತಿಯಲ್ಲಿ ಮಹಿಳೆ—ಸಮಾಜಕ್ಕೆ ಸವಾಲು!

ಸ್ತ್ರೀಯರು ಪುರುಷಸಮಾನರಾಗಿ ಚುನಾವಣೆಗಳಿಗೆ ಕಾಲಿಟ್ಟು, ಗೆದ್ದು, ಆಡಳಿತ ಯಂತ್ರದ ಚುಕ್ಕಾಣಿ ಹಿಡಿದು ಸಮರ್ಥವಾಗಿ ಮುನ್ನಡೆಸುವುದು ಸಾಧ್ಯವೇ? ಸುಲಭವೇ? ಗ್ರಾಮ ಪಂಚಾಯತಿಗಳಿಗೆ ಮಹಿಳೆಯರು ಅಧಿಕಾಧಿಕ ಸಂಖ್ಯೆಯಲ್ಲಿ ಪ್ರವೇಶಿಸುತ್ತಿರುವ ವರ್ತಮಾನ ದಿನಗಳಲ್ಲಿ ಅವರು ಎದುರಿಸುವ ಸಾಂಸಾರಿಕ, ಮಾನಸಿಕ, ಸಾಮಾಜಿಕ ಮುಂತಾದ ಆಡಳಿತೆಗೆ ಸಂಬಂಧವಿರದ ಆದರೆ ಪರಂಪರೆಯ ತಿಳುವಳಿಗಳಾದ ಕ್ಲೇಶಗಳೇನು? ಸ್ವತಃ ಈ ಕ್ಷೇತ್ರದಲ್ಲಿ ಪ್ರೀತ್ಯಾಸಕ್ತಿಗಳಿಂದ ದುಡಿಯುತ್ತಿರುವ ಮೈಸೂರು ಜಿಲ್ಲಾ ಸಮಖ್ಯಾದ ಮಹಿಳಾ ಕಾರ್ಯಕ್ರಮ ಸಂಯೋಜಕರಾಗಿರುವ ಶ್ರೀಮತಿ ವಾಣಿ ಉಮಾಶಂಕರ್ ಅವರು ಕ್ಷೇತ್ರ ಸರ್ವೇಕ್ಷಣೆ ಹಾಗೂ ಕಾರ್ಯದ ವೇಳೆ ಗಳಿಸಿರುವ ಅನುಭವವನ್ನು 'ಪುಸ್ತಕ ಪ್ರಪಂಚ'ದ ಓದುಗರ ಜೊತೆ ಆತ್ಮೀಯವಾಗಿ ಹಂಚಿಕೊಂಡಿದ್ದಾರೆ. ಈ ದಿಶೆಯಲ್ಲಿ ಓದುಗರಿಂದ ಬರುವ ಎಲ್ಲ ಪ್ರತಿಕ್ರಿಯೆಗಳಿಗೂ ಸ್ವಾಗತ ಉಂಟು.

"ಗ್ರಾಮ ಪಂಚಾಯಿತ್ತಿಯಲ್ಲಿ ಮಹಿಳೆಯರಿಗೆ ಮೀಸಲಾತಿ"—ಕೆಲವರಿಗೆ ಸಂಭ್ರಮ, ಖುಷಿ, ಕುತೂಹಲ, ಭರವಸೆ ತಂದರೆ ಮತ್ತೆ ಕೆಲವರಲ್ಲಿ ಅಸಹನೆ, ಅನುಮಾನ, ಆಕ್ರೋಶ, ಕುಹಕ ತಂದಿವೆ. "ಎಲ್ಲಿ ಸಿಗುತ್ತಾರೆ ಅಷ್ಟೊಂದು ಜನ ಹೆಂಗಸರು?" ಅನ್ನುತ್ತಿದ್ದಂಥ ಸಮಾಜದಲ್ಲಿ ಮೀಸಲಾತಿಯ ಪ್ರಕಾರ ಹೆಂಗಸರು ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆಯಾಗಿ ಬಂದಿದ್ದಾರೆ. ಕೆಲವರಿಗೆ, ಇವರು "ಏನು ಮಾಡುತ್ತಾರೆ ನೋಡೋಣ" ಎಂಬ ಕುತೂಹಲ! ಸ್ವಂತ ಯೋಜನೆಗಳನ್ನು ವ್ಯಕ್ತಪಡಿಸುವ, ನಿರ್ವಹಿಸುವ, ಮುಂದೆ ನಿಂತು ನಡೆಸಿಕೊಡುವ ಮತ್ತು ಅಸ್ತಿತ್ವವನ್ನು ಸ್ಥಾಪಿಸುವ ಅವಕಾಶ ಸಿಗದೇ ಬೆಳೆದ ಹೆಂಗಸರು, "ಏನು ತಾನೇ ಮಾಡಬಹುದು?" ಎಂಬ ಅನುಮಾನ ಮತ್ತೆ ಕೆಲವರಿಗೆ. "ಇವರೇನು ನಮ್ಮ ಕೈಗೊಂಬೆಗಳು—ಎಲ್ಲೇ ಇರಲಿ ಸೂತ್ರದಾರರು ನಾವೇ ತಾನೇ? ಎಂದು ಅಧಿಕಾರ ಕಳೆದುಕೊಂಡ ಕಸಿವಿಸಿಯ ನಡುವೆಯೂ ತಮ್ಮ ಹಿರಿಮೆಯನ್ನು ಸಮರ್ಥಿಸಿಕೊಳ್ಳುವವರು ಕೆಲವರು. "ಅವಕಾಶ ಸಿಕ್ಕಿದರೆ ಅವರೇನೂ ಕಡಿಮೆಯಲ್ಲ" ಎಂದು ಮಹಿಳೆಯರ ಶಕ್ತಿ ಬಗ್ಗೆ ನಂಬಿಕೆ ಇರುವವರು ಮತ್ತೆ ಕೆಲವರು. ಒಟ್ಟಿನಲ್ಲಿ ಹೆಂಗಸರಿಗೆ, ಹಾಗೆಯೇ, ಸಮಾಜಕ್ಕೆ ಇದೊಂದು ಸವಾಲು.

ರಾಜಕೀಯದಲ್ಲೂ ಮಹಿಳೆಯರ ಭಾಗವಹಿಸುವಿಕೆ ಈ ಸಾಮಾಜಿಕ ಪರಿಸ್ಥಿತಿಯಲ್ಲಿ ಒಂದು ಆವಶ್ಯಕತೆ ಎಂದು ಗುರುತಿಸಲ್ಪಟ್ಟದ್ದು ಸಂತೋಷದ ಸಂಗತಿಯೇ. ಅಲ್ಲಿ, ಇಲ್ಲಿ ಬಿಡಿ ವ್ಯಕ್ತಿಗಳಾಗಿ ಒಂದಿಷ್ಟು ಜನ ಮಹಿಳೆಯರು ರಾಜಕೀಯದಲ್ಲಿ ಪ್ರವೇಶಿಸಿದ ಉದಾಹರಣೆಗಳು ಇವೆ ಬದಲಾವಣೆಯ ನಿಟ್ಟಿನಲ್ಲಿ ಇವರದೂ ಪಾತ್ರವಿದೆ. ಆದರೆ ನೂರಾರು ಜನ ಒಂದೇ ಬಾರಿಗೆ ಪ್ರವೇಶಿಸುವುದರಲ್ಲಿ ಹೆಚ್ಚಿನ ಗುಣಾತ್ಮಕ ತೀವ್ರತೆ ಮತ್ತು ವ್ಯಾಪಕತೆ ಉಂಟು. "ಏನು ಮಹಾ! ಇದು ಹೆಂಗಸರಿಗೆ ಹಾಕಿದ ಒಂದು ಭಿಕ್ಷೆ" ಅಂತ ಕೆಲವರು ಆಡಿಕೊಳ್ಳುತ್ತಾರೆ. ಅದರಲ್ಲಿ ಕೂಡ ಅಸಹನೆಯ ಛಾಯೆ ಇದೆ. ಏಕೆಂದರೆ ಇದು ಬರೇ ಭಿಕ್ಷೆಯಾಗಿದ್ದರೆ, ಸಮಾಜದಲ್ಲಿ ಈಗ ಆದ ಕೋಲಾಹಲಗಳು ಆಗುತ್ತಿರಲಿಲ್ಲ. ಈ ರೂಪದಲ್ಲಾದರೂ ರಾಜಕೀಯಕ್ಕೆ ಪ್ರವೇಶಿಸುವ ನೂರಾರು ಜನ ಗಂಡಸರಿಗೆ ಮೀಸಲಾತಿಯಿಂದಾಗಿ ಅವಕಾಶ ತಪ್ಪಿದೆ. ಕೆಲವು ಕಡೆಯಂತೂ ಗಂಡಸರು ಇದರ ವಿರುದ್ಧ ನ್ಯಾಯಾಲಯಕ್ಕೆ ಹೋದ ಉದಾಹರಣೆಗಳಿವೆ. ಇದು ಅತ್ಯಂತ ಸಣ್ಣ ಘಟನೆಯಾದರೂ ನೂರಾರು ಮಹಿಳಾವಾದಿಗಳ ನೇರ ಅಥವಾ ಪರೋಕ್ಷ ಪ್ರಯತ್ನಗಳ ಫಲವಂತೂ ನಿಜ. ಬದಲಾವಣೆಯ ಹಾದಿಯಲ್ಲಿಯ ಮೊದಲ ಬೀಜ—ಭಿಕ್ಷೆ ಅಂದುಕೊಂಡೇ ಹಾಕಿದ್ದರೂ, ಹೆಂಗಸರು ಬುದ್ಧಿವಂತಿಕೆಯಿಂದ ಮತ್ತು ಜವಾಬ್ದಾರಿಯಿಂದ ಇದನ್ನು ಸಾಮಾಜಿಕ ಬದಲಾವಣೆಗಾಗಿ ಉಪಯೋಗಿಸಿದರೆ ಇದೊಂದು ಅದ್ಭುತ ಅವಕಾಶ!

ರಾಷ್ಟ್ರೀಯ ಯಥಾದೃಷ್ಟಿಯೋಜನೆ (National Perspectives Plan) ೧೯೮೮—ಮಹಿಳೆಯರಿಗೆ ಪಂಚಾಯ್ತಿ ರಾಜ್ ವ್ಯವಸ್ಥೆಯಲ್ಲಿ ಪಾಲು ಸಿಗುವುದರ ಬಗ್ಗೆ ಚರ್ಚಿಸಿತ್ತು. ಪಂಚಾಯ್ತಿಯ ಎಲ್ಲ ಸ್ತರಗಳಲ್ಲಿ ಮಹಿಳೆಯರಿಗೆ ಶೇಕಡಾ ೩೦ ಮೀಸಲಾತಿಯ ಬಗ್ಗೆ ಬಲವಾದ ಬೇಡಿಕೆಯನ್ನು ಹೇರಿತ್ತು. ಇಂಥ ಅನೇಕ ಚರ್ಚೆಗಳ, ವಾದಗಳ, ಪ್ರಯತ್ನಗಳ ಮುನ್ನೆಡೆಯಲ್ಲಿ ಸಂವಿಧಾನದ ೭೩ನೇ ತಿದ್ದುಪಡಿ ಸಾಧ್ಯವಾಯಿತು. ಈ ವರ್ಷ ಕರ್ನಾಟಕದಲ್ಲಿ ಮಹಿಳೆಯರಿಗೆ ಶೇಕಡಾ ೩೩.೩ ಮೀಸಲಾತಿಯನ್ನು ಕಾಣುತ್ತಿದ್ದೇವೆ. ಮೀಸಲಾತಿ ಇಲ್ಲವಾಗಿದ್ದರೆ ಈ ಹಂತದಲ್ಲಿ ಮಹಿಳೆಯರಿಗೆ ಇಷ್ಟು ಸ್ಥಾನಗಳು ಸಿಗುವ ಸಾಧ್ಯತೆಯೇ ಇರಲಿಲ್ಲ.

ಮೀಸಲಾತಿಯಲ್ಲಿ ಆಯ್ಕೆಯಾಗಿ ಪಂಚಾಯ್ತಿರಚನೆಯಲ್ಲಿ ಸೇರಿಕೊಂಡ ಮಾತ್ರಕ್ಕೆ ಶಕ್ತಿ ಬಂತು ಅಥವಾ ಬರುತ್ತದೆ ಎಂಬ ಭ್ರಮೆಯಂತೂ ನಮ್ಮಲ್ಲಿಲ್ಲ. ಯೋಜನೆ, ವರ್ತನೆ, ಕ್ರಿಯೆ—ಎಲ್ಲದರಲ್ಲೂ ಪುರುಷರ ಅಧೀನ

ದಲ್ಲೇ ಬೆಳೆದು ಬಂದ ಈ ವರ್ಗ ರಾಜಕೀಯ ಅಸ್ತಿತ್ವ ಸಿಕ್ಕಿದೊಡನೇ ಹಠಾತ್ತನೇ ಬದಲಾವಣೆಯಾಗುವುದು ಅಸಾಧ್ಯ. ಈ ಮಹಿಳೆಯರೆದುರು ನೂರಾರು ಸಮಸ್ಯೆಗಳಿವೆ, ಎಡರುತೊಡರುಗಳಿವೆ. ಇವನ್ನೆಲ್ಲ ಸವಾಲು ಎಂದು ಸ್ವೀಕರಿಸುತ್ತ, ಸೂಕ್ಷ್ಮವಾಗಿ ಅವಲೋಕಿಸುತ್ತ, ಬೆಳವಣಿಗೆಯ ದಾರಿಯನ್ನು ಗುರುತಿಸಿಕೊಳ್ಳಬೇಕಾಗಿದೆ.

ಸೂತ್ರದ ಗೊಂಬೆಗಳಾಗಬಹುದೇ?

ಮೈಸೂರು ಜಿಲ್ಲೆಯಲ್ಲಿ ನಡೆದ ತಾಲ್ಲೂಕು ಮಟ್ಟದ ಒಂದೆರಡು ಸಮಾವೇಶಗಳಲ್ಲಿ ಭಾಗವಹಿಸಿದ್ದೆ. ಸಂಖ್ಯೆಯಲ್ಲಿ ಸುಮಾರಾಗಿ ಗಂಡಸರಷ್ಟೇ ಹೆಂಗಸರೂ ಇರುವಂಥ ಅಪರೂಪದ ಒಂದು ಸಭೆಯನ್ನು ಕಲ್ಪಿಸಿಕೊಂಡು ಹೋಗಿದ್ದೆ. ಹೊಸ ಪಾತ್ರಗಳೊಂದಿಗೆ ಹೊರಬಂದಂಥ ಹೆಂಗಸರ ಗುಂಪನ್ನು ನೋಡುವ ತವಕವೂ ಇತ್ತು. ಹೆಂಗಸರೇನೂ ಕಡಿಮೆ ಸಂಖ್ಯೆಯಲ್ಲಿರಲಿಲ್ಲವಾದರೂ ಗಂಡಸರು, ಹೆಂಗಸರ ಮೂರುಪಟ್ಟು ಹೆಚ್ಚು ಸಂಖ್ಯೆಯಲ್ಲಿದ್ದರು. ಕೆಲವರೊಂದಿಗೆ ಮಾತಾಡುತ್ತಲೇ ಉತ್ತರ ಸಿಕ್ಕಿತು. ಬಂದಿದ್ದ ಹೆಚ್ಚಿನ ಮಹಿಳಾ ಸದಸ್ಯರೊಂದಿಗೆ ಅವರ ಗಂಡ, ಅಣ್ಣ, ತಮ್ಮ ಅಥವಾ ಅಳಿಯ ಯಾರೂ ಅಲ್ಲವಾದರೆ ಒಬ್ಬ ಪುಟ್ಟ ಮೊಮ್ಮಗ ಇದ್ದೇ ಇದ್ದರು! ಆದರೆ ಗಂಡಸರ ಜೊತೆಯಲ್ಲಿ ಅವರ ಹೆಂಡತಿ, ತಂಗಿ ಬಂದಿರಲಿಲ್ಲವಲ್ಲ!

ಇದೇನೂ ದೊಡ್ಡ ವಿಷಯವಲ್ಲ ಎಂದಿನಿಸಬಹುದು. ಆದರೆ ಇದರ ಹಿಂದೆ ಒಂದು ದೊಡ್ಡ ಸತ್ಯವಿದೆ. ಹೆಂಗಸರಿನ್ನೂ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಸ್ವತಂತ್ರವಾಗಿ ಹೋಗುವುದಕ್ಕೇ ತಯಾರಾಗಿಲ್ಲವೆಂದರೆ, ಅವರು ಸ್ವಂತ ಯೋಚನೆಗಳನ್ನು ಪ್ರತಿಪಾದಿಸುವ ಮಟ್ಟದಲ್ಲಿದ್ದಾರೋ ಅಥವಾ ಅವರನ್ನು ಆ ಸ್ಥಾನಕ್ಕೆ ನಿಲ್ಲಿಸಿದವರ ಯೋಚನೆಗಳನ್ನು ಪ್ರತಿಪಾದಿಸುವ ಯಂತ್ರಗಳಾಗುತ್ತಾರೋ ಎಂಬ ಅನುಮಾನವೂ ಬರುತ್ತದೆ.

ಎಷ್ಟೋ ಜನ ಮಹಿಳೆಯರನ್ನು ಮಾತಾಡಿಸಿದಾಗ ಹಿಂದೆ ಮುಂದೆ ನೋಡದೇ, "ಅವರು ನಿಲ್ಲಿಸಿದವರು. ನಮಗೇನು ಗೊತ್ತು, ಅವರು ಹೇಳಿದ ಹಾಗೆ ಮಾಡುತ್ತೇವೆ" ಎಂದದ್ದಾರೆ. ಆಯ್ಕೆಯಾಗಿರುವ ಹೆಚ್ಚಿನ ಹೆಂಗಸರೂ ಕೂಡ, ರಾಜಕೀಯದಲ್ಲಿ ಪಳಗಿರುವ ಅವರ ಕುಟುಂಬದ ಯಾರದೋ ಬಲವಂತದಿಂದ ಮುಂದೆ ಬಂದಿದ್ದಾರೆಯೇ ಹೊರತು, ಸ್ವಂತ ಆಸಕ್ತಿಯಿಂದಾಗಲೀ, ಹೆಂಗಸರ ಗುಂಪೊಂದರ ಬೆಂಬಲದಿಂದಾಗಲೀ ಮುಂದೆ ಬಂದ ಉದಾಹರಣೆಗಳು

ಬಲು ಕಡಿಮೆ. ಸರಿಯಾದ ಬೆಂಬಲವಿಲ್ಲದ ಈ ಒಂಟಿ ಹೆಂಗಸರು (ನೂರಾರು ಜನರಿದ್ದರೂ ಬಿಡಿಬಿಡಿಯಾಗಿಯೇ ಇದ್ದಾರೆ.) ಸೂತ್ರದ ಗೊಂಬೆಗಳಾಗುವ ಎಲ್ಲ ಆತಂಕವಿದೆ.

ಹೊಸ ಪಾತ್ರ–ಹೊಸ ವ್ಯವಹಾರಗಳು :

ಯಾವತ್ತೂ ಯಾವುದೇ ಅಧಿಕಾರಿಗಳೊಂದಿಗೆ ನೇರ ವ್ಯವಹಾರವಿಲ್ಲದೇ ಕಛೇರಿಗಳಿಗೆ ಹೋದ ಅನುಭವವಿಲ್ಲದೇ ಇರುವುದೂ ಮಹಿಳೆಯರಿಗೊಂದು ದೊಡ್ಡ ಸಮಸ್ಯೆಯೇ ಸರಿ. ಸದಸ್ಯ ಸ್ಥಾನಕ್ಕೆ ತಮ್ಮ ನೋಂದಾವಣೆಯ ಪ್ರಕ್ರಿಯೆಯಲ್ಲಿ, ಸಹಿ ಹಾಕುವುದರ ಹೊರತಾಗಿ, ಬೇರಾವ ರೀತಿಯಲ್ಲೂ ಭಾಗವಹಿಸಿರದ ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇಂಥವರು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುವುದೇ ಮೊದಲನೆಯ ಪ್ರಯಾಸ. ಬಾವಿ ಕಟ್ಟೆಯ ಹರಟೆ ಬಿಟ್ಟರೆ ಸಭೆಯ ಬಗ್ಗೆ ತಿಳಿದಿರದವರು ಸಭೆಗೆ ಹೋಗಬೇಕು. ಅಲ್ಲಿ, ಮೂಲೆಯಲ್ಲಿ ಇವರಿಗೆ ಆಸನ; ಗ್ರಾಮಪಂಚಾಯ್ತಿಯ ರಚನೆ, ಹಕ್ಕು, ಕರ್ತವ್ಯ, ನಡವಳಿಕೆಗೆ ಸಹಿ ಹಾಕುವುದು, ಲೆಕ್ಕಪತ್ರ ಪರಿಶೋಧನೆ, ಸರಕಾರೀ ಕಾರ್ಯಕ್ರಮಗಳು, ಅವನ್ನು ಪಡಕೊಳ್ಳುವ ರೀತಿ–ನೀತಿ....ಎಲ್ಲವೂ ಹೊಸತೇ! ಇಂಥ ಮಾಹಿತಿಗಳಿಲ್ಲದ ಕಾರಣ, ಪಂಚಾಯ್ತಿಗೆ ನೇಮಕವಾಗುವ ಅಧಿಕಾರಿಗಳೋ, ಇಲ್ಲವೇ ಅಲ್ಪಸ್ವಲ್ಪ ತಿಳಿದ ಇತರ ಪುರುಷ ಸದಸ್ಯರೋ....ಇವರ ಪಾಲಿಗೆ ಸರ್ವಾಧಿಕಾರಿಗಳಾಗುವ ಅಪಾಯವಿದೆ. ಭ್ರಷ್ಟ ವ್ಯವಸ್ಥೆಯದ್ದೇ ಒಂದು ಅಂಗವಾಗಿರುವ ಇಲ್ಲೂ, ಅಧಿಕಾರಿಗಳ—ಸಹಚರರ ಭ್ರಷ್ಟ ಚಟುವಟಿಕೆಗಳಲ್ಲೂ ಶಾಮೀಲಾಗುವ ಎಲ್ಲ ಸಾಧ್ಯತೆಗಳೂ ಇವೆ. ಸಣ್ಣ ಪಾತ್ರವಾದರೂ, ವ್ಯವಹರಿಸಬೇಕಾದ ವ್ಯಕ್ತಿಗಳು ಹತ್ತಾರು....! ಕಲಿಯುವ ಅವಕಾಶಕ್ಕಿಂತ ಎಡಹುವ ಸೋಲುವ ಅವಕಾಶಗಳೇ ಹೆಚ್ಚು. ಆದರೆ "ನಡೆವರೆಡಹದೆ ಕುಳಿತರೆಡಹುವರೇ?"

ಕುಟುಂಬ–ಸಮಾಜದ–ಧೋರಣೆ :

ಎಲ್ಲಕ್ಕಿಂತಲೂ ಮುಖ್ಯವಾಗಿ ಕೌಟುಂಬಿಕ ಸಂಬಂಧಗಳು, ಸಾಮಾಜಿಕ ನಿರ್ಧಾರಗಳಲ್ಲಿ ಅಡ್ಡಗಾಲು ಹಾಕುವ ಪ್ರಸಂಗ ಹೆಚ್ಚು. ಪಂಚಾಯ್ತಿಯಲ್ಲಿ ಆಕೆ ಏನು, ಏಕೆ, ಎಷ್ಟು ಹೇಳಬೇಕೆಂಬುದು ಮನೆಯಲ್ಲಿ ಚರ್ಚೆಯಾಗುತ್ತದೆ. "ರಾಜಕೀಯ ಅವಳಿಗೇನು ಗೊತ್ತಿರುತ್ತದೆ. ಹೇಳಿದಷ್ಟು ಮಾಡಿದರೆ ಒಳ್ಳೆಯದು" ಎಂಬ ನಿರ್ಣಾಯಕ ನಿರ್ಬಂಧ ಬೇರೆ. ಅವಳೇನಾದರೂ ನಿಷ್ಪಕ್ಷಪಾತ ನಿರ್ಧಾರ

ತೆಗೆದುಕೊಳ್ಳಬೇಕೆಂದರೆ ಕುಟುಂಬದ ಸದಸ್ಯರು ಹಣ, ಹೆಂಡದ ಆಮಿಷಕ್ಕೆ ಬಲಿಯಾಗಿ ಅವಳ ಮೇಲೆ ಒತ್ತಡ ಹೇರುವ ಸಂಭವವಿದೆ. ಅಷ್ಟೇ ಅಲ್ಲ, ಸದಸ್ಯೆಯಾದ ಮಾತ್ರಕ್ಕೆ ಮನೆಯ ದೈನಂದಿನ ಕೆಲಸಗಳು, ಜವಾಬ್ದಾರಿಗಳೇನೂ ತನ್ನಿಂತಾನೇ ಹಂಚಿಹೋಗುವುದಿಲ್ಲವಷ್ಟೇ. ಕಸಗುಡಿಸಿ, ಮುಸುರೆ ತಿಕ್ಕಿಯೇ ಅವಳು ಸಭೆಗೆ ಹೋಗಬೇಕು. ಅಲ್ಲೂ ಕಾಲ ಪರಿಪಾಲನೆ, ಇಲ್ಲೂ ಕಾಲ ಪರಿಪಾಲನೆ—ಹೀಗೆ ಎರಡು ಪಾತ್ರಗಳನ್ನು ನಿಭಾಯಿಸಬೇಕಾಗ ನೈತಿಕ ಹೊಣೆ! ಹೆಂಗಸರು ಪುರುಷರ ರಾಜ್ಯದ ಹೊಸ ಪಾತ್ರಗಳಿಗೆ ತೆರೆದುಕೊಳ್ಳುತ್ತಿರುವಂತೆಯೇ ಪುರುಷರು ಹೆಂಗಸರಿಗೇ ಮೀಸಲಾದ ಪಾತ್ರಕ್ಕೆ ಸ್ವಲ್ಪ ತಮ್ಮನ್ನು ತಾವು ಒಗ್ಗಿಸಿಕೊಳ್ಳುತ್ತಿದ್ದರೆ—ಸಾಮರಸ್ಯ ಸಾಧ್ಯವಿರುತ್ತಿತ್ತು! ಏನು ಮಾಡುವುದು, ಊಟವಿಲ್ಲದಿದ್ದರೆ, ಬದುಕುವುದಕ್ಕೇ ಸಾಧ್ಯವಿಲ್ಲದೇ ಹೋದರೂ ಅಡುಗೆ ಮಾಡುವ ಕೆಲಸ ಸ್ವಲ್ಪ ಕಡಿಮೆ ಮಟ್ಟದ ಕೆಲಸವೆಂದೇ ನಂಬಿಕೊಂಡ ಸಮಾಜವಲ್ಲವೇ ನಮ್ಮದು!

ಇನ್ನು ಸಮಾಜ, ಮನೆಯಿಂದ ಹೊರಬರುವ ಹೆಂಗಸರನ್ನು ಕಾದುಕೊಂಡೇ ಇರುತ್ತದೆ. ಹೆಂಗಸರನ್ನು ಸೋಲಿಸುವ ಮಹಾಬಾಣ ಅವಳ ಚಾರಿತ್ರ್ಯವಧೆ. ಅವಿವಾಹಿತ ಸದಸ್ಯೆಯರಿಗಂತೂ ಇದೇ ಜೀವನದುದ್ದಕ್ಕೂ ಸಾಕು. ಇನ್ನು ಅಪಹಾಸ್ಯಕ್ಕಂತೂ ಕೊರತೆಯೇ ಇಲ್ಲ. "ಏನು ಚೇರ್ಮನ್ನಮ್ಮನವರು ಕಸ ಗುಡಿಸ್ತಾ ಇದ್ದೀರಿ?"—ಅದಂತೂ ತಪ್ಪಿದಲ್ಲವಲ್ಲಾ ಅನ್ನುವ ಹಾಗೆ! "ಚೇರ್ಮನ್ನು ಪಂಚಾಯಿತ್ತಿಗೆ—ಮನೆಗಲ್ಲವಲ್ಲ" ಎಂದು ಹಾರಿಕೆ ಉತ್ತರ ಕೊಟ್ಟು ನಿಭಾಯಿಸುತ್ತಾರೆ. ಆದರೂ ಇದರಲ್ಲಿ ನೆಮ್ಮದಿಯಿಲ್ಲ. ಸದಸ್ಯೆಯರ ಗಂಡಂದಿರಿಗೆ 'ಬಳೆಹಾಕಿ' ಎನ್ನುವುದು "ಹೆಂಗಸರ ತಲೆಯಲ್ಲೇನು—ಗೊಬ್ಬರ ತಾನೇ ಇರುವುದು, ಅಷ್ಟನ್ನೇ ಸುರೀತಾರೆ ಸಮಾಜಕ್ಕೆ" ಅನ್ನುವುದು ನಡೆಯುತ್ತಲೇ ಇರುತ್ತದೆ. ಮನೆಯಲ್ಲೇನಾದರೂ ಯಾರಿಗಾದರೂ ಆರೋಗ್ಯ ತಪ್ಪಿದರೂ, ವ್ಯವಹಾರದಲ್ಲಿ ಹೆಚ್ಚು-ಕಡಿಮೆಯಾದರೂ "ಹೆಂಗಸರು ಹೊಸ್ತಿಲು ದಾಟಿದರೆ—ಇನ್ನೇನಾದೀತು!" ಎಂಬ ಕುಹಕ ಬೇರೆ. ಉಪದೇಶ-ಉಪಟಳಗಳಿಗಂತೂ ಲೆಕ್ಕವೇ ಇಲ್ಲ. ಇವನ್ನೆಲ್ಲ ಎದುರಿಸಲು—ಮಹಿಳೆಯರು ಮಾನಸಿಕವಾಗಿ ತಯಾರಾಗಬೇಕಾಗುತ್ತದೆ.

ಸರಕಾರೀ ಕಾರ್ಯಕ್ರಮಗಳ-ವಾಹಕರಾಗಿ:

ಇದೊಂದು ವಿಪರ್ಯಾಸ! ಗಂಡಸರಿಗೆ-ಹೆಂಗಸರಿಗೆ ಎಲ್ಲರಿಗೂ ಅನ್ವಯಿಸುತ್ತದೆ. ಈ ಗ್ರಾಮಪಂಚಾಯಿತ್ತಿ ಸದಸ್ಯರು ತಮ್ಮ ಪಾತ್ರವನ್ನು—ಸರಕಾರೀ

ಕಾರ್ಯಕ್ರಮಗಳನ್ನು (ಬೀದಿ ದೀಪ, ಮನೆ, ಕೊಳವೆಬಾವಿ ಇತ್ಯಾದಿ)—ತಮ್ಮ ತಮ್ಮ ಗ್ರಾಮಕ್ಕೆ ತಲಪಿಸುವ ವಾಹಕರಾಗಿ ನೋಡಿಕೊಳ್ಳುತ್ತಿದ್ದಾರೆ ಎಂಬ ಭಾವನೆ ನನ್ನದು. ದಿನ ಬೆಳಗಾದರೆ ಬಿ.ಡಿ.ಓ–ತಹಶೀಲ್ದಾರರ ಕದ ತಟ್ಟುವುದೇ ಇವರ ಕೆಲಸವೇ! ಇವರು ಬರಿಯ ಸರಕಾರೀ ಪೇದೆಗಳಾಗಿ ಬಿಟ್ಟರೆ—ಜನ ಸಾಮಾನ್ಯರ ಅನಿಸಿಕೆ, ಯೋಚನೆ, ಯೋಜನೆಗಳನ್ನು ಸಂಬಂಧಿಸಿದವರಿಗೆ ತಲುಪಿಸುವರಾರು? ಈ ಪಕ್ಕಾ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲಿಂದ ಕೆಳಕ್ಕೆ ಬೇಕಾದಷ್ಟು ಮೆಟ್ಟಲುಗಳಿವೆ–ಸಾಲದ್ದಕ್ಕೆ–ಪಂಚಾಯ್ತಿ ವ್ಯವಸ್ಥೆಯೊಂದು ಹೊಸ ಮೆಟ್ಟಿಲಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ ಕೆಳಗಿನಿಂದ ಮೇಲಕ್ಕೆ ಹೋಗಲು ಮೆಟ್ಟಿಲುಗಳೇ ಇಲ್ಲವಲ್ಲ! ಇಲ್ಲಿಯತನಕ ಈ ಕಾರ್ಯಕ್ರಮಗಳನ್ನು ಕೆಳಗೆ ಇಳಿಸುವ (ಅದೂ ಜನರಿಗೆ ಬೇಕಾದ ರೀತಿಯಲ್ಲೇ ಅಲ್ಲ—ತೋಟವೇ ಇಲ್ಲದವರಿಗೆ ಔಷಧಿಬಿಡುವ ಯಂತ್ರ ಕೊಡುವಂತೆ) ಕೆಲಸ ಗಂಡಸರೇ ಹೆಚ್ಚಿನ ಸಂಖ್ಯೆಯಲ್ಲಿ ಮಾಡುತ್ತಿದ್ದರು. ಈಗ ಹೆಂಗಸರೂ ಮಾಡಬೇಕಾಗಿದೆ—ಅನ್ನಿಸುತ್ತದೆ. ಇದೊಂದು ತಮಾಷೆಯೇ ಸರಿ. ಹೆಂಗಸರದೊಂದು ಸಾಮೂಹಿಕ ಶಕ್ತಿ ಬೆಳೆಯುವ ಹಂತದಲ್ಲಿ ಅವರನ್ನೂ ಇದೇ ಸಾಗಾಟಕ್ಕೆ ಉಪಯೋಗಿಸುವ ವ್ಯವಸ್ಥೆಯ ಜಾಣ್ಮೆಯನ್ನು ಮೆಚ್ಚಲೇಬೇಕು.

ಇನ್ನು ಮುಂದಕ್ಕೆ ಯೋಚಿಸುವುದಾದರೆ, ಗ್ರಾಮಪಂಚಾಯ್ತಿ ವ್ಯವಸ್ಥೆ ಬರೇ ಕೊಳವೆಬಾವಿ, ಭಾಗ್ಯಜ್ಯೋತಿಗಾಗಿ ಕೆಲಸ ಮಾಡುವುದಾದರೆ ಅದನ್ನು ಗಂಡಸರೇ ಮಾಡಿದರೆ ಸಾಕಿತ್ತು. ಇಷ್ಟನ್ನು ತಮ್ಮ ತಮ್ಮ ಊರಿಗಾಗಿ ಅವರೇನೂ ಮಾಡದೇ ಇರುತ್ತಿರಲಿಲ್ಲ. ಹೆಂಗಸರ ಸಹಜ ಶಕ್ತಿ, ಯೋಚನಾಕ್ರಮಗಳೂ ಇವಕ್ಕೆ ಸೇರಿಕೊಳ್ಳಬೇಕಾಗಿರಲಿಲ್ಲ. ಹೆಂಗಸರು ಇಲ್ಲಿರುವುದಕ್ಕೆ ಅವರದ್ದೇ ಆದ ಒಂದು ಔಚಿತ್ಯವಿದೆ. **ಸಾಮೂಹಿಕವಾಗಿ ಮಹಿಳೆಯರು, ತಾವೇ ತಮಗಾಗಿ ಯೋಜಿಸಿದ ಕಾನೂನುಗಳಾಗಲೀ ಕಾರ್ಯಕ್ರಮಗಳಾಗಲೀ, ಯೋಜನೆಗಳಾಗಲೀ ಎಲ್ಲೂ ಇಲ್ಲ. ಯಾವುದೇ ಉದ್ದೇಶದಿಂದಿರಲಿ, ಈಗ ಗ್ರಾಮಪಂಚಾಯ್ತಿ ಮೂಲಕ ಹೆಂಗಸರಿಗೊಂದು ಅವಕಾಶ ಸಿಕ್ಕಿದೆ. ಇಲ್ಲಿ ಅವರು ಹೆಂಗಸರಾಗಿ ಯೋಚಿಸಬೇಕಾಗಿದೆ. ಹೆಂಗಸರಾಗಿ ವರ್ತಿಸಬೇಕಾಗಿದೆ, ಹೆಂಗಸರಿಗಾಗಿ ಹೊಸ ಯೋಜನೆಗಳನ್ನು ಹಾಕಬೇಕಾಗಿದೆ.** ಸಮಾಜದಲ್ಲಿ ಮಹಿಳೆಯರ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಒಂದು ರಾಜಕೀಯ ವೇದಿಕೆಯಾಗಿ ಇದು ಬೆಳೆಯಬೇಕಾಗಿದೆ. ಹಾಗಾದರೆ ಮಾತ್ರ ಹೆಂಗಸರ ರಾಜಕೀಯ ಪ್ರವೇಶ ಸಾರ್ಥಕವಾಗುತ್ತದೆ.

ಪುರುಷಮನದ ಮಹಿಳೆಯರು :

ರಾಜಕೀಯ ಎಂದ ಕ್ಷಣ ಒಂದು ರೀತಿಯ ಅಸಹನೀಯ, ವಾತಾವರಣ, ನೆನಪು ಬರುವಷ್ಟು ಕೊಳೆತುಹೋಗಿದೆ ನಮ್ಮ ವ್ಯವಸ್ಥೆ. 'ರಾಜಕೀಯ' ಅನ್ನುವ ಶಬ್ದವನ್ನೇ ಕುತಂತ್ರ ಎನ್ನುವುದಕ್ಕೆ ಸರಿಸಮಾನವಾಗಿ ಉಪಯೋಗಿಸುವುದೂ ಸರ್ವೇಸಾಮಾನ್ಯವಾಗಿದೆ. ಪುರುಷಪ್ರಧಾನ ಮೌಲ್ಯಗಳು ಬೇರೂರಿರುವ ನಮ್ಮ ಸಮಾಜದಲ್ಲಿ ಮಹಿಳೆಯರು ಇಂಥದೇ ಮೌಲ್ಯಗಳನ್ನು ನೋಡುತ್ತ, ಕಲಿಯುತ್ತ, ಅನುಭವಿಸುತ್ತ, ಒಪ್ಪಿಕೊಳ್ಳುತ್ತ, ಅಭಿವ್ಯಕ್ತಿಸುತ್ತ ಬಂದಿದ್ದಾರೆ. ಈಗಲೂ ಅಷ್ಟೇ. ಈ ರಾಜಕೀಯ ಸನ್ನಿವೇಶದಲ್ಲೂ ಅವರಿಗೆ ಮಾರ್ಗದರ್ಶನ ಹಿಂದಿನ ಮೌಲ್ಯಗಳನ್ನೇ ಅನುಸರಿಸುವುದಾಗಿದೆ. ರಾಜಕೀಯ ಸನ್ನಿವೇಶವನ್ನು ಕಿಂಚಿತ್ತಾದರೂ ಆರೋಗ್ಯಕರವಾಗಿ ಬದಲಾಯಿಸಬೇಕೆಂದರೆ, ಹೆಂಗಸರು ಪುರುಷರನ್ನು ಅನುಕರಿಸುವುದು ಬಿಟ್ಟು, ಸ್ವಂತ ಯೋಜನೆಗಳನ್ನು ಗುರುತಿಸಿ ಕೊಂಡು ವ್ಯವಹರಿಸಬೇಕಾಗುತ್ತದೆ. ನಮ್ಮಲ್ಲೊಬ್ಬ ಸದಸ್ಯೆ, ಮಹಿಳೆಯರ ಬೆಂಬಲದಿಂದಲೇ ಗೆದ್ದು ಬಂದಾದ ಬಳಿಕ ಸಭೆಗೆ ಕರೆದಾಗ, "ಕರೆಯುವ ರೀತಿ ಯಲ್ಲಿ ಕರೆದಿಲ್ಲ"ವೆಂದು ಅದಕ್ಕೆ ಸಭೆಗೆ ಬರಲಿಲ್ಲವಂತೆ. ಇದು ಈಗಾಗಲೇ ಪ್ರಚಲಿತ ವಾಗಿರುವ ಮೌಲ್ಯವಲ್ಲದೇ ಬೇರಿನ್ನೇನು? (ಎಲ್ಲ ಪುರುಷರೂ ಹೀಗೇ ಇರುತ್ತಾರೆ ಎಂದಲ್ಲ. ರಾಜಕೀಯ ಅಂದರೆ ಸಾಮಾನ್ಯವಾಗಿ ಇಂಥ ನಿದರ್ಶನಗಳೇ ಹೆಚ್ಚಿರುವುದರಿಂದ ಹೀಗೆ ಹೇಳಬೇಕಾಗಿದೆ.) ಇವರು ಪುರುಷಮನದ ಮಹಿಳೆಯ ರಾಗುತ್ತಾರೆ ಅಷ್ಟೇ. ಈ ಸಮಾಜದಲ್ಲಿ ಹೆಚ್ಚಾಗಿ ದಬ್ಬಾಳಿಕೆ ನಡೆಸುವ ಇಲ್ಲ ದಬ್ಬಾಳಿಕೆಯನ್ನು ಒಪ್ಪಿಕೊಳ್ಳುವ ರೀತಿಗಳೇ ಹೆಚ್ಚು ಪ್ರಚಲಿತವಾಗಿವೆ. ಇದರ ಮಧ್ಯೆ ಒಂದು ಸಾಮರಸ್ಯವನ್ನು ಗುರುತಿಸಿಕೊಳ್ಳಬೇಕಾಗಿದೆ. ಮನಸ್ಸು ಮಾಡಿದರೆ ಇದು ಮಹಿಳೆಯರಿಂದ ಸಾಧ್ಯ. ಇತರರ ಯೋಚನೆಗಳ ಕಡಿವಾಣ ದಲ್ಲೇ ಬೆಳೆದವರಿಗೆ ಅದರ ನೋವು ಗೊತ್ತು. ಆದುದರಿಂದ ಅವರು ಮತ್ತೆ ಇತರರ ಮೇಲೆ ಕಡಿವಾಣ ಹಾಕುವ ವರ್ತನೆಗೆ ತೊಡಗದೇ, ಎರಡೂ ಅಲ್ಲದ ಒಂದು ಸಮಾನ ಬಾಂಧವ್ಯವನ್ನು ಸೃಷ್ಟಿಸುವತ್ತ ತೊಡಗಬೇಕಾಗಿದೆ. ರಾಜಕೀಯ ದಲ್ಲೂ ಇಂಥ ಒಂದು ಬದಲಾವಣೆಯ ಅನಿವಾರ್ಯತೆ ಇದೆ. ಅಧಿಕಾರದ ಅವಕಾಶ ಸಿಕ್ಕಿದ ಮಹಿಳೆಯರ ಈ ಗುಂಪು, ತಮ್ಮದೇ ಹೊಸ ಯೋಜನೆಗಳನ್ನು, ಪುರುಷ ರಿಗೂ–ಮಹಿಳೆಯರಿಗೂ ಸಮಾನವಾಗಿ ಬೆಳೆಯಬಲ್ಲಂಥ ಯೋಜನೆಗಳನ್ನು ಅಭಿವ್ಯಕ್ತಿಸಲಿ ಎಂಬುದೇ ನಮ್ಮ ಕಾಳಜಿ.

ಪಕ್ಷಗಳು-ವ್ಯಕ್ತಿಗಳನ್ನು ಕಬಳಿಸುವುದು:

ಇದು ರಾಜಕೀಯ ಸನ್ನಿವೇಶದಲ್ಲಿ ಮಹಿಳೆಯರು ಎದುರಿಸಬೇಕಾಗಿ ಬರುವ ಇನ್ನೊಂದು ಸಮಸ್ಯೆ. ತಮ್ಮ ತಮ್ಮ ಪಕ್ಷಗಳನ್ನು ಬಲಪಡಿಸುವ ಆತುರದಲ್ಲಿ, ಮಹಿಳೆಯರನ್ನು ತಮ್ಮ ಪಕ್ಷದೊಳಗೆ ಸೇರಿಸಿಕೊಳ್ಳುವ ಎಲ್ಲ ಪ್ರಯತ್ನಗಳೂ ನಡೆಯುತ್ತದೆ. ಇದೊಂದು ಸಂಕೀರ್ಣ ಸಮಸ್ಯೆ. ತಮ್ಮತನವನ್ನು ಕಳೆದು ಕೊಳ್ಳದೇ ಇಂಥ ಸಂದರ್ಭಗಳನ್ನು ಬುದ್ಧಿವಂತಿಕೆಯಿಂದ ಎಚ್ಚರಿಕೆಯಿಂದ ನಿಭಾಯಿಸುವುದು ತುಂಬ ಅಗತ್ಯ.

ಸಂಘಟಿತರಾಗುವ ಅಗತ್ಯ:

ಒಂದಂತೂ ಸತ್ಯ. ಸಂಖ್ಯೆಯಲ್ಲಿ ಇಷ್ಟೊಂದು ಜನ ಇದ್ದರೂ ಮಹಿಳೆಯರು ಸದ್ಯಕ್ಕೆ ಬಿಡಿಬಿಡಿಯಾಗಿಯೇ ಇದ್ದಾರೆ. ಒಂಟಿಯಾಗಿದ್ದಾರೆ. "....ನೀರಿನಿಂದ ಹೊರ ತೆಗೆದ ಮೀನಿನಂತೆ ಚಡಪಡಿಸುತ್ತಿದ್ದಾರೆ. ಬಹಳಷ್ಟು ಮುಂದಿಗೆ ತಮ್ಮ ಒಡನಾಡಿಗಳಿದ್ದಾರೆ ಎಂಬ ನಂಬಿಕೆಯೂ ಬರುತ್ತಿಲ್ಲ. ಕಾರಣ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಿಥ್ಯೆಯನ್ನು ಸೃಷ್ಟಿಸಿರುವ ಸಮಾಜ ಮಹಿಳೆಯರನ್ನು ಒಡೆದು ಆಳುವ ತಂತ್ರವನ್ನು ಬಳಸಿ ಯಶಸ್ವಿಯಾಗಿದೆ....(ಕೆ. ಎಸ್. ಶ್ರೀಲತಾ—'ಗ್ರಾಮ ಪಂಚಾಯ್ತಿ ಮಹಿಳೆಯರಿಗೊಂದು ಸವಾಲು")

ಈ ಮಹಿಳಾ ಸದಸ್ಯರಿಗೆ ಮಹಿಳಾ ಸಂಘಟನೆಗಳ ಬೆಂಬಲದ ಅವಶ್ಯಕತೆಯಿದೆ. ಮತ್ತೆ ಇಲ್ಲಿ ಜಾತಿ, ಮತ, ವರ್ಗ ಮೀರಿ ಹೆಂಗಸರೆಂದು ಸಂಘಟಿತರಾಗಬೇಕಾಗುತ್ತದೆ.

ದಲಿತವರ್ಗದ ಮಹಿಳೆಯರು ಚಳವಳಿಯಾಗಿ ಎತ್ತಿಕೊಂಡ ವಿಚಾರವೇನಾದರೂ ಮೇಲ್ವರ್ಗದವರ ವಿರುದ್ಧವಾಗಿದ್ದರೆ, ಮೇಲ್ವರ್ಗದ ಮಹಿಳೆಯರು ಯಾರನ್ನು ಸೇರಿಕೊಳ್ಳುತ್ತಾರೆ ಎಂಬುದು ಇನ್ನೂ ಅನುಮಾನವೇ! ಇಂಥ ಮಿತಿಗಳು ಸಾಕಷ್ಟಿವೆ. ಮಹಿಳೆಯರು ತಮ್ಮ ವೈಯಕ್ತಿಕ ಮತ್ತು ಸಾಮೂಹಿಕ ಶಕ್ತಿಯನ್ನು ಗುರುತಿಸಿ ಬೆಳೆಸಿಕೊಳ್ಳುವುದು ತೀರ ಅಗತ್ಯ. ಹೊಸ ಹೊಸ ಅನುಭವಗಳಿಗೆ ತೆರೆದುಕೊಳ್ಳಬೇಕಾಗುತ್ತದೆ. ಆತ್ಮಶಕ್ತಿಯನ್ನು ಬೆಳೆಸುವಂಥ ತರಬೇತಿಗಳ ಅವಶ್ಯಕತೆ ಇವರಿಗಿದೆ. ಹೆಂಗಸರಾಗಿ ತಮ್ಮನ್ನು ಗುರುತಿಸಿಕೊಳ್ಳುವುದು, ಸಂಬಂಧಗಳನ್ನು ಗಟ್ಟಿಮಾಡಿಕೊಳ್ಳುವುದು ಪರಸ್ಪರ ಬೆಂಬಲ ಕೊಡುವುದು—ತಮ್ಮ ಒಳದನಿಯನ್ನು ಕಂಡುಕೊಳ್ಳುವುದು, ಪ್ರಾರಂಭವಾದರೆ ಮಾತ್ರ ಹೆಂಗಸರ ಸ್ವಂತಿಕೆ ಉಳಿಯಲು ಸಾಧ್ಯ. ಅದಕ್ಕೊಂದು ಸಾಮಾಜಿಕ ಮಹತ್ವ ಸಿಗಲು ಸಾಧ್ಯ. ಒಟ್ಟಿನಲ್ಲಿ ಇಲ್ಲಿ ಒಂಟಿ ಹೋರಾಟ ಕಷ್ಟ. ಹೆಂಗಸರ ಗುಂಪುಗಳು ಬಲವಾಗಿ ಬೆಳೆಯಬೇಕು, ಪರಸ್ಪರ ಹೆಗಲು ಕೊಡಬೇಕು.

ಭರವಸೆಯ ಕುರುಹುಗಳು :

ಇಷ್ಟೊಂದು ಇತಿಮಿತಿ, ಸಂಕೀರ್ಣ ಸಮಸ್ಯೆಗಳನ್ನು ನೋಡುವಾಗ ಎಲ್ಲ ಬಿಟ್ಟು ಹೆಂಗಸರು ಮನೆಯೊಳಗೆ ಬೆಚ್ಚಗೆ ಸೇರಿಕೊಳ್ಳಬಹುದೇನೋ ಎಂಬ ಅತಂಕವಿದ್ದರೂ, ನನ್ನಂಥವರಿಗೆ ಅಲ್ಲಿ ಇಲ್ಲಿ ಚಿಕ್ಕಪುಟ್ಟ ಭರವಸೆಯ ಕುರುಹುಗಳು ಕಾಣಸಿಗುತ್ತವೆ. ಅತ್ಯಂತ ನಿಧಾನಗತಿಯಲ್ಲಿ ಸಾಗುತ್ತಿರುವ ಮಹಿಳಾ ಚಳವಳಿಯಲ್ಲಿ ಇದೊಂದು ಹೊಸ ಆಯಾಮ. ತರಬೇತಿಗಳು ನಡೆಯುವಾಗ ಹೆಂಗಸರು ತೋರಿಸುವ ಆತ್ಮ ಪ್ರತ್ಯಯ (ಆತ್ಮ ಸಮ್ಮಾನ)ದ ಕೆಲವು ನಿದರ್ಶನಗಳು ಹೃದಯಸ್ಪರ್ಶಿಯಾಗಿವೆ. ಅಳುಕಿಲ್ಲದೆ ಅಧಿಕಾರಿಗಳನ್ನು, ತರಬೇತಿದಾರರುಗಳನ್ನು ಕೈಕುಲುಕುವ ಸಂಭ್ರಮ ಬಹಳ ವಿಚಿತ್ರವೇ ಅನ್ನಿಸಿಬಿಡುತ್ತದೆ. ಪಂಚಾಯ್ತಿ ಸದಸ್ಯರ ತರಬೇತಿಗಳನ್ನು ನಡೆಸಿದ—ನಡೆಸುತ್ತಿರುವ ಬೇರೆ ಬೇರೆ ಸ್ನೇಹಿತರು ಹೆಂಗಸರಾಡಿದ ಕೆಲವು ಮಾತುಗಳನ್ನು ಉದಾಹರಿಸಿದ್ದನ್ನು ಮತ್ತೆ ಇಲ್ಲಿ ನೆನಪಿಸಿಕೊಳ್ಳಬೇಕೆನಿಸುತ್ತದೆ.

—"ಗಂಡಸರು ನಮ್ಮ ಊರ ಕೇರೀಲಿ ಏನು ಮಾಡಿದರು, ನೋಡ ಬನ್ನಿ .... ನನ್ನ ಕಿಡ್ನಾಪ್ ಮಾಡ್ತಾರಂತೆ. ಅದ್‌ಹೆಂಗ್ ಮಾಡ್ತಾರೋ ನೋಡ್ತೀನಿ....ನನ್ನ ಊರನ್ನ ಒಳ್ಳೇದು ಮಾಡಿಯೇ ನಾನು ಸಾಯೋದು........"

"ನಾನು ಚೆನ್ನಾಗಿ ಮಾತಾಡ್ತೀನಿ, ಧೈರ್ಯವಾಗಿ ಮುನ್ನುಗ್ತೀನಿ ಅಂತ ನನ್ನನ್ನು ಸಂಘದ ಹೆಂಗಸರು ಗೆಲ್ಸಿದ್ದಾರೆ....ಈ ಸಂಘಕ್ಕೆ ಒಳ್ಳೇದು ಮಾಡೋದು ನನ್ ಕೆಲಸ........"

"ನನ್ನ ಸ್ಥಾನ ನನಗಾಗಿ ಇರೋದಲ್ಲ. ನನ್ನ ಹಳ್ಳಿಯ ಉಪಯೋಗಕ್ಕಾಗಿ,....ಇದಕ್ಕಾಗಿ ನನಗೆ ಬೆಂಬಲ ಬೇಕು, ತರಬೇತಿ ಬೇಕು........"
"ನಾವು ಸದಸ್ಯರು ನಮ್ ಪಾಡಿಗೆ ಎಲ್ಲಾ ಮಾಡಕ್ಕಾಗಲ್ಲ....ನಮ್ ಹಳ್ಳಿ ಹೆಂಗಸ್ರೆಲ್ಲಾ ಜತೆಸೇರಿದ್ರೇ ಎಲ್ಲಾ ಮಾಡಬಹುದು........"

"ನೀವು ಗಂಡಸ್ರು ಮಧ್ಯಾಹ್ನತನ್ಕ ಮಾತಾಡಿದ್ದಾಯಿತು. ಇನ್ನು ನಾವ್ ಮಾತಾಡ್ತೀವಿ .... (ಗ್ರಾಮಪಂಚಾಯ್ತಿ ಸಭೆಯೊಂದರಲ್ಲಿ ಒಬ್ಬ ಹೆಂಗಸು ಹೇಳಿದ್ದು.)

ಇಂಥ ಮಾತುಗಳು, ಅನಿಸಿಕೆಗಳು, ಉತ್ಸಾಹದ ನುಡಿಗಳು ಹೆಂಗಸರಿಂದ ಬರುತ್ತಿರುವುದು ಕೇಳುವಾಗ, ಎಲ್ಲ ಮುಗಿದು ಹೋಗಿಲ್ಲ....ಚಿಗುರುವ ಚೈತನ್ಯಗಳು ಸಾಕಷ್ಟು ಇವೆ, ಅನ್ನುವ ಧೈರ್ಯ ಬರುತ್ತದೆ. ಶಕ್ತಿಯ ಮಹಾಪೂರ

ಗಳನ್ನೇ ಒಳಗೊಂಡಿರುವ ಮಹಿಳೆಯರಿಗೆ ಅವಕಾಶ, ಸಹಕಾರ ಕೊಡುವುದು ಸಹೃದಯತೆಯಾದೀತು. ಸದಾ ಬೇರೆಯವರ ನಿರ್ಧಾರಕ್ಕೆ ತಲೆಬಾಗುತ್ತಾ ಬಂದವರನ್ನು ಸೋಲಿಸುವುದೂ ಸುಲಭವೇ.... ನೋಡಿ ನಗುವುದೂ ಸುಲಭವೇ....ಅದೇನೂ ಹೆಗ್ಗಳಿಕೆಯ ಮಾತಲ್ಲ. ಇವೆಲ್ಲ ಏರುಪೇರುಗಳ ಮಧ್ಯೆ ಹೆಂಗಸರೇನಾದರೂ ಸೋತರೆ ಅದು ಬರೀ ಹೆಂಗಸರ ಸೋಲಲ್ಲ....ಎಲ್ಲ ರೀತಿಯಿಂದಲೂ ಇಡೀ ಸಮಾಜದ ಸೋಲಾಗುತ್ತದೆ. ಇಡೀ ಸಮಾಜವೇ ಏನೋ ಒಂದು ಹೊಸ ಸಾಧ್ಯತೆಯನ್ನು ಇನ್ನೊಂದಷ್ಟು ಕಾಲ ಮುಂದೂಡಿದಂತೆ ಆಗುತ್ತದೆ ಸಹಕಾರ ಸಿಗಲೀ, ಸಿಗದಿರಲಿ—ಒಂದಂತೂ ಖಂಡಿತ....ಒಮ್ಮೆ ಸೋಲುವುದರೊಂದಿಗೆ ಹೆಂಗಸರು ನಿಲ್ಲಲಾರರು....ಅವಕಾಶ ಕೊಟ್ಟರೆ ತೆಗೆದು ಕೊಳ್ಳುವ ಈ ಹೆಂಗಸರು, ಒಮ್ಮೆ ವಿಶಾಲ ಜಗತ್ತಿನ ರುಚಿ ಕಂಡರೆ ಅವಕಾಶ ಕಸಿದುಕೊಳ್ಳಲೂ ಹಿಂಜರಿಯಲಾರರು. ಒಟ್ಟಿನಲ್ಲಿ ಸಮಾಜಕ್ಕೆ ಹೆಂಗಸರ ಯೋಚನೆಗಳು-ಕೊಡುಗೆಗಳು ಅನಿವಾರ್ಯವಾಗಿವೆ. ಇಂದೋ....ನಾಳೆಯೋ ಅದು ಸಾಬೀತಾಗುತ್ತದೆ.

ಏನೇ ಇರಲಿ, ಜನರಿಂದ ಪಡೆದ ಅಧಿಕಾರವನ್ನು ಮತ್ತೆ ಜನರಿಗೆ ಹಂಚುವಲ್ಲಿ ನಿಜವಾದ ವಿಕೇಂದ್ರೀಕರಣವನ್ನು ಸ್ಥಾಪಿಸುವಲ್ಲಿ.... ಭವಿಷ್ಯಕ್ಕೆ ಹೊಸ ರೂಪ ಕೊಡುವಲ್ಲಿ ಮಹಿಳೆಯರಾದರೂ ಯಶಸ್ವಿಯಾಗುತ್ತಾರೋ ಕಾದು ನೋಡೋಣ!

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದೊಡೆ
ತನುವಿನ ಸೂತಕಕ್ಕೆ ತೆರಹುಂಟೇ ಅಯ್ಯ?
ಮೊದಲಿಲ್ಲದ ಸೂತಕಕ್ಕೆ ಮರುಳಾಯ್ತು ಜಗವೆಲ್ಲ
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನೆಂಬ
ಗರುವಂಗೆ ಜಗವೆಲ್ಲಾ ಹೆಣ್ಣು ನೋಡಾ।

ವಾಣಿ

ಗ್ರಂಥಋಣ:

ಗ್ರಾಮ ಪಂಚಾಯ್ತಿ ಮಹಿಳೆಯರಿಗೆ ಸವಾಲು—ಕೆ. ಎನ್. ಶ್ರೀಲತಾ -
ಸಂಯುಕ್ತ ಕರ್ನಾಟಕ-೮-೪-೧೯೯೪.

ಒಸರ್ವೇಶನ್ಸ್ ಫಾರ್ ವುಮೆನ್ ಎನ್ ಪಂಚಾಯತ್—ಇ. ಪಿ. ಡಬ್ಲ್ಯು.
ವಾಲ್ಯುಂ: ೨೪, ೧೯-೬-೧೯೮೯.

ಚತುರ ವಂಚಕ

ಅಗಸ-ಮಾಧುರಾಮನ, ಹತ್ತಿರ ಒಂದು ಕುಳ್ಳ ಕುದುರೆಯಿತ್ತು. ಅದನ್ನು ಅವನು "ರಾಜಾ" ಎಂದು ಕರೆಯುತ್ತಿದ್ದ. ರಾಜಾ ನೋಡುವುದಕ್ಕೆ ಸಾಕಷ್ಟು ಚೆಲುವಾಗಿತ್ತು. ಮಾಟವಾದ ಮೈ. ಕಂದು ಬಣ್ಣ. ಬುದ್ಧಿಮಾತ್ರ ಕತ್ತೆ ಗಿಂತಲೂ ಕಡಿಮೆ. ಇದೇ ಕಾರಣದಿಂದ ಅದು ಹತ್ತಿರ ಇರುವ ಕುಂಬಾರ-ಘೋಟೆಲಾಲನ "ಟಟ್ಟು-ಮೋತಿ"ಯ ಮಾತು ಕೇಳುತ್ತಿತ್ತು. ಅಗಸ ಮಾಧುರಾಮ ಮತ್ತು ಕುಂಬಾರ ಘೋಟೆಲಾಲ, ತಮ್ಮ ಮಣ್ಣಿನ ಮನೆಯ ನಡುವೆ ಇರುವ ಇಕ್ಕಟ್ಟಾದ ಓಣಿಯನ್ನೇ, ಕುದುರೆ ಲಾಯವನ್ನಾಗಿ ಮಾಡಿ ಕೊಂಡಿದ್ದರು. ಯಾವಾಗಲಾದರೂ ಒಮ್ಮೊಮ್ಮೆ ಅವರು ತಮ್ಮ ಕುದುರೆಗಳನ್ನು ಆ ಕಿರುಗಲ್ಲಿಯಲ್ಲಿ ಜೊತೆಗೇ ಕಟ್ಟುಬಿಡುತ್ತಿದ್ದರು. ಹೀಗಾಗಿ ರಾಜಾ ಮತ್ತು ಮೋತಿ ಎರಡೂ ಮಾತನಾಡಿಕೊಳ್ಳುವುದಕ್ಕೆ ಅವಕಾಶ ಸಿಕ್ಕುತ್ತಿತ್ತು. ಅವುಗಳ ಯಾವ ಮಾತಾದರೂ ತಮ್ಮ ಒಡೆಯ ಮತ್ತು ಒಡೆಯನ ವರ್ತನೆಯ ಬಗ್ಗೇ ನಡೆಯುತ್ತಿದ್ದವು. ಮೋತಿ ಎಷ್ಟು ತೆಳ್ಳಗಾಗಿ ಬಡಕಟಕೆಯಾಗಿ ಕುರೂಪಿ ಯಾಗಿತ್ತೋ ಅಷ್ಟೇ ಚುರುಕಾಗಿಯೂ ಇತ್ತು....ರಾಜಾನನ್ನು ಕರುಬಿಸು ವುದಕ್ಕೆಂದೇ ಅದು ತನ್ನ ಒಡೆಯ ಮತ್ತು ಅವನ ವರ್ತನೆಯ ಬಗ್ಗೆ ಹೊಗಳು ತ್ತಿತ್ತು. ಇದನ್ನು ಕೇಳಿ ಈ ಮೂರ್ಖ ರಾಜಾಗೆ ತಾನು ಬಹಳ ಅದೃಷ್ಟಹೀನ ನೆಂದೂ ಅದಕ್ಕೇ ಅಗಸ ಒಡೆಯನಾಗಿ ಸಿಕ್ಕಿರುವನೆಂದೂ ಅನಿಸುತ್ತಿತ್ತು. ಮೋತಿ, "ಗೆಳೆಯಾ! ರಾಜಾ!! ಏನು ನನ್ನ ಅದೃಷ್ಟ ನೋಡು! ಕೆಂಪು ಬಣ್ಣದ ಥರಥರದ ಹೂಬಳ್ಳಿಗಳಿಂದ ಕೂಡಿದ ಬೇಯಿಸಿ ತಯಾರಿಸಿದ ಮಣ್ಣಿನ ಪಾತ್ರೆಗಳನ್ನು ನನ್ನ ಮೇಲಿರಿಸಿದಾಗ, ನನ್ನ ಹೃದಯಕ್ಕೆ ಅತ್ಯಂತ ಸಂತೋಷ ವಾಗುತ್ತದೆ....ಈ ಸುಂದರವಾದ ಪಾತ್ರೆಗಳಿಂದ ನನ್ನ ಸೌಂದರ್ಯವೇ ಹೆಚ್ಚಿ ದಂತಾಗುತ್ತದೆ" ಅನ್ನುತ್ತಿತ್ತು.

ಇದನ್ನು ಕೇಳಿ ರಾಜಾನ ಕಣ್ಣೆದುರಿಗೆ, ತಾನು ಹೊರುವ ಮಾಸಿದ ಹೊಲಸು ಬಟ್ಟೆಯ ಭಾರವಾದ ಗಂಟು, ಬಂದಂತಾಗುತ್ತಿತ್ತು. ಆ ಗಂಟನ್ನು ಅದರ ಒಡೆಯ, ಇದರ ಮೇಲೆ ಹೊರಿಸಿ ಒಗೆಯಲು ಕೆರೆಗೆ ತೆಗೆದುಕೊಂಡು ಹೋಗು ತ್ತಿದ್ದ....ಇದನ್ನು ನೆನೆದು ಇದು ಥಣ್ಣನ್ನೆ ನಿಟ್ಟುಸಿರುಬಿಡುತ್ತಿತ್ತು....ಮೋತಿ ಮತ್ತೆ, "ಗೆಳೆಯಾ! ನನ್ನ ಮೇಲೆ ನನ್ನ ಒಡೆಯ ಕೆರೆಯ ದಂಡೆಯ ಮಣ್ಣನ್ನು

"ಸುರಬ್ ಗುಲಾಬ್" ಪುಸ್ತಕದಲ್ಲಿನ ಡಾ॥ ಬಿಸ್ವೇಶ್ವರಪ್ರದೀಪ್ ಅವರ ಲೇಖನದ ಅನುವಾದ.

ಹೊರಸಿದಾಗ, ಆ ಮಣ್ಣಿನ ಘಮಘಮಿಸುವ ಸವಿಯಾದ ತಂಪು ಸೇವನೆ ಎಷ್ಟು ಇಷ್ಟವಾಗುತ್ತದೆಂದರೆ, ಅದನ್ನು ಹೇಳತೀರದು. ಶ್ರಮವಂತೂ ಇರಲಿ, ಈ ಮಣ್ಣು ಸದಾ ನನ್ನ ಮೇಲೆಯೇ ಹೊರಿಸಿರಲೆಂದೆನಿಸುವುದು.

ರಾಜಾನ ಮೆದುಳಿನಲ್ಲಿ ಹೊಲಸು ಬಟ್ಟೆಯ ಕೊಳಕುವಾಸನೆ ನುಗ್ಗುತ್ತ ಹೋಗುತ್ತಿತ್ತು ಮತ್ತು ಅದು, "ಗೆಳೆಯಾ! ಮೋತಿ!! ನನ್ನ ಹಣೆಯು ಬರಹವಲ್ಲಂತೂ ಅಗಸರ ಮನೆಯೆಂದು ಬರೆದಿತ್ತು. ಕೊಳಕು ಬಟ್ಟೆಯ ಭಾರವಾದ ಮೂಟೆ....ನಾನೇನು ಹೇಳಲಿ ಮಿತ್ರಾ! ಒಂದೊಂದು ಸಲವಂತೂ ಒಡೆಯನ ಕಣ್ಣುತಪ್ಪಿಸಿ, ಓಡಿಹೋಗಬೇಕೆಂದು ಮನಸ್ಸಾಗುವುದು" ಎಂದು ಹೇಳುತ್ತಿತ್ತು.

ತನಗೆ ತಿನ್ನಲು ಮೋತಿಗಿಂತಲೂ ಬಹಳ ಚೆನ್ನಾದ ಆಹಾರ ಸಾಕಷ್ಟು ಸಿಕ್ಕುತ್ತದೆಂಬುದನ್ನು ಆ ಸಮಯಕ್ಕೆ ಮರೆತೇ ಬಿಡುತಿತ್ತು....ಇನ್ನು ಕೆಲಸ, ಅವರವರಿಗೆ ಕೂಡಿದ್ದು–ಕೆಲಸ ಚೆನ್ನಾಗಿಯೇ ಇರುತ್ತದೆ....ಒಬ್ಬರಿಗೆ ಒಂದು ಬಗೆಯ ಕೆಲಸವಾದರೆ ಬೇರೆಯವರಿಗೆ ಬೇರೆ ಬಗೆಯದು....ಆದರೆ ರಾಜಾಗೆ ಯಾರು ತಿಳಿಹೇಳಬೇಕು!

ತನ್ನ ಆರೋಗ್ಯ ಮೋತಿಗಿಂತಲೂ ಚೆನ್ನಾಗಿರುತ್ತಿರುವುದು, ತನಗೆ ಚೆನ್ನಾದ ಆಹಾರ ದೊರಕುತ್ತಿರುವುದರಿಂದ. ತನ್ನ ಒಡೆಯ ತನಗೆ ನಿತ್ಯ ಸ್ನಾನ ಮಾಡಿಸುತ್ತಿರುವುದರಿಂದ, ಸ್ವಚ್ಛ ಇಡುತ್ತಿರುವುದರಿಂದ ಎಂಬುದನ್ನಂತೂ ರಾಜಾ ಯೋಚಿಸಲಿಲ್ಲ. ಅದು ವಿಚಾರ ಮಾಡಿದ್ದು ಒಂದೇ. ತನ್ನ ಕೆಲಸ ಅತ್ಯಂತ ಹೊಲಸಾದದ್ದು ಎಂದು. ಒಂದು ದಿವಸ ಮೋತಿ, ಮತ್ತೊಂದು ಥರ ಇದನ್ನು ಉಬ್ಬಿಸಿತು.

"ಗೆಳೆಯಾ! ನೀನೇ ಸ್ವತಃ ಹುದುಗಿಕೊಂಡಿರುತ್ತಿ; ಇದೇನು? ಎಲ್ಲಾದರೂ ಉಂಟೆ? ಇಡೀ ದಿವಸ ಕಟ್ಟಿಹಾಕಿಸಿಕೊಂಡಿರುತ್ತಿ. ಆ ದಿವಸ ನಾನೂ ನಮ್ಮ ಒಡೆಯರೂ ಕೆರೆಯಿಂದ ಮಣ್ಣು ತರಲು ಹೋಗಿದ್ದೆವು....ನಿಮ್ಮ ಒಡೆಯ ಬಟ್ಟೆ ಒಗೆಯುತ್ತಿದ್ದ. ನೀನು ಹುಲ್ಲು ತಿನ್ನುತ್ತಿದ್ದಿ. ಆಗ ನಿನ್ನನ್ನು ಕಟ್ಟಿ ಹಾಕಿದ್ದ. ಏನು ನೀನೇನು ಓಡಿಯೇ ಹೋಗುತ್ತಿದ್ದಿಯಾ?....ಕಟ್ಟಿಸಿಕೊಂಡು ಹುಲ್ಲು ಮೇಯುವುದರಲ್ಲಿ ಏನು ರುಚಿ ಬಂತು!...."ನೋಡು! ಅಣ್ಣಾ!!.... ನಮ್ಮ ಒಡೆಯ ನನ್ನನ್ನು ಸಂಜೆಗೆ ಮಾತ್ರ ಕಟ್ಟಿಹಾಕುತ್ತಾನೆ....ಹಾಂ...."

ಅಗಸ–ಮಾಧುರಾಮಗೆ 'ರಾಜಾ' ಬಹಳ ಮುದ್ದಾಗಿ ಕಾಣುತ್ತಿತ್ತು. ಅದನ್ನು ಅವನು ಕಳೆದುಕೊಳ್ಳುವುದಕ್ಕೆ ಬಯಸುತ್ತಿರಲಿಲ್ಲ. ಕೆರೆಯಲ್ಲಿ ಬಟ್ಟೆ ಒಗೆಯು

ತ್ತಿರುವಾಗ, ರಾಜಾನನ್ನು ಹತ್ತಿರದ ಬೈಲಿನಲ್ಲಿ ಒಂದು ಉದ್ದನೆಯ ಹಗ್ಗದಿಂದ ಕಟ್ಟಿರುತ್ತಿದ್ದ....ರಾಜಾ ಹುಲ್ಲು ಮೇಯುತ್ತಿರುವಾಗ, ಮಾಧುರಾಮ ನಿಶ್ಚಿಂತೆಯಿಂದ ಬಟ್ಟೆಯನ್ನು ಒಗೆಯುತ್ತಿದ್ದ....ಹಗ್ಗ ಉದ್ದವಿದೆ. ದೂರ ದೂರ ತಿರುಗಿ ಹುಲ್ಲು ಮೇಯಲು ಆಗುತ್ತದೆ. ಹೀಗಿರುವಾಗ ತನ್ನನ್ನು ಕಟ್ಟಿಹಾಕಿದರಾದರೂ ಏನು ಅಭ್ಯಂತರವೆಂದು ರಾಜಾ ಯೋಚಿಸಲಿಲ್ಲ! .... ಹಾಗೂ ಮೋತಿಗೆ ಅಡವಿ ಹುಲ್ಲು ಮೇಯುವ ಅದೃಷ್ಟವಿಲ್ಲೆಂಬ ಮಾತು ರಾಜಾಗೆ ಹೊಳೆಯಲಿಲ್ಲ. ಅದರ ಒಡೆಯ ಕೆರೆಯಿಂದ ಮಣ್ಣು ಅಗೆದು, ತನ್ನ ಕುರೂಪಿ ಕುದುರೆಯ ಮೇಲೆ ಹೇರಿ ಮನೆಗೆ ಬಂದು ಬಿಡುತ್ತಿದ್ದ. ಮನೆಗೆ ಬಂದು ಪಾತ್ರೆಗಳನ್ನು ಮಾಡುತ್ತಿದ್ದ. ಕುಂಬಾರನಿಗೆ ಕೆರೆಯ ಮೇಲೆ ಬಹಳ ಹೊತ್ತು ನಿಲ್ಲುವ ಕೆಲಸವೇನು!

ತಾನು ಹುಲ್ಲು ತಿನ್ನುತ್ತಿರುವಾಗ ತನ್ನನ್ನು ಕಟ್ಟಿಹಾಕಿರುವ ಒಡೆಯ ಬಹಳ ಕೆಟ್ಟ ಮನುಷ್ಯನೆಂದು ರಾಜಾಗೆ ಅನಿಸಿತು. ಇದರಿಂದ ಅದರ ಹೃದಯದಲ್ಲಿ ಒಡೆಯನ ಬಗ್ಗೆ ತಿರಸ್ಕಾರ ಮೂಡಿತು.

ಒಂದು ದಿವಸ ಮಾಧುರಾಮ ಅದನ್ನು ಬೈಲಿನಲ್ಲಿ ಹಗ್ಗದಿಂದ ಕಟ್ಟಿ ಬಟ್ಟೆ ಒಗೆಯುವುದಕ್ಕೆ ಪ್ರಾರಂಭಿಸಿದ. ರಾಜಾ ಹಲ್ಲಿನಿಂದ ಮೆತ್ತಗೆ ಹಗ್ಗವನ್ನು ಕಡಿದು ಹಾಕಿ ಒಂದು ಕಡೆಗೆ ಓಡಿ ಹೋಯಿತು. ಅಡವಿಯಲ್ಲಿ ಬಹುದೂರ ಬಂದಾಗ, ಅದಕ್ಕೆ ಇಂದು ಮೊದಲಸಲ ಸ್ವತಂತ್ರನಾದೆ ಎನ್ನಿಸಿತು....ಮೊದಲು ಕೈದಿಯಾಗಿದ್ದೆ—ಈಗ ಸ್ವತಂತ್ರ! ಆಹಾ!! ಎಂದು ಅಲ್ಲಲ್ಲಿ ಅಲೆಯುತ್ತ, ನೆಗೆಯುತ್ತ ಹುಲ್ಲು ಮೇಯಿತು. ಮೇಯುತ್ತ ಮೇಯುತ್ತ ತಾನೆಲ್ಲಿ ಬಂದಿತ್ತೆಂಬುದೂ ಅದಕ್ಕೆ ಗೊತ್ತಾಗಲಿಲ್ಲ....ಅದು ಬಹಳ ದೂರ ಹೊರಟು ಹೋಗಿತ್ತು....ಹೊಟ್ಟೆ ತುಂಬಿದ ಮೇಲೆ ಅದಕ್ಕೆ ತಿರುಗಿ ಮನೆಗೆ ಹೋಗುವ ನೆನಪಾಯಿತು. ಆದರೆ ಅದು ಎಲ್ಲಿಗೆ ಬಂದಿತ್ತೊ! ಅದು ಅದಕ್ಕೆ ಹೇಗೆ ನೆನಪಿಗೆ ಬರಬೇಕು! ಅದು ದಾರಿಯನ್ನು ಹುಡುಕಲು ಅತ್ತಿತ್ತ ಬಹಳ ಪ್ರಯಾಸ ಪಟ್ಟಿತು, ಆದರೆ ಹುಡುಕುವುದಕ್ಕಾಗಲಿಲ್ಲ....ಕೊನೆಗೆ ಸೋತು ಸಪ್ಪೆಯಾಗಿ ಒಂದು ಮರದ ಕೆಳಗೆ ಮರುಳನಂತೆ ನಿಂತುಕೊಂಡಿತು....ಕಿವಿ ಅಲ್ಲಾಡಿಸ ತೊಡಗಿತು.

ಈಗ ಈ ಕಡೆ ಸಂಗತಿ ಕೇಳಿ....ಅಗಸ ಮಾಧುರಾಮ ಬಟ್ಟೆ ಒಗೆಯುವುದನ್ನು ಮುಗಿಸಿ ರಾಜಾನ ಬೆನ್ನುತಟ್ಟುವುದಕ್ಕೆ ಬೈಲಿಗೆ ಬಂದ....ಆದರೆ ಅಲ್ಲಿ ರಾಜಾ ಎಲ್ಲಿದ್ದ!....?....ರಾಜಾ ಕಾಣದಾದಾಗ ಅವನ ಪಾದದಡಿ ಭೂಮಿಯೇ

ಕುಸಿದಂತಾಯಿತು. ಅವಶ್ಯ ಯಾರೋ ರಾಜಾನನ್ನು ಬಿಚ್ಚಿಕೊಂಡು ಹೋಗಿದ್ದಾರೆ....ಹೀಗೆ ಯೋಚಿಸಿ ಅವನಿಗೆ ಅತಿ ದುಃಖವಾಯಿತು. ಅವನ ದೃಷ್ಟಿ ಕತ್ತರಿಸಿದ ಆ ಹಗ್ಗದಮೇಲೆ ಬಿದ್ದಿತು. ರಾಜಾನನ್ನು ಯಾರಾದರು ಕಳ್ಳರು ಕದಿಯಬೇಕೆಂದಿದ್ದರೆ, ಹಗ್ಗವನ್ನು ಪೂರ್ತಿ ಬಿಚ್ಚಿಕೊಂಡು ಹೋಗುತ್ತಿದ್ದರು. ಅಥವಾ ಚಾಕುವಿಂದ ಹಗ್ಗವನ್ನು ಸರಿಯಾಗಿ ಕತ್ತರಿಸಿ ಒಯ್ಯುತ್ತಿದ್ದರು. ಆದರೆ ಕತ್ತರಿಸಿದ ಈ ಹಗ್ಗವನ್ನು ನೋಡಿದರೆ, ಇದು ಹಲ್ಲಿನಿಂದ ಅಗಿದು ಅಗಿದು ಕತ್ತರಿಸಿದಂತಿದೆ. ಇದನ್ನು ನೋಡಿ ಅವನಿಗೆ ಎಲ್ಲ ವಿಷಯ ತಿಳಿದು ಹೋಯಿತು. ಅವನಿಗೆ ರಾಜಾನ ಮೇಲೆ ಅತಿ ಕೋಪ ಬಂದಿತು. ಅವನು ರಾಜಾನನ್ನು ಅಲ್ಲಿ ಇಲ್ಲಿ ಬಹಳ ದೂರದವರೆಗೆ ಹುಡುಕಿದ. ಆದರೆ ರಾಜಾ ಸಿಕ್ಕಲಿಲ್ಲ....ಅವನು ಕೋಪ, ದುಃಖ ಮತ್ತು ಕಳವಳದಿಂದ ಒಂದು ದಿನ್ನೆಯ ಮೇಲೆ ಕುಳಿತು ಯೋಚಿಸುತ್ತಿದ್ದ. ಇಷ್ಟೊಂದು ಬಟ್ಟೆಯನ್ನು ಮನೆಗೆ ತೆಗೆದುಕೊಂಡು ಹೋಗುವ ಬಗೆ ಹೇಗೆಂದು ಚಿಂತಿಸುತ್ತಿರುವಾಗ, ಕುಂಬಾರ್ ಘೋಟೆಲಾಲ್ ಎರಡು ಕುದುರೆಗಳ ಜೊತೆಗೆ ಬರುತ್ತಿರುವುದು ಕಂಡಿತು. ಒಂದು ಕುದುರೆಯ ಮೇಲೆ ಮಣ್ಣನ್ನು ಹೇರಿದ್ದ ಎರಡನೆಯದರ ಹಗ್ಗ ಹಿಡಿದುಕೊಂಡು ಬರುತ್ತಿದ್ದ. ಮಾಧುರಾಮು ದೂರದಿಂದಲೇ ಅದು ತನ್ನ ರಾಜಾ ಎಂದು ಗುರುತಿಸಿದ.

"ಅಣ್ಣಾ ! ಈ ಠಕ್ಕನನ್ನು....ತೆಗೆದುಕೊ. ಇವತ್ತು ಮಣ್ಣು ತರುವುದಕ್ಕೆ ನಾನು ಬಹಳ ದೂರ ಹೋಗಿದ್ದೆ. ಅಲ್ಲಿ ಒಂದು ಮರದ ಕೆಳಗೆ ಇದು ನಿಂತಿದ್ದನ್ನು ಕಂಡೆ. ಇದು ಮಾಧುರಾಮುನ ಕುದುರೆಯೆಂಬುದನ್ನು ಗುರುತಿಸಿದೆ....ಬಹುತೇಕ ಇದು ಹಗ್ಗವನ್ನು ಕತ್ತರಿಸಿಕೊಂಡು....ಎನ್ನುವಷ್ಟರಲ್ಲಿ, ಮಾಧುರಾಮು ಏನು ಮಾಡಿದ ಗೊತ್ತೆ ?....ಅವನು ಘೋಟೆಲಾಲನ ಪೂರ್ತಿಮಾತನ್ನು ಕೇಳುವ ಮೊದಲು ರಾಜಾನನ್ನು ಹೊಡೆಯುವುದಕ್ಕೆ ಪ್ರಾರಂಭಿಸಿದ. ಹೊಡೆತ ತಿಂದು ರಾಜಾಗೆ ತನ್ನ ತಾತ ಮುತ್ತಾತರ ನೆನಪು ಬಂದು ಹೋಯಿತು....ಹತ್ತಿರ ನಿಂತಿದ್ದ ಮೋತಿ ಸಂತೋಷದಿಂದ ಮುಸಿ ಮುಸಿ ನಗುತ್ತ ಬಾಲ ಅಲ್ಲಾಡಿಸುತಿತ್ತು. ಅವನ್ನು ಕಂಡಾಗ ಯಾರನ್ನು ತಾನು ಗೆಳೆಯ ಎಂದು ತಿಳಿದುಕೊಂಡಿತ್ತೋ ಅದು ನಿಜವಾದ ವೈರಿ ಎನ್ನುವುದು ಈಗ ಅದಕ್ಕೆ ಚೆನ್ನಾಗಿ ಅರ್ಥವಾಯಿತು.

ಮಾಧವರಾವ್ ಮುಧೋಳ್

ಪುಸ್ತಕ ಪರಿಚಯ

ಕರ್ಪೂರದ ಕಾಯದಲ್ಲಿ—ಲೇಖಕರು : ಡಾ. ರಾಜಶೇಖರ ನೀರಮಾನ್ವಿ, ಪ್ರವಾಚಕರು, ವೀರಶೈವ ಕಾಲೇಜ್, ಬಳ್ಳಾರಿ. ಮಾರಾಟಗಾರರು : ಯಜಮಾನ್ ಅಂಡ್ ಬ್ರದರ್ಸ್, ಬೆಂಗಳೂರು ರಸ್ತೆ, ಬಳ್ಳಾರಿ–೫೮೩೧೦೧. ಪುಟಗಳು ೧೦೫.. ಬೆಲೆ ರೂ. ೧೫.

ಏಳು ಸಣ್ಣ ಕಥೆಗಳ ಸಂಕಲನ ; ತಮಂಥ ಕಿರಿದೆನ್ನಬಹುದೇ, ಅಯ್ಯಾ ! ; ಚಿತ್ತಲೆಸ್ವಾಮಿ; ಪ್ರಜಾಪ್ರಭುತ್ವದಲ್ಲಿ ಒಂದು ಸಾವು; ಗುಡಿಯನೋಡಿರಣ್ಣಾ !; ಎಂಥಾ ಮೋಜಿನ ಕುದರಿ !; ನೆಲೆ ; ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ.

ವರ್ತಮಾನಜೀವನದ ಸಂಕೀರ್ಣಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡ, ಆದರೂ ಸ್ವಂತತ್ವವನ್ನು ಕಳೆದುಕೊಂಡಿರದ, ಒಂದು ಸಂವೇದನಶೀಲ ಮನಸ್ಸಿನ ಅನುಭವಗಳೇನು ? ನಡೆ, ನುಡಿ, ಬಗೆಗಳಲ್ಲಿ ಅಸಾಮರಸ್ಯ ಮತ್ತು ತಜ್ಜನಿತ ಗೊಂದಲ. ಮನಸ್ಸಾಕ್ಷಿಯಂತೆ ನಡೆಯಲೇ, ಗುರುಹಿರಿಯರ ಉಪದೇಶಗಳಿಗೆ ಕಿವಿ ಕೊಡಲೇ, ಸದ್ಯದ ಆರ್ಥಿಕ ಮತ್ತು ವ್ಯಾವಹಾರಿಕ ಯಶಸ್ಸು ಒದಗಿಸುವ ಮಾರ್ಗ ಹಿಡಿಯಲೇ ಅಥವಾ ಎಲ್ಲವೂ ದೈವೇಚ್ಛೆ, ಕರ್ಮಾಧೀನ, ಅವನು ನಡೆಸಿದಂತಾಗಲಿ ಎಂಬ ಪಲಾಯನವಾದಕ್ಕೆ ಜೋತು ಬೀಳಲೇ ?

ಸುತ್ತಲಿನ ಘಟನೆಗಳಿಂದ ಪ್ರಕ್ಷುಬ್ಧಗೊಂಡ ಸೃಜನಶೀಲ ಮನಸ್ಸು ಅವುಗಳ ತಳದಲ್ಲಿ ವರ್ತಿಸುವ ಸಂಕೀರ್ಣ ಮನುಷ್ಯಕೃತ ಮತ್ತು ನಿಸರ್ಗಜನ್ಯ ಬಲಗಳ ಜಾಲವನ್ನು ತನ್ನ ಎಕ್ಸ್‌ಕಿರಣ ಶೋಧಕ ದೃಷ್ಟಿಗೆ ಒಡ್ಡುತ್ತದೆ. ಅಲ್ಲಿ ಇದಕ್ಕೊಂದು ಪ್ರರೂಪ (pattern) ಗೋಚರಿಸಬಹುದು ಅಥವಾ ಭಾಸವಾಗ ಬಹುದು. ಘಟನೆಗಳ ಅಂತರಕ್ರಿಯೆಗಳ ಫಲ ಈ ಪ್ರರೂಪವೇ ಅಥವಾ ಈ ತಳರೂಪಿಕೆಯ (ಪ್ರರೂಪದ) ಪ್ರಕಟಿತ ರೂಪ ಘಟನೆಗಳೇ—ಈ ಜಿಜ್ಞಾಸೆ ಸೃಜನಶೀಲ ಕಥೆಗಾರನ, ಕಾದಂಬರಿಕಾರನ ಅಥವಾ ಕವಿಯ ದೃಷ್ಟಿಯಿಂದ ಮುಖ್ಯವಲ್ಲ. ಆದರೆ ಆ ಪ್ರರೂಪವನ್ನು (ತಳರೂಪಿಕೆಯನ್ನು) ಆಧರಿಸಿ ತನಗೆ ಒಗ್ಗುವ ಮಾಧ್ಯಮದಲ್ಲಿ ಸೃಜನಶೀಲ ಕೃತಿ ರಚಿಸುವುದು ಅವನಿಗೆ ಅನಿವಾರ್ಯ ವಾಗುತ್ತದೆ : ಸನ್ನಿವೇಶದ ತೀವ್ರತೆಗೆ ಈತನ ಮಿಂಚು, ಸ್ಪಂದನ ಅಥವಾ ತುಡಿತ ಇದು.

ಇಂಥ ಒಂದೊಂದು ಕಥೆಯೂ ಕವಿ ಕಲ್ಪನೆ ಎಂದು ನಮಗೆ (ಓದುಗರಿಗೆ) ತಿಳಿದಿರುವಾಗಲೇ ಇದು ವರ್ತಮಾನ ಸಾರ್ವಜನಿಕ ಜೀವನಕ್ಕೆ ಹಿಡಿದ (ವಕ್ರ)

ದರ್ಪಣವೂ ಹೌದೆಂದು ಅನ್ನಿಸುವುದು ಈ ಕಾರಣದಿಂದ: ಪ್ರಚಲಿತ ಘಟನೆಗಳೆಂಬ ಬಿಡಿ ಕಚ್ಚಾ ಪದಾರ್ಥಗಳು ಲೇಖಕನ ಹೃದಯಮೂಸೆಯೊಳಗೆ ಸಂಸ್ಕರಣೆಗೊಂಡು ನವವಸ್ತುವಾಗಿ ಪರಿವರ್ತಿಸಲ್ಪಟ್ಟಿರುವುದರಿಂದ. ಎಂದೇ ಪ್ರತಿಯೊಂದು ಕಥೆಯೂ ಹಲವಾರು ಬಿಡಿ ಘಟನೆಗಳ ತಾರ್ಕಿಕ–ಕಲಾತ್ಮಕ ಸಂಘಟನೆಯೂ ಹೌದು, ಜೀವನ ಮೌಲ್ಯಗಳ ಸುಂದರ ಕಸೂತಿಯೂ ಹೌದು. ಇಂಥ ಉನ್ನತ ಮಟ್ಟದ ಆಕರ್ಷಕ ಮತ್ತು ಹೃದಯಂಗಮ ಕುಸುರಿ ಕೆಲಸವನ್ನು ಈ ಸಂಕಲನದ ಪ್ರತಿಯೊಂದು ಕಥೆಯಲ್ಲಿಯೂ ಕಾಣುತ್ತೇವೆ ಮತ್ತು ಇಲ್ಲಿ ಎತ್ತಿರುವ ಸಮಸ್ಯೆ ಬಗ್ಗೆ ಆತ್ಮಶೋಧಕ ವಿಶ್ಲೇಷಕರೂ ಆಗುತ್ತೇವೆ.

ನಿರಂತರ ಪ್ರಯಾಣಿಕನಾಗಿರುವ ಅನ್ವೇಷಕನ 'ದಾರಿಯಾವುದಯ್ಯಾ ವೈಕುಂಠಕೆ?' ಅನುಭವಗಳ ಪ್ರತೀಕಾತ್ಮಕ ನಿರೂಪಣೆ ಮೊದಲನೆಯ ಕಥೆ. ಅರ್ಜುನ–ಬಿಂದಿಯಾ—ಲೇಖಕ (ಕಥೆಗಾರನಾದ 'ನಾನು' ಪ್ರಥಮ ಪುರುಷ) ಸಂಬಂಧದ ಸೂಕ್ಷ್ಮ ಆಶೋತ್ತರಗಳನ್ನು ಧ್ವನಿಕಾವ್ಯದ ರೀತಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ರಾಧಾ ಮತ್ತು ಅವಳ 'ಗಂಡ' ಗಂಡಾಂತರಕ್ಕೆ ಈಡಾದದ್ದು, ಇವರಿಂವ ರಾಧಾ ಮಾತ್ರ ನಾಟಕೀಯವಾಗಿ ಪಾರಾದದ್ದು ಮತ್ತು ಮುಂದಿನ ಚಿರಂತನ ಜೀವನ ನಾಟಕಕ್ಕೆ ನಡೆಹಾಸಿದ್ದು ಒಂದು ನೂತನ ಅನುಭವ. ಲೇಖಕರು ರೂಪಕ, ಪ್ರತಿಮೆ, ಧ್ವನಿ ಮುಂತಾದ ಸಾಹಿತ್ಯ ಕುಸುರಿಗಳನ್ನು ತುಂಬ ಔಚಿತ್ಯದಿಂದ ಬಳಸುತ್ತ ಓದುಗನ ಸಂವೇದನೆಯನ್ನು ಪೋಷಿಸುತ್ತಾರೆ.

ಮಾಧ್ಯಮದ ಕನಿಷ್ಠ ಬಳಕೆಯಿಂದ ಭಾವನೆಯ ಗರಿಷ್ಠ ಅಭಿವ್ಯಕ್ತಿ—ಇದು ಉತ್ತಮ ಕಲಾಕೃತಿಗೆ ನಿದರ್ಶನ. ನೀರಮಾನ್ವಿಯವರ ಒಂದೊಂದು ಕಥೆಯ ತಳದಲ್ಲಿಯೂ ಈ ದೃಷ್ಟಿ ಕೆಲಸ ಮಾಡಿರುವುದು ಕಾಣುತ್ತದೆ. ಪ್ರಾಯಶಃ ಈ ಕಾರಣದಿಂವ 'ನೆಲೆ'ಯ ಸೆಲೆಯನ್ನು ಮೊದಲ ಓದಿಗೆ ಅರಿಯಲಾಗಲಿಲ್ಲ—ಶೈಲಿಯ ಹೊಸತನವೂ ಕಾರಣವಾಗಿರಬಹುದು (ದೇವನೂರರ 'ಕುಸುಮಬಾಲೆ'ಯಲ್ಲಿಯಂತೆ). ಜನಪದರ ವೀರ್ಯವತ್ತಾದ ಆಡುಮಾತಿನ ಶ್ರುತಿಗೆ ನಮ್ಮ ಕಿವಿಯನ್ನು ಒಮ್ಮೆ ಪ್ರಯತ್ನಪೂರ್ವಕವಾಗಿ—ಎರಡೆರಡು ಬಾರಿ ಗಟ್ಟಿಯಾಗಿ ಓದಿ—ಹೊಂದಿಸಿಕೊಳ್ಳಲಾಯಿತೋ ಇದರೊಳಗೆ ಅಡಗಿರುವ ಬದುಕಿನ ಸಂಕಟ, ವಂಚನೆ, ಮೋಸ, ನಿಷ್ಠೆ, ಹಾಸು, ಔದಾರ್ಯ ಮುಂತಾದ ಕಡುಪುಗೆರೆಗಳು ಚೆನ್ನಾಗಿ ಕಾಣುತ್ತವೆ.

ಕನ್ನಡದ ನೆಲದಿಂದ ಕನ್ನಡದ ಕಸುವಿನ ಕೂಡೆ ಹುಟ್ಟಿ ವ್ಯೆದಳೆದಿರುವ ಈ ಕಥೆಗಳು—ವೌಲ್ಯಗಳು ಹೆಪ್ಪುಗಟ್ಟಿರುವ ಈ ರಸಘಟ್ಟಗಳು—ಜೀವನದ ಅಗೋಚರ ಮುಖಗಳನ್ನು ಕಲಾತ್ಮಕವಾಗಿ ಬಿಂಬಿಸುವ ನುಡಿಚಿತ್ರಗಳೂ ಹೌದು.

ಸುಬ್ಬತ್ತೆ ಮತ್ತು ಕಂಪ್ಯೂಟರ್ — ಲೇಖಕರು: ಶಾಂತಾರಘು. ಪ್ರಕಾಶಕರು: ಅಪರಂಜಿ ಪ್ರಕಾಶನ, ೩೬, ಆರನೆಯ ಮುಖ್ಯ ರಸ್ತೆ, ಮಲ್ಲೇಶ್ವರ, ಬೆಂಗಳೂರು ೫೬೦೦೦೩; ಪುಟಗಳು ೧೩೬, ಬೆಲೆ ರೂ ೨೫.

ಇಪ್ಪತ್ತೈದು ನಗೆಲೇಖನಗಳ ಸಮೀಚೀನ ಭೋಜನ. ಜೀವನದ ನಿರಂತರತೆಯಲ್ಲಿ ಹಠಾತ್ತನೆ ಅಸ್ವಾಭಾವಿಕ ಸನ್ನಿವೇಶಗಳು ಹಣುಕಿದಾಗ ಅನುಭವಿಸುವಾತನಿಗೆ ಅವು ಗೊಂದಲ ಉಂಟುಮಾಡಬಹುದು, ಸಿಟ್ಟು ತರಬಹುದು ಅಥವಾ ತೀವ್ರ ನೋವು ಹತಾಶೆಗಳಿಗೇ ಕಾರಣವಾಗಬಹುದು. ಆದರೆ ನಿರಪೇಕ್ಷವಾಗಿ ದೂರದಿಂದ ನೋಡುವಾತನಿಗೆ ಬೇರೇನೋ ಒಂದು ಬಗೆಯ ಅನುಭವಕ್ಕೆ ಪ್ರೇರಣೆ ನೀಡಬಹುದು. ಸುಹಾಸಪ್ರಜ್ಞೆ ರೂಢಿಸಿಕೊಂಡಾತ ಅಲ್ಲಿ ನಗುವಿನ ಹುತ್ತವನ್ನೇ ಗುರುತಿಸಬಹುದು. ಸರ್ವಜ್ಞ ಎಂದಿರುವಂತೆ "ಕತ್ತೆ ಕಿರುಚಿದೊಡಲ್ಲಿ ತೊತ್ತು ಹಾಡಿದೊಡಲ್ಲಿ ಮತ್ತೆ ಕುಲರಸಿಕನಿರುವಲ್ಲಿ ನಗೆಯ ಹುತ್ತ ಕಾಣೆಂದ ಸರ್ವಜ್ಞ!"

ಶಾಂತಾರಘು ಅವರದು ಇಂಥ ಉಲ್ಲಾಸಕರ ಆರೋಗ್ಯಭರಿತ ದೃಷ್ಟಿ. ಎಂದೇ ಬದುಕಿನ ದೈನಂದಿನ ಘಟನೆಗಳಲ್ಲಿ ಇವರು ವಿನೋದವನ್ನು ಕಾಣುತ್ತಾರೆ. ಇವನ್ನು ಲಘುವಿನೋದ ಮಿಶ್ರಿತ ಭಾಷೆಯಲ್ಲಿ ನಿರೂಪಿಸುವ ಶೈಲಿ ಕಂಡರಿಸಿಕೊಂಡಿದ್ದಾರೆ. ಪುಸ್ತಕ ವಾಚನ ಆಮೂಲಾಗ್ರ ಆಸಕ್ತಿದಾಯಕವಾಗುವುದು. ನಿದರ್ಶನ:

ಸುಬ್ಬತ್ತೆ ಹಳೆತಲೆಮಾರಿನ ಅಜ್ಜಿ. ಆಚಾರ ವಿಚಾರ ದೇವರು ಧರ್ಮ ಪಾರಾಯಣ ದೇವಸ್ಥಾನ ಮುಂತಾದ ಪ್ರಾಚೀನ ಸಂಪ್ರದಾಯಗಳ ಮೂರ್ತ ರೂಪ. ಆಧುನಿಕ ಎಲೆಕ್ಟ್ರಾನಿಕ್ ಸಲಕರಣೆಗಳು, ಕಂಪ್ಯೂಟರ್, ಕ್ಯಾಲ್ಕುಲೇಟರ್ ಮುಂತಾದವುಗಳಿಗೆ ಸಂಬಂಧಿಸಿದ ಪರಿಭಾಷೆ ಅರಿಯದಾಕೆ. ಎಂದೇ ಇವುಗಳ ಬಗ್ಗೆ ತಾತ್ಸಾರ ಘೋರಣೆ. ಸುಬ್ಬತ್ತೆಯ ಡಿಕ್ಷನರಿಯಲ್ಲಿ ಕಂಪ್ಯೂಟರ್ softwear ಜಪಾನ್ ಫಿಷಾನ್ ಮೃದು ಸೀರೆ, hardwear ಕಾಂಚೀಪುರಮ್ ಗಡಸು ಸೀರೆ ಮತ್ತು mediumwear ವಾಯಲ್‌ನಂಥ

ಮಧ್ಯಮದರ್ಜೆಯ ಸೀರೆ! wearಗೂ wareಗೂ ಉಚ್ಚಾರಣಾ ಸಾಮ್ಯ ಸರಿ, ಆದರೆ spelling ಮತ್ತು ಈ ಕಾರಣದಿಂದ ಅರ್ಥ? ಸೂಕ್ಷ್ಮ ಅರಿತು ಇದರಲ್ಲಿ (software ತಾಂತ್ರಿಕಾಂಶ ಅಥವಾ ಹೂರಣ, hardware ಯಾಂತ್ರಿಕಾಂಶ ಅಥವಾ ಗಡಸುಭಾಗ) ಮುಳುಗಿರುವ ಮೊಮ್ಮಕ್ಕಳು ಸುಬ್ಬತ್ತೆಗಿಂತ ತೀರ ಭಿನ್ನರಾದವರು. ಈ ಪೀಳಿಗೆ-ಅಂತರ (generation gap) ಉತ್ಪಾದಿಸುವ ಮೋಜು ಸೊಗಸಾಗಿ ಮೂಡಿದೆ ಈ ಪುಸ್ತಕದಲ್ಲಿ.

ಸ್ತ್ರೀ ಸಾರಥಿಯರು, ಅನ್‌ಎಂಪ್ಲಾಯ್ಡ್ ಗೃಹಿಣಿಯರು, ಪ್ರೀಕೆಜಿಪರದಾಟ ಮುಂತಾದ ಲೇಖನಗಳಲ್ಲಿ ಜೀವನದ ಬಗ್ಗೆ ಆಸಕ್ತಿ ಇರುವ, ಆದರ ಲೋಪ ದೋಷಗಳನ್ನು ಕಾಳಜಿಯಿಂದ ಗಮನಿಸುವ, ಸ್ವವಿಮರ್ಶಾಸಹಿತವಾಗಿ ಸನ್ನಿ ವೇಶಗಳನ್ನು ವಿಶ್ಲೇಷಿಸುವ ಮತ್ತು ಕಂಡ ಚಿತ್ರವನ್ನು ಸುಹಾಸ ಶೈಲಿಯಲ್ಲಿ ನಿರೂಪಿಸುವ ಆರೋಗ್ಯಕರ ಮನಸ್ಸನ್ನು ಕಾಣುತ್ತೇವೆ. ಹಿಂದೆ 'ಕೊರವಂಜಿ' ಓದುತ್ತಿದ್ದಾಗ, ನಾ. ಕಸ್ತೂರಿಯವರ ಭಾಷಣಗಳನ್ನು ಆಲಿಸುತ್ತಿದ್ದಾಗ, ಲಾಂಗೂಲಾಚಾರ್ಯರ ಹರಟೆಗಳಲ್ಲಿ ಮಗ್ನರಾಗಿರುತ್ತಿದ್ದಾಗ ಸ್ಫುರಿಸುತ್ತಿದ್ದ ಭಾವನೆ ಮೆಚ್ಚುಗೆಗಳು ಈ ಹರಟೆಗಳನ್ನು ಓದುವಾಗಲೂ ಸ್ಫುರಿಸುತ್ತವೆ. ಇವು ಗಳಲ್ಲಿಯ ಬೌದ್ಧಿಕಾಂಶ (intellectual content) ಇನ್ನೂ ತೀವ್ರತರ ದ್ದಾದರೆ ಈ ವಿನೋದ ಲೇಖನಗಳು ಅಧಿಕ ರಂಜನೀಯವಾಗುವುದರ ಜೊತೆಗೆ ರುಚಿ ಉತ್ಕರ್ಷಕವೂ ಆಗಿರುತ್ತಿದ್ದುವು. ಈ ಸಾಮರ್ಥ್ಯ ಪ್ರಸಕ್ತ ಲೇಖಿಕೆಗೆ ಇದೆ ಎಂದು ಲೇಖನಗಳ ಅಂತರಂಗಂದಿದ ವ್ಯಕ್ತವಾಗುತ್ತದೆ. ಆದ್ದರಿಂದ ಮುಂದೆ ಬರೆಯುವ ಪ್ರಬಂಧಗಳಲ್ಲಿ ಈ ಹೊಳಹನ್ನೂ ಗಮನಿಸಬಹುದು.


ದಿವಾಣದರ್ಪಣ—ಲೇಖಕರು: ಗಣಪತಿ ದಿವಾಣ, ದಿವಾಣ ಪ್ರಕಾಶನ ಎಡನಾಡು, ೬೭೧೩೨೧, ಕೇರಳ. ೭೨ ಪುಟಗಳು. ರೂ ೧೫.

ಚುಟುಕುಗಳ ಮತ್ತು ಕವನಗಳ ಸಂಕಲನ. ಕೇರಳದ ನೆಲದಲ್ಲಿ ಕನ್ನಡದ ಕಂಪು—ಸಹಜ ಉದ್ಗಾರಗಳ ಗುಂಪು. ನೋವು, ನಲಿವು, ಕಚಗುಳಿ, ಹತಾಶೆ ಮುಂತಾದ ತಾತ್ಕಾಲಿಕ ಅನುಭವಗಳಿಗೆ ಕ್ಷಿಪ್ರ ಪ್ರತಿಕ್ರಿಯೆಗಳನ್ನು ಹೆಚ್ಚಿನವು ಗಳಲ್ಲಿ ಕಾಣುತ್ತೇವೆ ಎಂದೇ ಪ್ರಾಸ, ಓಟದ ಗತಿ, ಪದಗಳಲ್ಲಿ ವರಿಸೆ ಮುಂತಾದ ಚಮತ್ಕಾರಗಳಿಗೆ ಇಲ್ಲಿ ಅಗ್ರಸ್ಥಾನ. ಇವನ್ನು ಮೀರಿ ಅನುಭವವನ್ನು ಕೆದಕುವ ಅಥವಾ ಹೊಸ ಮಿಂಚನ್ನು ಬೀರುವ ಕೆಲವು ಸಾಲುಗಳಿವೆ: "ಮದ್ಯಪಾನ ನಿರೋಧ। ಕಾನೂನು ಸಡಿಲು। ಸರ್ವರುದಯಕೆ ಬಿದ್ದ। ದೊಡ್ಡ ಬರಸಿಡಿಲು।

ಗೊರಕೆ ಹೊಡೆದಡಿಗೆ। ಬಿದ್ದನು ಗಾಂಧಿ ಭಕ್ತ। ಎಚ್ಚರದೊಳಿದ್ದು ಗೆದ್ದನು। ಬ್ರಾಂದಿ ಭುಕ್ತ ॥" ಸ್ವಾತಂತ್ರ್ಯೋತ್ತರ ಭಾರತದ ಅಧಃಪತನವನ್ನು ಮಾರ್ಮಿಕವಾಗಿ ಬಿಂಬಿಸುವ ನೇರ ಕೂರು ನುಡಿಗಳಿವು.

'ಪೀಕದಾನಿ' ಕವನದಲ್ಲಿ ಇವರ ಪ್ರತಿಭೆಯ ಹೊಳಹು ನೋಡಿ: "ಮೌನವಾಗಿರಲೊಲ್ಲೆ। ಸುಮ್ಮನಿರಲೊಲ್ಲೆ। ಎಲ್ಲವೂ ಬಲ್ಲೆ-ಬಲ್ಲೆ। ನಿತ್ಯ ತಲೆ ಶೂಲೆ! ರಾಜಕಾರಣ ಸ್ವಾಮಿ। ನಾನು ರಾಜಕಾರಣಿ। ಎಲ್ಲರೂ ಅಗಿದಗಿದು। ಉಗುಳುವಾ ಪೀಕದಾನಿ!" ಅನುಭವದ ಸಾಧಾರಣತೆಯಿಂದ ಸೂತ್ರದ ಅಸಾಧಾರಣತೆಗೆ ಜಿಗಿಯುವ ಮೋಡಿ ಕುತೂಹಲಕಾರಿಯಾಗಿದೆ. ದಿವಾಣರ ಲೇಖನಿ ವಾಣದಂತೆ (ಶತತಂತ್ರೀವೀಣೆ — ವೇದಕಾಲದ ವಾದ್ಯ; ವೀಣಾ, ವೇಣು, ವಾಣ ಭಾರತದ ಪ್ರಾಚೀನ ವಾದ್ಯ ವಿಶೇಷಗಳು) ಶತ ಮಧುರ ಸ್ವನಗಳನ್ನು ಬಿತ್ತರಿಸಲಿ—ಅಧಿಕ ಕೃಷಿ, ಅಧ್ಯಯನ, ಚಿಂತನ, ಮಂಥನ ನಿರತರಾದಾಗ ಇದು ಸಾಧ್ಯವಾದೀತು.

ಜಿ. ಟಿ. ನಾರಾಯಣರಾವ್



ಕಾಮ, ಕ್ರೋಧ ಹಾಗೂ ಲೋಭಗಳನ್ನು ತ್ಯಾಗ ಮಾಡಿರಿ. ಅವು ಮೂರೂ ಆತ್ಮವನ್ನು ವಿನಾಶದೆಡೆಗೆ ಒಯ್ಯುತ್ತವೆ.

—ಗೀತಾ

ನೀವು ಓದಲೇಬೇಕಾದ ಪುಸ್ತಕಗಳು....

ಯುದ್ಧ ಮತ್ತು ಶಾಂತಿ (3 ಸಂಪುಟಗಳಲ್ಲಿ)

ಶರಣಚರಿತಾಮೃತ

ಪ್ರಥಮ ಚಿಕಿತ್ಸೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನೈಟಿಂಗೇಲ್ ಮತ್ತು ಇತರ ಕಥೆಗಳು

ರಾಮಕೃಷ್ಣ ಪರಮಹಂಸ

ಬಸವಣ್ಣನವರ ಮಾತು

ಹಿಂದೂಧರ್ಮ ಭಾಗ ೧ ಮತ್ತು ೨

ನಾಗರಮರಿ

ಮಹಾಶ್ವೇತೆ

ಅಶೋಕನ ಶಿಲಾ ಶಾಸನಗಳು

ಶ್ರೀಶಂಕರಾಚಾರ್ಯ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

Reg. No. KRNN. 29 / WPP 6

LICENSE No. 21
LICENSED TO POST WITH PAYMENT

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ ರೂ. 3-00
ವಾರ್ಷಿಕ ಚಂದಾ ರೂ. 30-00

ಆಜೀವ ಸದಸ್ಯತ್ವದ ಚಂದಾ ವಿವರ:

ಸಂಸ್ಥೆಗೆ ರೂ. 500-00
ವ್ಯಕ್ತಿಗೆ ರೂ. 300-00

ಕಛೇರಿ ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 520435

Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council, 5/1, Vinoba Road Gangothri Compus, Mysore-570 006.